23 August 2026 Sunday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ವ್ಯಕ್ತಿತ್ವ ಹೆಚ್ಚು ಹಗುರವಾದರೆ ಹಾರಿ ಹೋಗುತ್ತದೆ, ಹಾಗಂತ ತುಂಬಾ ಭಾರವಾದರೆ ಮುಳುಗಿ ಹೋಗುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಹೆಲ್ತ್‌ಸಿಟಿ ಬಡಾವಣೆಯ ಮರು ಅಭಿವೃದ್ಧಿಗೆ ಜನಪ್ರತಿನಿಧಿಗಳಿಂದ ಚಾಲನೆ — ಪುಟ ಸಂ. 2


ವೈಟ್ ಟಾಪಿಂಗ್ ರಸ್ತೆ ಕಾಮಗಾರಿಗೆ ತನ್ವೀರ್ ಸೇಠ್ ಚಾಲನೆ — ಪುಟ ಸಂ. 3


ಮೂವರ ಗುಂಡಿನ ಚಕಮಕಿ ಪ್ರಕರಣ: ತಂತಿ ಬೇಲಿ, ಪ್ರವೇಶ ದ್ವಾರ ಧ್ವಂಸ — ಪುಟ ಸಂ. 4


9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 259 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಮೈಷುಗರ್‌ಗೆ ದನದ ಮೂಳೆ ಸಾಗಾಟ ಶಂಕೆ?

## ನಿರ್ಲಕ್ಷ್ಯ ತೋರಿರುವ ಆಹಾರ ಸುರಕ್ಷತಾ ಅಧಿಕಾರಿಗಳು । ಪೋಲಿಸರ ಬಳಿ ಮಾಹಿತಿಯೇ ಎಂದು ದೂರಿರುವ ಸಾರ್ವಜನಿಕರು

**ಮಂಡ್ಯ:** ಸತ್ತ ದನಗಳ ಮೂಳೆಗಳನ್ನು ಮೈಸೂರು ಸಕ್ಕರೆ ಕಾರ್ಖಾನೆಗೆ ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋವೊಂದು ಇದೀಗ ಭಾರೀ ವಿವಾದಕ್ಕೆ ನಾಂದಿ ಹಾಡಿದೆ ಭೈರಪಟ್ಟಣದ ದೊಡ್ಡಮಳ್ಳೂರಿ ನಿಂದ ಗೂಡ್ಸ್ (ಎಂ–04–ಎಎ–6071) ವಾಹನದಲ್ಲಿ, ಅಪಾರ ಪ್ರಮಾಣದ ಪ್ರಾಣಿಗಳ ಮೂಳೆಗಳನ್ನು ತುಂಬಿಕೊಂಡು ಸಾಗಿಸಲಾಗುತ್ತಿತ್ತು. ಇದನ್ನು ಗಮನಿಸಿದ ಸ್ಥಳೀಯರು ವಾಹನವನ್ನು ತಡೆದು ಚಾಲಕನನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

ಸಾರ್ವಜನಿಕರ ಪ್ರಶ್ನೆಗೆ ಉತ್ತರಿಸಿದ ಚಾಲಕ, ಈ ಮೂಳೆಗಳನ್ನು ನಾಗಮಂಗಲ ಭಾಗದ ಖಾಸಗಿ ಸಕ್ಕರೆ ಕಾರ್ಖಾನೆಯೊಂದಕ್ಕೆ ಕೊಂಡೊಯ್ಯಲಾಗುತ್ತಿದೆ ಎಂದು ಹೇಳಿಕೆ ನೀಡಿದ್ದಾನೆ ಎನ್ನಲಾದ ದೃಶ್ಯಗಳು ವಿಡಿಯೋದಲ್ಲಿ ದಾಖಲಾಗಿವೆ.

ಆದರೆ, ಸಕ್ಕರೆ ಉತ್ಪಾದನೆ ಅಥವಾ ಸಂಸ್ಕರಣಾ ಪ್ರಕ್ರಿಯೆಯಲ್ಲಿ ಪ್ರಾಣಿಗಳ ಮೂಳೆಗಳ ಬಳಕೆ ನಿಷೇಧಿತ ಹಾಗೂ ನಿಯಮಬಾ ಹಿರವಾಗಿದೆ.





### ಕಣ್ಣು ಮುಚ್ಚಿಕುಳಿತಿರುವ ಆಹಾರ ಸುರಕ್ಷತಾ ಇಲಾಖೆ ?

**ಆಹಾರ ಪದಾರ್ಥಗಳ ಸಂಸ್ಕರಣೆ ಅಥವಾ ಸಕ್ಕರೆ ಕಾರ್ಖಾನೆಗಳ ಆವರಣಕ್ಕೆ ಇಂತಹ ತ್ಯಾಜ್ಯ ಪ್ರಾಣಿಜನ್ಯ ವಸ್ತುಗಳು ಸಾಗಣೆಯಾಗುವುದು ಸಾರ್ವಜನಿಕರ ಆರೋಗ್ಯ ಮತ್ತು ನೈರ್ಮಲ್ಯದ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮ ಹಾಗೂ ಗಂಭೀರ ವಿಚಾರವಾಗಿದೆ.**

ಈ ಸರಕು ವಾಸ್ತವವಾಗಿ ಕಾರ್ಖಾನೆಯ ಯಾವ ಉದ್ದೇಶಕ್ಕೆ ಹೋಗುತ್ತಿತ್ತು ಎಂಬುದು ಇನ್ನೂ ನಿಖರವಾಗಿ ದೃಢಪಟ್ಟಿಲ್ಲ. ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಅಧಿಕಾರಿಗಳು ತಕ್ಷಣವೇ ಈ ಕುರಿತು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ವಾಹನ, ಅದರ ಮಾಲೀಕರು ಮತ್ತು ಮೂಳೆ ಗಳನ್ನು ರವಾನಿಸಿದ ಮೂಲದ ಬಗ್ಗೆ ಸೂಕ್ತ ಪರಿಶೀಲನೆ ನಡೆಸಬೇಕಿದೆ. ನಾಗಮಂಗಲದ ಸಂಬಂಧಪಟ್ಟ ಕಾರ್ಖಾನೆಯ ಆಡಳಿತ ಮಂಡಳಿಯನ್ನು ಪುಟ 2ಕ್ಕೆ





## ತಮಿಳುನಾಡಿನಲ್ಲಿ 'ಸೋದರಮಾವ ಚಿನ್ನದ ಉಂಗುರ' ಯೋಜನೆ ಜಾರಿ

**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ವಿಜಯ್ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹುಟ್ಟುವ ಮಕ್ಕಳಿಗೆ ಭರ್ಜರಿ ಗಿಫ್ಟ್ ನೀಡಿದ್ದಾರೆ.

ನವಜಾತ ಶಿಶುಗಳಿಗೆ 'ಸೋದರ ಮಾವ ಚಿನ್ನದ ಉಂಗುರ' ಯೋಜನೆಯಡಿ ಚಿನ್ನದ ಉಂಗುರಗಳನ್ನು ಖರೀದಿ ಸಲು ತಮಿಳುನಾಡು ಸರ್ಕಾರ ಇಬ್ಬರು ಆಭರಣ ವ್ಯಾಪಾರಿಗಳಿಗೆ ಕೆಲಸದ ಆದೇಶ ನೀಡಿದೆ. 'ತಾಯ್ಮಾ ಮನ್ ತಂಗ ಮೊದಿರಂ ತಿಟ್ಟಂ' ಅಥವಾ 'ಸೋದರಮಾವ ಚಿನ್ನದ ಉಂಗುರ ಯೋಜನೆ'ಯಡಿಯಲ್ಲಿ ತಮಿಳುನಾಡು ಸರ್ಕಾರವು ಸುಮಾರು 1.28 ಲಕ್ಷ ಚಿನ್ನದ ಉಂಗುರಗಳನ್ನು ಸಿದ್ಧಪಡಿಸಲು ಆದೇಶ ಹೊರಡಿಸಿದೆ. ಈ ಉಂಗುರುಗಳ ಒಟ್ಟು ಬೆಲೆ ಸುಮಾರು 220 ಕೋಟಿ ರೂ. ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಈ ಯೋಜನೆಗೆ ಮಾಜಿ ಮುಖ್ಯಮಂತ್ರಿ ಸಿ.ಎನ್. ಅಣ್ಣಾದೊರೈ ಅವರ ಜನ್ಮದಿನ ವಾದ ಸೆ.15ರಂದು ಚಾಲನೆ ನೀಡಲು ನಿರ್ಧರಿಸಲಾಗಿದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಫಲಾನುಭವಿಗಳಿಗೆ ಅಗತ್ಯವಿರುವ 1,28,499 ಚಿನ್ನದ ಉಂಗುರಗಳನ್ನು ಪೂರೈಸಲು ತಮಿಳುನಾಡು ವೈದ್ಯಕೀಯ ಸೇವೆಗಳ ನಿಗಮವು ಜಾಯ್ ಅಲುಕ್ಕಾಸ್ ಮತ್ತು ಕಲ್ಯಾಣ್ ಜ್ಯುವೆಲ್ಲರ್ಸ್‌ಗೆ 70:30 ಅನುಪಾತದಲ್ಲಿ ಕೆಲಸದ ಆದೇಶ ನೀಡಿದೆ ಎಂದು ಸರ್ಕಾರ ತಿಳಿಸಿದೆ. ಒಂದು ಗ್ರಾಂ ತೂಕದ 4,41,667 ಚಿನ್ನದ ಉಂಗುರಗಳನ್ನು ಪೂರೈಸಲು ಸರ್ಕಾರ ಟೆಂಡರ್ ಕರೆದಿತ್ತು. ಅದರಂತೆ ಜುಲೈ 14ರಂದು ತಮಿಳುನಾಡು ವೈದ್ಯ ಕೀಯ ಸೇವೆಗಳ ನಿಗಮದ ಟೆಂಡರ್‌ನಲ್ಲಿ 11 ಕಂಪನಿಗಳು ಭಾಗವಹಿಸಿ, ತಮ್ಮ ಬೆಲೆ ವಿವರಗಳನ್ನು ಟಿಎನ್ ಟೆಂಡರ್ಸ್ ಪೋರ್ಟಲ್ ಮೂಲಕ ಸಲ್ಲಿಸಿದ್ದವು ಎಂದು ಪ್ರಕಟಣೆ ತಿಳಿಸಿದೆ.

## ನಾಗೇಂದ್ರ ಪ್ರಕರಣ: ವಿಪಕ್ಷಗಳ ವಿರುದ್ಧ ದಿನೇಶ್ ಗುಂಡೂರಾವ್ ಆಕ್ಷೇಪ

**ಬೆಂಗಳೂರು:** ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಚಿವ ಬಿ.ನಾಗೇಂದ್ರ ಅವರ ವಜಾಗೆ ಬಿಜೆಪಿ ಆಗ್ರಹಿಸುತ್ತಿರುವುದನ್ನು ಮಾಜಿ ಸಚಿವ ದಿನೇಶ್ ಗುಂಡೂರಾವ್ ಟೀಕಿಸಿದ್ದಾರೆ.



ನಾಗೇಂದ್ರ ವಿರುದ್ಧ ಈ ಹಿಂದೆ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆದರೆ ತನಿಖೆಯಲ್ಲಿ ಅವರ ತಪ್ಪಿಲ್ಲ ಎಂಬುದು ತಿಳಿದುಬಂದಿರುವುದರಿಂದ ಅವರನ್ನು ಮತ್ತೆ ವಜಾಗೊಳಿಸುವಂತೆ ಒತ್ತಾಯಿಸುವುದು ಸರಿಯಲ್ಲ ಎಂದು ಗುಂಡೂರಾವ್ ಹೇಳಿದ್ದಾರೆ. ಪುಟ 2ಕ್ಕೆ

## ಮುಡಾ ಹಗರಣ : 1,100 ನಿವೇಶನಗಳ ವಿವರಕ್ಕೆ ರಘು ಆಗ್ರಹ

**ಮೈಸೂರು:** ಮುಡಾ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪ್ರತಿಯಾಗಿ 50:50ರ ಅನುಪಾತದಲ್ಲಿ ಹಂಚಿಕೆಯಾಗಿದ್ದ 1,100 ಬದಲಿ ನಿವೇಶನಗಳನ್ನು ನಗರಾಭಿವೃದ್ಧಿ ಇಲಾಖೆ ರದ್ದುಪಡಿಸಿರುವುದು ಸ್ವಾಗತಾರ್ಹ ಎಂದು ವಿಧಾನಪರಿಷತ್ ಸದಸ್ಯ ಆರ್. ರಘು (ಕೌಟಿಲ್ಯ) ಹೇಳಿದ್ದಾರೆ.


ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರದ್ದುಗೊಂಡಿರುವ ನಿವೇಶನಗಳು ಯಾವುವು, ಎಲ್ಲೆಲ್ಲಿ ಇವೆ ಹಾಗೂ ಯಾರಿಗೆ ಹಂಚಿಕೆಯಾಗಿದ್ದವು ಪುಟ 2ಕ್ಕೆ

## ಐಎಎಸ್ ಅಧಿಕಾರಿ ನಿಗೂಢ ಕಣ್ಮರೆ ಪ್ರಕರಣಕ್ಕೆ ಬಿಗ್‌ಟ್ವಿಸ್ಟ್

# ನಾಪತ್ತೆ ಆಗಿಲ್ಲ: ಗೃಹ ಸಚಿವ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ್ದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಬೃಹತ್ ಅಕ್ರಮ ಹಾಗೂ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ದಂತೆ ಜಾರಿ ನಿರ್ದೇಶನಾಲಯ ಕರ್ನಾಟಕದ 21ಕ್ಕೂ ಹೆಚ್ಚು ಸ್ಥಳಗಳಲ್ಲಿ ಏಕಕಾಲಕ್ಕೆ ಬೃಹತ್ ಶೋಧ ಕಾರ್ಯಾಚರಣೆ ನಡೆಸಿತ್ತು.

ಕೆಪಿಎಸ್‌ಸಿ ಮೇಲೂ ಇಡಿ ಅಧಿಕಾರಿಗಳು ದಾಳಿ ನಡೆಸಿ ತೀವ್ರ ಶೋಧ ನಡೆಸಿದ್ದರು. ಈ ದಾಳಿ ಬೆನ್ನಲ್ಲೇ ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ಪರೀಕ್ಷೆ ನಡೆಸಿದ್ದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ನಿಗೂಢವಾಗಿ ನಾಪತ್ತೆಯಾಗಿದ್ದು, ಹಲವು ಅನುಮಾನಗಳಿಗೆ ಕಾರಣವಾಗಿದೆ. ಇನ್ನು ಈ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಅವರು ನಾಪತ್ತೆಯಾಗಿಲ್ಲ ಎಂದು ತಿಳಿಸಿದ್ದಾರೆ.



ಸುದ್ದಿಗಾರರೊಂ ದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಜೊತೆ ನಾನೇ ಖುದ್ದು ಮಾತ ನಾಡಿದ್ದೇನೆ. ಅವರು ನಾಪತ್ತೆಯಾಗಿಲ್ಲ. ಅವರ ತಂದೆಗೆ ಅನಾರೋಗ್ಯವಾಗಿದ್ದರಿಂದ ಅವರು ತಮ್ಮ ಊರಾದ ಉತ್ತರ ಪ್ರದೇಶಕ್ಕೆ ಹೋಗಿ ದ್ದಾರೆ. ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ಸುದ್ದಿಯಂತೆ ಅವರು ನಾಪತ್ತೆಯಾಗಿಲ್ಲ ಎಂದು ಗೃಹ ಸಚಿವರು ಸ್ಪಷ್ಟಪಡಿಸಿದರು.

### ಊರಿಗೆ ಹೋಗಿದ್ದಾರೆ

**ತುರ್ತು ಕಾರಣಕ್ಕೆ ತಮ್ಮ ಊರಿಗೆ ಹೋಗಿದ್ದು, ಇನ್ನೆರಡು ದಿನದಲ್ಲಿ ವಾಪಸ್ ಬರುವುದಾಗಿ ಹೇಳಿ ದ್ದಾರೆ. ಸರ್ಕಾರಿ ಅಧಿಕಾರಿಯಾಗಿರುವುದರಿಂದ ಯಾವುದೇ ತನಿಖೆ ವಿಚಾರಣೆಗೂ ಸಿದ್ಧ ಎಂದು ತಿಳಿಸಿದ್ದಾರೆ ಎಂದರು. ಈ ಹಿಂದೆ ಜ್ಞಾನೇಂದ್ರ ಕುಮಾರ್ ಕೆಪಿಎಸ್‌ಸಿ ಯಲ್ಲಿ ಕಾರ್ಯನಿರ್ವಹಿಸಿದ್ದರು. ಈಗ ಕೆಪಿಎಸ್ ಸಿ ಹಗರಣ ಸಂಬಂಧ ಇಡಿ ದಾಳಿ, ತನಿಖೆ ನಡೆಯುತ್ತಿದೆ. ಇದೇ ಕಾರಣಕ್ಕೆ ಭಯಗೊಂಡು ನಾಪತ್ತೆಯಾಗಿದ್ದಾರೆ ಎಂದು ಸುದ್ದಿಯಾಗುತ್ತಿದೆ. ಆದರೆ ಅವರ ವಿರುದ್ಧ ಅಂತಹ ಯಾವುದೇ ಆರೋಪಗಳು ಇಲ್ಲ. ಯಾವುದೇ ಕೇಸ್ ಕೂಡ ಅವರ ಮೇಲಿಲ್ಲ. ಹಾಗೊಂದು ವೇಳೆ ವಿಚಾರ ಣೆಗಳಿದ್ದರೆ ತನಿಖೆಯಾಗಲಿ ಎಂದು ಅವರು ತಿಳಿಸಿ ದ್ದಾರೆ ಎಂದು ಖರ್ಗೆ ಹೇಳಿದರು.**

## ನಿರ್ದೇಶಕ ಓಂಪ್ರಕಾಶ್ ರಾವ್ ವಿರುದ್ಧ 3 ಕೋಟಿ ರೂ ವಂಚನೆ: ದೂರು ದಾಖಲು

**ಬೆಂಗಳೂರು:** ನಿರ್ದೇಶಕ ಹಾಗೂ ನಟ ಓಂಪ್ರಕಾಶ್ ರಾವ್ ವಿರುದ್ಧ 3.85 ಕೋಟಿ ರೂ. ವಂಚನೆ ಆರೋಪ ಕೇಳಿಬಂದಿದೆ.

ಈ ಸಂಬಂಧ ನಟ ಭಾಸ್ಕರ್ ಶೆಟ್ಟಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರಿಗೆ ದೂರು ಸಲ್ಲಿಸಿದ್ದು, ನಿರ್ದೇಶಕರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಇದೇ ಪ್ರಕರಣ ಸಂಬಂಧ ವಾಸುದೇವರೆಡ್ಡಿ, ಭಾಸ್ಕರ್ ಶೆಟ್ಟಿ, ವಸಂತಮ್ಮ ಹಾಗೂ ಜಯಲಕ್ಷ್ಮಿ ಎಂಬುವರು ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಫೀನಿಕ್ಸ್' ಸಿನಿಮಾ ನಿರ್ಮಾಣಕ್ಕಾಗಿ ಹಂತ ಹಂತವಾಗಿ ಒಟ್ಟು 3 ಕೋಟಿ 85 ಲಕ್ಷ ಹಣ ಪಡೆದು, ಹಣ ವಾಪಸ್ ನೀಡದೇ ವಂಚಿಸಿದ್ದಾರೆ ಎಂದು ದೂರುದಾರರು ಆರೋಪಿಸಿದ್ದಾರೆ.

ಹಣ ವಾಪಸ್ ಕೇಳಲು ಮನೆಗೆ ತೆರಳಿದ್ದ ಸಂದರ್ಭದಲ್ಲಿ ದೂರುದಾರರಿಗೆ ಬೆದರಿಕೆ ಕೂಡ ಹಾಕಲಾಗಿದೆ ಎಂದು ದೂರಿನಲ್ಲಿ ಉಲ್ಲೇಖವಾಗಿದೆ.

ದೂರಿನ ಪ್ರಕಾರ, ಭಾಸ್ಕರ್ ಅವರು ಈ ಹಿಂದೆ ನಟ ದರ್ಶನ್ ಅವರ 'ಯೋಧ' ಚಿತ್ರದಲ್ಲಿ ಓಂ ಪ್ರಕಾಶ್ ರಾವ್ ಅವರೊಂದಿಗೆ ಕೆಲಸ ಮಾಡಿದ್ದರು. ಆ ಚಿತ್ರದ ಕೆಲಸದ



ಮೂಲಕ ಇವರಿಬ್ಬರಿಗೂ ಪರಸ್ಪರ ಪರಿಚಯವಿತ್ತು. ಓಂ ಪ್ರಕಾಶ್ ರಾವ್ ಅವರು ಮತ್ತೊಂದು ಚಿತ್ರಕ್ಕಾಗಿ ಆರ್ಥಿಕ ನೆರವು ಕೋರಿದಾಗ, ಈ ಹಿಂದಿನ ವೃತ್ತಿಪರ ಪರಿಚಯದ ಕಾರಣದಿಂದಾಗಿ ಭಾಸ್ಕರ್ ಅವರು ನಿರ್ದೇಶಕರನ್ನು ನಂಬಿದ್ದರು ಎಂದು ಆರೋಪಿಸಲಾಗಿದೆ

ಭಾಸ್ಕರ್ ಶೆಟ್ಟಿ ಅವರಿಂದ 40 ಲಕ್ಷ ರೂ.ಗಳನ್ನು ಪಡೆಯಲಾಗಿತ್ತು ಮತ್ತು ವಾಸುದೇವ ಎಂಬುವವರಿಂದ 3 ಕೋಟಿ ರೂ.ಗಿಂತ ಹೆಚ್ಚಿನ ಹಣವನ್ನು ಪಡೆಯಲಾಗಿತ್ತು. ಈ ಹಣ ವಾಪಸ್ ಕೇಳಿದಾಗ ಅದನ್ನು ಮರುಪಾವತಿಸಿದೆ, ವಂಚಿಸಿದ್ದಾರೆ ಎಂದು ದೂರಿದ್ದಾರೆ.

## ಆರ್ಥಿಕ ದುರ್ಬಲ ದಂಪತಿಗಳಿಗೆ ಆಯುಷ್ಮಾನ್ ಯೋಜನೆಯಲ್ಲಿ ಐವಿಎಫ್ ಚಿಕಿತ್ಸೆಗೆ ಸರ್ಕಾರ ಅಸ್ತು..!

**ಚಿತ್ರದುರ್ಗ:** ಕರ್ನಾಟಕ ಸರ್ಕಾರವು ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಮಹತ್ವದ ನೆರವು ನೀಡುವ ನಿಟ್ಟಿನಲ್ಲಿ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಚಿಕಿತ್ಸಾ ವಿಧಾನಗಳನ್ನು ಆಯುಷ್ಮಾನ್ ಭಾರತ್–ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ–ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ ಯೋಜನೆಯ ವ್ಯಾಪ್ತಿಗೆ ಸೇರ್ಪಡೆಗೊಳಿಸಿದೆ.

ಇದರಿಂದ ಇನ್ಮುಂದೆ ಐವಿಎಫ್ ಇಂಟ್ರಾಸೈಟೋಪ್ಲಾಸ್ಮಿಕ್ ಸ್ಪರ್ಮ್ ಇಂಜೆಕ್ಷನ್ (ICSI) ಹಾಗೂ ಫ್ರೋಜನ್ ಎಂಬ್ರಿಯೋ ಟ್ರಾನ್ಸ್‌ಫರ್ (FET) ಸೇರಿದಂತೆ ಹಲವು ಸಂತಾನೋತ್ಪತ್ತಿ ಚಿಕಿತ್ಸೆಗಳು ಯೋಜನೆಯಡಿ ಲಭ್ಯವಾಗಲಿವೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರು ವಿಧಾನ ಪರಿಷತ್‌ನಲ್ಲಿ ಎಂಎಲ್‌ಸಿ ಡಾ. ಧನಂಜಯ್ ಸರ್ಜಿ ಕೇಳಿದ ಪ್ರಶ್ನೆಗೆ



ನೀಡಿದ ಉತ್ತರದಲ್ಲಿ ಈ ಮಾಹಿತಿ ನೀಡಿದ್ದಾರೆ.

ಮೊದಲ ಹಂತದಲ್ಲಿ ಈ ಯೋಜನೆಯನ್ನು ಒಂದು ವರ್ಷದ ಪ್ರಾಯೋಗಿಕ ಯೋಜನೆಯಾಗಿ ಜಾರಿಗೊಳಿಸಲಾಗುತ್ತಿದ್ದು, 120 ಆದ್ಯತಾ ಕುಟುಂಬ (PHH) ಹಾಗೂ ಬಡತನ ರೇಖೆಗಿಂತ ಕೆಳಗಿನ (BPL) ಪಡಿತರ ಚೀಟಿದಾರರಿಗೆ ಇದರ ಪ್ರಯೋಜನ ದೊರೆಯಲಿದೆ.

## ಮುಂಬೈ ಇಂಡಿಯನ್‌ಗೆ ಜುಬಿನ್ ಭರುಚಾ ಸೇರ್ಪಡೆ

**ಮುಂಬೈ:** ಐಪಿಎಲ್ 2027ರ ಮುನ್ನ ಮುಂಬೈ ಇಂಡಿಯನ್ಸ್ ತಂಡ ಮಹತ್ವದ ಬದಲಾವಣೆ ಮಾಡಿಕೊಂಡಿದೆ. ರಾಜಸ್ಥಾನ್ ರಾಯಲ್ಸ್‌ನ ಮಾಜಿ ಕ್ರಿಕೆಟ್ ಕಾರ್ಯಾಚರಣೆಗಳ ನಿರ್ದೇಶಕ ಜುಬಿನ್ ಭರುಚಾ ಅವರನ್ನು ಪ್ರದರ್ಶನ ನಿರ್ದೇಶಕರಾಗಿ ನೇಮಿಸಲಾಗಿದೆ.

ಭರುಚಾ ಅವರು ಮುಖ್ಯ ಕೋಚ್ ಮಹೇಲಾ ಜಯವರ್ಧನೆ ಹಾಗೂ ಸಹಾಯಕ ಸಿಬ್ಬಂದಿಯೊಂದಿಗೆ ಕೆಲಸ ಮಾಡಲಿದ್ದು, ಯುವ ಆಟಗಾರರ ಪ್ರತಿಭೆ ಗುರುತಿಸಿ ಅವರ ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡಲಿದ್ದಾರೆ.

ರಾಜಸ್ಥಾನ್ ರಾಯಲ್ಸ್‌ನಲ್ಲಿದ್ದ ಅವಧಿಯಲ್ಲಿ ಸಂಜು ಸ್ಯಾಮ್ಸನ್, ರಿಯಾನ್ ಪರಾಗ್, ಯಶಸ್ವಿ ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಸೇರಿದಂತೆ ಹಲವು ಯುವ ಆಟಗಾರರ ಬೆಳವಣಿಗೆಯಲ್ಲಿ ಭರುಚಾ ಪ್ರಮುಖ ಪಾತ್ರ ವಹಿಸಿದ್ದರು. 2026ರವರೆಗೆ ರಾಜಸ್ಥಾನ್ ತಂಡದ ಕ್ರಿಕೆಟ್ ಕಾರ್ಯಾಚರಣೆಗಳ ನಿರ್ದೇಶಕರಾಗಿ ಅವರು ಸೇವೆ ಸಲ್ಲಿಸಿದ್ದರು.

## ಎಫ್‌ಡಿಎ, ಎಸ್‌ಡಿಎ ನೇಮಕಾತಿ ನಿಯಮ ಬದಲಾವಣೆ: ಹೊಸ ಅಧಿಸೂಚನೆ

**ಬೆಂಗಳೂರು:** ರಾಜ್ಯದ ವಿವಿಧ ಇಲಾಖೆಗಳಲ್ಲಿನ ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರ ಹೊಸ ತಿದ್ದುಪಡಿ ನಿಯಮಗಳ ಕರಡು ಅಧಿಸೂಚನೆ ಪ್ರಕಟಿಸಿದೆ. ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದ್ದು, ಬಳಿಕ ಅಂತಿಮ ಅಧಿಸೂಚನೆ ಹೊರಬೀಳಲಿದೆ.

ಹೊಸ ನಿಯಮಗಳ ಪ್ರಕಾರ ಎರಡೂ ಪತ್ರಿಕೆಗಳಿಗೆ ಋಣಾತ್ಮಕ ಅಂಕಗಳು ಅನ್ವಯವಾಗಲಿದ್ದು, ಪ್ರತಿ ತಪ್ಪು ಉತ್ತರಕ್ಕೆ ನಿಗದಿತ ಅಂಕಗಳ ನಾಲ್ಕನೇ ಒಂದು ಭಾಗ ಕಡಿತವಾಗಲಿದೆ. ಅಭ್ಯರ್ಥಿಗಳು ಅರ್ಹತೆ ಪಡೆಯಲು



ಕನಿಷ್ಠ 35% ಅಂಕ ಗಳಿಸಬೇಕು.

ಪರೀಕ್ಷೆಯ ಅವಧಿಯನ್ನು ಹಿಂದಿನ 90 ನಿಮಿಷಗಳಿಂದ 2 ಗಂಟೆಗೆ ಹೆಚ್ಚಿಸಲಾಗಿದ್ದು, ಪ್ರತಿ ಪತ್ರಿಕೆಗೆ 120 ನಿಮಿಷಗಳ ಸಮಯ ನಿಗದಿಪಡಿಸಲಾಗಿದೆ.

ಸಹಾಯಕ ಹಾಗೂ ಎಫ್‌ಡಿಎ ಸಮಾನ ಹುದ್ದೆಗಳಿಗೆ ಪದವಿ, ಎಸ್‌ಡಿಎ ಪುಟ 2ಕ್ಕೆ

## ವಂದೇ ಮಾತರಂ ಗೌರವಕ್ಕೆ ಧಕ್ಕೆ: ಬಿಜೆಪಿ ಕಿಡಿ

**ನವದೆಹಲಿ:** 'ವಂದೇ ಮಾತರಂ' ಗೀತೆಯ ಪೂರ್ಣ ಸ್ವರೂಪ ಮತ್ತು ಗೌರವವನ್ನು ಕಾಯ್ದುಕೊಳ್ಳುವ ವಿಚಾರದಲ್ಲಿ ಯಾವುದೇ ರಾಜಿಗೆ ಸಿದ್ಧವಿಲ್ಲ ಎಂದು ಬಿಜೆಪಿ ಸ್ಪಷ್ಟಪಡಿಸಿದೆ. ಬಿಜೆಪಿ ಕಾರ್ಯಾಧ್ಯಕ್ಷ ನಿತಿನ್ ನವೀನ್ ಅಧ್ಯಕ್ಷತೆಯಲ್ಲಿ ನಡೆದ ನೂತನ ಪದಾಧಿಕಾರಿಗಳ ಸಭೆಯಲ್ಲಿ, ವಂದೇ ಮಾತರಂ ಗೀತೆಯನ್ನು ಮೊದಲ ಎರಡು ಚರಣಗಳಿಗೆ ಮಾತ್ರ ಸೀಮಿತಗೊಳಿಸಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ 1937ರ ಹಳೆಯ ನಿರ್ಣಯದ ಪುನರುಚ್ಚಾರವನ್ನು ಕಡಾಖಂಡಿತವಾಗಿ ಖಂಡಿಸಿ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ.

ರಾಷ್ಟ್ರಗೀತೆಯ ಇತಿಹಾಸ, ಮಹತ್ವ ಮತ್ತು ಅದರ 6 ಚರಣಗಳ ಸಂಪೂರ್ಣ ವೈಭವವನ್ನು ದೇಶಾದ್ಯಂತ ಯುವ ಪೀಳಿಗೆಗೆ ತಲುಪಿಸಲು ಬಿಜೆಪಿ ಬೃಹತ್ ಜಾಗೃತಿ ಅಭಿಯಾನವನ್ನು ಆರಂಭಿಸಲಿದೆ. ಸ್ವಾತಂತ್ರ್ಯ



ಸಂಗ್ರಾಮದಲ್ಲಿ ಈ ಗೀತೆಯ ಪಾತ್ರ ಹಾಗೂ ಮಹಾತ್ಮ ಗಾಂಧೀಜಿಯವರು ಇದನ್ನು 'ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆ' ಎಂದು ಬಣ್ಣಿಸಿದ್ದನ್ನು ಸಾರ್ವಜನಿಕರಿಗೆ ತಿಳಿಸಿಕೊಡಲಾಗುವುದು. ರಾಷ್ಟ್ರೀಯ ಗೀತೆಯ ಗೌರವ ಹಾಗೂ ಪರಂಪರೆಯನ್ನು ಕಾಯ್ದುಕೊಳ್ಳಲು ತಮ್ಮ ಪಕ್ಷ ಸಂಪೂರ್ಣ ಬದ್ಧವಾಗಿದೆ ಎಂದು ನಿತಿನ್ ನವೀನ್ ಪ್ರಕಟಿಸಿದ್ದಾರೆ.

## ದಸರಾ 2026: ಮುಂದಿನ ಅಂಬಾರಿ ಆನೆ ಯಾರು?

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿಗೆ ಸಿದ್ಧತೆಗಳು ಆರಂಭವಾಗಿದ್ದು, ಈ ಬಾರಿ ಚಿನ್ನದ ಅಂಬಾರಿ ಹೊರುವ ಗಜರಾಜ ಯಾರು ಎಂಬ ಕುತೂಹಲ ಹೆಚ್ಚಾಗಿದೆ. ಕಳೆದ ಆರು ವರ್ಷಗಳಿಂದ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯನ್ನು ಯಶಸ್ವಿಯಾಗಿ ಹೊತ್ತಿದ್ದ ಅಭಿಮನ್ಯು ನಿವೃತ್ತಿಯಾಗಿರುವ ಹಿನ್ನೆಲೆಯಲ್ಲಿ ಹೊಸ ಕ್ಯಾಪ್ಟನ್ ಆಯ್ಕೆ ನಡೆಯಲಿದೆ.

60 ವರ್ಷ ದಾಟಿದ ಹಿನ್ನೆಲೆಯಲ್ಲಿ ಹಾಗೂ ಶಿಬಿರದಲ್ಲಿ ದಂತ ಮುರಿದಿರುವ ಕಾರಣ ಅಭಿಮನ್ಯುವನ್ನು ಈ ಬಾರಿ ಅಂಬಾರಿ ಹೊರುವ ಜವಾಬ್ದಾರಿಯಿಂದ ಕೈಬಿಡಲಾಗಿದೆ. ಆದರೆ 2026ರ ದಸರೆಯಲ್ಲಿ ಅಭಿಮನ್ಯು ನಿಶಾನೆ ಆನೆಯಾಗಿ ಜಂಬೂ ಸವಾರಿಯಲ್ಲಿ ಭಾಗವಹಿಸಲಿದ್ದಾನೆ. ಇದು ಆತನಿಗೆ ನೀಡಲಾಗುತ್ತಿರುವ ಗೌರವಪೂರ್ವಕ ವಿದಾಯವಾಗಲಿದೆ.



### ಆಗಸ್ಟ್ 26ರಿಂದ ಗಜಪಯಣ

ದಸರಾ ಮಹೋತ್ಸವಕ್ಕಾಗಿ ನಾಗರಹೊಳೆ ವ್ಯಾಪ್ತಿಯ ವೀರನಹೊಸಹಳ್ಳಿಯಿಂದ ಆಗಸ್ಟ್ 26ರಂದು ಮೊದಲ ಹಂತದ ಗಜಪಯಣ ಆರಂಭವಾಗಲಿದೆ. ಆಗಸ್ಟ್ 28ರಂದು ಶುಭ ತುಲಾ ಲಗ್ನದಲ್ಲಿ ಆನೆಗಳು ಮೈಸೂರು ಅರಮನೆಯ ಜಯ ಮಾರ್ತಾಂಡ ದ್ವಾರದ ಮೂಲಕ ಪ್ರವೇಶಿಸಲಿವೆ.

ಮೊದಲ ಹಂತದಲ್ಲಿ ಧನಂಜಯ, ಪ್ರಶಾಂತ, ಗೋಪಿ, ಶ್ರೀರಾಮ, ಸುಗ್ರೀವ, ಕಾವೇರಿ, ಮಹೇಂದ್ರ, ಲಕ್ಷ್ಮೀ ಹಾಗೂ ಏಕಲವ್ಯ ಆಗಮಿಸಲಿದ್ದಾರೆ. ಪುಟ 2ಕ್ಕೆ

### ನಾಲ್ವರು ಆನೆಗಳ ನಡುವೆ ಪೈಪೋಟಿ

ಅಭಿಮನ್ಯುವಿನ ಉತ್ತರಾಧಿಕಾರಿಯಾಗಿ ಧನಂಜಯ, ಮಹೇಂದ್ರ, ಪ್ರಶಾಂತ ಹಾಗೂ ಏಕಲವ್ಯ ಆನೆಗಳನ್ನು ಪರಿಗಣಿಸಲಾಗಿದೆ. 45 ವರ್ಷದ ಧನಂಜಯ ದಸರೆಯಲ್ಲಿ ಎಂಟು ವರ್ಷಕ್ಕೂ ಹೆಚ್ಚು ಕಾಲ ಭಾಗವಹಿಸಿರುವ ಅನುಭವ ಹೊಂದಿದ್ದು, ಸದ್ಯ ಮೊದಲ ಆಯ್ಕೆಯಾಗಿ ಗುರುತಿಸಿಕೊಂಡಿದ್ದಾನೆ. 42 ವರ್ಷದ ಮಹೇಂದ್ರ, 54 ವರ್ಷದ ಪ್ರಶಾಂತ ಹಾಗೂ 41 ವರ್ಷದ ಏಕಲವ್ಯ ಕೂಡ ಅಂಬಾರಿ ಹೊರುವ ಸಾಮರ್ಥ್ಯ ಹೊಂದಿರುವ ಆನೆಗಳಾಗಿವೆ.

ಅರಣ್ಯ ಇಲಾಖೆಯ ಪ್ರಕಾರ, ನಾಲ್ಕೂ ಆನೆಗಳಿಗೆ ಪುಟ 2ಕ್ಕೆ

# ಹೆಲ್ತ್‌ಸಿಟಿ ಬಡಾವಣೆಯ ಮರು ಅಭಿವೃದ್ಧಿಗೆ ಜನಪ್ರತಿನಿಧಿಗಳಿಂದ ಚಾಲನೆ

ರಾಮನಗರ: ಅರ್ಚಕರಹಳ್ಳಿಯ ಬಳಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದವತಿಯಿಂದ ನಿರ್ಮಾಣವಾಗಿದ್ದ 16 ವರ್ಷಗಳ ಹಿಂದೆ ರಚನೆಯಾಗಿ ನೆನೆಗುದಿಗೆ ಬಿದ್ದಿದ್ದ ಹೆಲ್ತ್‌ಸಿಟಿ ವಸತಿ ಬಡಾವಣೆಯ ಮರು ಅಭಿವೃದ್ಧಿ ಕಾಮಗಾರಿಗೆ ಚಾಲನೆ ಸಿಕ್ಕಿದೆ. ಶ್ರೀಘ್ರ ಇಲ್ಲಿನ ನಿವೇಶನ ಮಾಲೀಕರಿಗೆ ಹಕ್ಕು ಪತ್ರಗಳನ್ನು ವಿತರಿಸುವ ವಿಚಾರದಲ್ಲಿ ಚುನಾಯಿತ ಪ್ರತಿನಿಧಿಗಳು ಭರವಸೆ ನೀಡಿದ್ದಾರೆ.

ಬಡಾವಣೆಯ ಮರು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಬಾಲಕೃಷ್ಣ, 2009ರಲ್ಲಿ ರಾಮನಗರ ಕ್ಷೇತ್ರದ ಶಾಸಕರಾಗಿದ್ದ ಕುಮಾರಸ್ವಾಮಿ ಅವರ ಅಧಿಕಾರವಧಿಯಲ್ಲಿ ಹೆಲ್ತ್‌ಸಿಟಿ ಬಡಾವಣೆ ನಿರ್ಮಾಣವಾಗಿದೆ. ತದನಂತರ ಈ ಬಡಾವಣೆ ತ್ರಿಶಂಕು ಸ್ಥಿತಿಯಲ್ಲಿತ್ತು. ಅಭಿವೃದ್ಧಿ ಮಾಡುವ ರಾಜಕೀಯ ಇಚ್ಛಾಶಕ್ತಿ ಅವರಲ್ಲಿ ಇರಲಿಲ್ಲ. ಮುಖ್ಯಮಂತ್ರಿ ಡಿ.ಕೆ.ಶಿವಕುಮರ್ ಅವರನ್ನು ಬೈಯುವುದನ್ನೇ ಛಾಳಿ ಮಾಡಿಕೊಂಡಿದ್ದಾರೆ ಎಂದರು.

ಬಡಾವಣೆಯ ಸಮಸ್ಯೆ ಪರಿಹಾರದ ಹಿಂದೆ ಶಾಸಕ ಇಕ್ಬಾಲ್ ಹುಸೇನ್ ಅವರ ಪರಿಶ್ರಮ ಹೆಚ್ಚಾಗಿದೆ,




ಕುಮಾರಸ್ವಾಮಿ ಅವರು ಮಾಡಿರುವ ತಪ್ಪುಗಳನ್ನು ಸರಿಪಡಿಸಲಾಗುತ್ತಿದೆ, ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರು ನಿವೇಶನದಾರರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಎಂದು ಸಲಹೆ ನೀಡಿದರು.

### ಅತಿ ಕಠಿಣ ಕೆಲಸ: ಇಕ್ಬಾಲ್ ಹುಸೇನ್

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿ, ಹೆಲ್ತ್ ಸಿಟಿ ಬಡಾವಣೆ ತಮ್ಮ ಮುಂದಿದ್ದ ಅತಿ ಕಠಿಣ ಕೆಲಸವಾಗಿತ್ತು. ಕೇವಲ 2ರೂ ಬೆಲೆಯ ಪೇಪರ್ ಮೇಲೆ ಏಳೆಂಟು ಕೋಟಿ ರೂಗಳ ವ್ಯವಹಾರ ಮಾಡಿದ್ದರು. ಇಂತಹ ದುಸ್ಥಿತಿಯಲ್ಲಿದ್ದ ಬಡಾವಣೆಯನ್ನು ಅಲ್ಲಿ ನಿವೇಶನ ಖರೀದಿಸಿದ ಮಾಲೀಕರನ್ನು ಪಾರು ಮಾಡುವ ಸಂಬಂಧ ಸಾಕಷ್ಟು ಕೆಲಸ ಮಾಡಿದ್ದೇನೆ. 1950 ನಿವೇಶನ ದಾರರಿಗೆ ಹಕ್ಕು ಪತ್ರ ಕೊಡಿಸಲು ಮುಂದಾಗಿದ್ದೇನೆ ಶೀಘ್ರದಲ್ಲಿಯೇ ಈ ಕೆಲಸವೂ ಆಗಲಿದೆ ಎಂದರು.

ರಾಮನಗರ ನಗರಸಭೆ ವ್ಯಾಪ್ತಿಯ 1 ರಿಂದ 10ನೇ ವಾರ್ಡುಗಳ ನಾಗರೀಕರಿಗೆ ಇಂದು ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರು ಸರಬರಾಜು ಆಗುತ್ತಿದೆ. ಹಿಂದೆ ಇದ್ದ ಪರಿಸ್ಥಿತಿ ಈಗ ಇಲ್ಲ ಹೀಗಾಗಿ ನಗರ ವ್ಯಾಪ್ತಿಯಲ್ಲಿ 329 ಕೊಳವೆ ಬಾವಿಗಳನ್ನು ಕೊರೆಸುವ ಅಗತ್ಯವಿಲ್ಲ. ಕೈಲಾಂಚ ಮತ್ತು ಕಸಬಾ ಹೋಬಳಿಯ ಗ್ರಾಮಗಳಿಗೂ ಕುಡಿಯುವ ನೀರು ಸರಬರಾಜು ಆಗುತ್ತಿದೆ ಎಂದರು.

ನಿವೇಶನ ರಹಿತರು ನಿವೇಶನ ಪಡೆಯಲು ಈ ಹಿಂದೆ 5 ಸಾವಿರ ಪಾವತಿಸಿದ್ದರು. ಆದರೆ ಆ ಯೋಜನೆಯೂ ಕಾರ್ಯಗತವಾಗಲಿಲ್ಲ. ಈಗ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಸಹಕಾರದಲ್ಲಿ 300 ಎಕರೆ ಭೂಮಿಯಲ್ಲಿ ನಿವೇಶನಗಳನ್ನು ವಿಂಗಡಿಸಿ ಅರ್ಹರಿಗೆ ವಿತರಿಸಲಾಗುವುದು ಎಂದರು.

ಈ ವೇಳೆ ಚನ್ನಪಟ್ಟಣ ಶಾಸಕ ಸಿ.ಪಿ.ಯೋಗೇಶ್ವರ, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಮಾಜಿ ಶಾಸಕ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಜೆಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜು, ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್, ಜಿಪಂ ಸಿಇಒ ಅನ್ಮೋಲ್ ಜೈನ್, ನಟ ಸಾಧುಕೋಕಿಲ, ಪ್ರಾಧಿಕಾರದ ನಿರ್ದೇಶಕ ಪರ್ವಿಜ್, ಕಾಂಗ್ರೆಸ್ ಪ್ರಮುಖರಾದ ರಮೇಶ್, ಗುರುಪ್ರಸಾದ್ ಮುಂತಾದವರು ಹಾಜರಿದ್ದರು.

### ಹಂತ ಹಂತವಾಗಿ ಅಭಿವೃದ್ಧಿ

ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಮಾತನಾಡಿ, ನಿವೇಶನ ಮಾಲೀಕರಿಗೆ ಹಕ್ಕುಪತ್ರ ವಿತರಣೆಗೆ ಸರ್ಕಾರ ಮುಂದಾಗಿದೆ. ಹಂತ ಹಂತವಾಗಿ ಬಡಾ ವಣೆಯನ್ನು ಅಭಿವೃದ್ಧಿಯಾಗಲಿದೆ ಎಂದು ನಿವೇಶನ ಮಾಲೀಕರಲ್ಲಿ ಭರವಸೆ ಮೂಡಿಸಿದರು. ಬಡಾವಣೆಯಲ್ಲಿ ವಿಂಗಡಣೆಯಾಗಿರುವ ನಿವೇಶನಗಳು ನೋಂದಣಿ ಸಹ ಆಗಿರಲಿಲ್ಲ. ಇಲ್ಲಿ ನಿವೇಶನ ಖರೀದಿಸದವರ ಸಮಸ್ಯೆ ಪರಿಹಾರಕ್ಕೆ ಯಾರು ಮುಂದಾಗಿರಲಿಲ್ಲ. ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ 2022ರಲ್ಲಿ ಈ ಬಡಾವಣೆಯ ವಿಚಾರದಲ್ಲಿ ಸಾಕಷ್ಟು ಕೆಲಸ ಮಾಡಿದ್ದೇವೆ. ಎರಡು ಬಾರಿ ಕ್ಯಾಬಿನೆಟ್ ಸಭೆಯಲ್ಲಿ ಪ್ರಸ್ತಾಪವಾಗಿತ್ತು. ಒಮ್ಮೆ ತಿರಸ್ಕರಿಸಲ್ಪಟ್ಟಿತ್ತು. ಈ ಬಡಾವಣೆಯ ವಿಚಾರದಲ್ಲಿ ಈ ವಿಚಾರದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಅವರ ಸಹಕಾರದಲ್ಲಿ ಮರು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುತ್ತಿದ್ದೇವೆ. ಇದರೊಂದಿಗೆ ಚನ್ನಪಟ್ಟಣದ ಎರಡು ಬಡಾವಣೆಗಳು ಸೇರಿದ್ದು ಅಭಿವೃದ್ಧಿಗೊಳಿಸಲಾಗುವುದು. 40 ಕೋಟಿ ರೂ ವೆಚ್ಚದಲ್ಲಿ ಬಡಾವಣೆಯಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಚರಂಡಿ ವ್ಯವಸ್ಥೆಮಾಡಿಕೊಡಲಾಗುತ್ತದೆ ಎಂದರು.

## ಕನ್ನಡಿಗರಿಗೆ ಅವಕಾಶ ಕಲ್ಪಿಸಿ

ಮೈಸೂರು: ಈ ಬಾರಿಯ ದಸರಾ ಮಹೋತ್ಸವ ಮನರಂಜನಾ ಕಾರ್ಯಕ್ರಮ ವೇಳೆ ಕನ್ನಡಿಗರಿಗೆ ನೂರಕ್ಕೆ ನೂರರಷ್ಟ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಪ್ರತಿಭಟಿಸಬೇಕಾಗುತ್ತದೆ ಎಂದು ಜಿಲ್ಲಾಧ್ಯಕ್ಷ ಪ್ರವೀಣ್‌ಕುಮಾರ್ ಎಚ್ಚರಿಸಿದರು.


ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಳೆದ ಬಾರಿ ಅರಮನೆ ಮುಂಭಾಗ ನಡೆದ ಕಾರ್ಯಕ್ರಮ ವೇಳೆ ಅನ್ಯಭಾಷೆ ಗೀತೆ ಹಾಡಿದಾಗ ವಿರೋಧ ವ್ಯಕ್ತವಾಗಿ ಕೊನೆಗೆ ಕನ್ನಡ ಹಾಡು ಹಾಡುವಂತೆ ಮಾಡಲಾಯಿತು. ಇದಲ್ಲದೆ ಯುವ ದಸರಾ, ಯುವ ಸಂಭ್ರಮ, ಅರಮನೆ ವೇದಿಕೆ ಮೊದಲಾದವುಗಳಲ್ಲಿನ ಕಾರ್ಯಕ್ರಮ ವೇಳೆ ಹೊರ ರಾಜ್ಯದವರಿಗೇ ಅವಕಾಶ ನೀಡುತ್ತಿರುವುದು ಸರಿಯಲ್ಲ. ಇದು ತಪ್ಪಬೇಕು. ಆದ್ದರಿಂದ ಜಿಲ್ಲಾಡಳಿತ, ಸರ್ಕಾರಗಳು ಈ ಬಾರಿಯಾದರೂ ಕನ್ನಡಿಗರಿಗೆ ಆದ್ಯತೆ ನೀಡದಿದ್ದರೆ ಪ್ರತಿಭಟಿಸಬೇಕಾಗುತ್ತದೆ ಎಂದರು. ಇನ್ನಿತರ ಪದಾಧಿಕಾರಿಗಳಾದ ಎನ್. ಲೋಕೇಶ್‌ಕುಮಾರ್, ಹೇಮಂತ್‌ಗೌಡ, ಅಸ್ಲಾಂ, ಜಿ. ಲೋಕೇಶ್‌ಕುಮಾರ್ ಇದ್ದರು.




## ನಾಳೆ ಶ್ರೀಗಳ ಪುಣ್ಯಸ್ಮರಣೆ

ಮೈಸೂರು: ಶ್ರೀ ಹೊಸಮಠದ ಲಿಂಗಕ್ಯ ಚಿದಾನಂದ ಸ್ವಾಮೀಜಿಗಳ ವರ ಪುಣ್ಯಸಂಸ್ಮರಣೆ ಕಾರ್ಯಕ್ರಮ ಆ.24 ರಂದು ಶ್ರೀಹೊಸಮಠದಲ್ಲಿ ನಡೆಯಲಿದೆ ಎಂದು ಎಚ್.ವಿ.ಬಸವರಾಜು ಹಿನಕಲ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಗ್ಗೆ 10.30ಕ್ಕೆ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಮಹಾಂತ ಸ್ವಾಮೀಜಿ, ಡಾ.ಚನ್ನಬಸವ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಕೇಂದ್ರ ಸಚಿವ ವಿ.ಸೋಮಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಎಚ್.ಎಂ. ಗಣೇಶ್ ಪ್ರಸಾದ್ ಇನ್ನಿತರರು ಅತಿಥಿಗಳಾಗಿರುವರೆಂದರು. ದಂಡಿಕೆರೆ ನಾಗರಾಜ್, ಪ್ರಸಾದಮೂರ್ತಿ, ವಸಂತಕುಮಾರ್, ಮಹೇಶ್, ಶಿವರಾಜ್ ಇದ್ದರು.




# ಸೆ.5ರಂದು ಪ್ರಜಾಸೇವೆ ಸಭೆ

## ನಾಗರೀಕರ ಸಮಸ್ಯೆಗಳ ಪರಿಹಾರಕ್ಕೆ ಪ್ರಜಾಸೇವೆ ಇಲಾಖೆ ಅಸ್ತಿತ್ವಕ್ಕೆ

ರಾಮನಗರ: ಸಾರ್ವಜನಿಕರ ಸಮಸ್ಯೆಗಳಿಗೆ ಪರಿಣಾಮಕಾರಿಯಾಗಿ ಪರಿಹಾರ ಕಂಡುಕೊಳ್ಳಲು ಪ್ರಜಾಸೇವೆ ಎಂಬ ನೂತನ ಇಲಾಖೆ ಪ್ರಾರಂಭಿಸಲಾಗಿದೆ. ಇದೇ ಸೆಪ್ಟಂಬರ್ 5ರಂದು ಚನ್ನಪಟ್ಟಣದಲ್ಲಿ ಪ್ರಜಾಸೇವೆ ಆಂದೋಲನಾ ಸಭೆ ನಡೆಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ತಿಳಿಸಿದರು.

ನಗರದ ಜಿಲ್ಲಾ ಸರ್ಕಾರಿ ಕಚೇರಿಗಳ ಸಂಕೀರ್ಣದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಪ್ರಜಾಸೇವೆ ನೂತನ ಇಲಾಖೆ ಮುಖ್ಯಮಂತ್ರಿಗಳ ಮಹತ್ವಾಕಾಂಕ್ಷಿ ಇಲಾಖೆಯಾಗಿದೆ. ಸಾರ್ವಜನಿಕರಿಗೆ ಕಾನೂನು ಬದ್ಧವಾಗಿ ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಒದಗಿಸಬಹುದಾದ ಸವಲತ್ತುಗಳು, ಯೋಜನೆಗಳನ್ನು ನಿಗದಿತ ಕಾಲ ಮಿತಿಯೊಳಗೆ ಒದಗಿಸುವುದು ಅಥವಾ ಸರ್ಕಾರದ ಫರಿದಿಗೆ ಅನ್ವಯವಾಗದಿದ್ದಲ್ಲೀ ಅದಕ್ಕೆ ಹಿಂಬರಹ ನೀಡುವಂತಹ ಕೆಲಸ ಮಾಡಬೇಕು, ಇದು ಮುಖ್ಯಮಂತ್ರಿಯವರು ಜನಸ್ನೇಹಿ ಆಡಳಿತಕ್ಕೆ ಉತ್ತಮ ಉದಾಹರಣೆಯಾಗಿದೆ ಅಧಿಕಾರಿಗಳೆಲ್ಲರೂ ಪಾರದರ್ಶಕವಾಗಿ ಕೆಲಸ ಮಾಡಬೇಕು ಎಂದರು.

ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಸರ್ಕಾರದ ವತಿಯಿಂದ ನೀಡಲಾಗುವ ಸೌಲಭ್ಯಗಳನ್ನು ತಲುಪಿಸಲು ಅಧಿಕಾರಿಗಳು ಶ್ರಮವಹಿಸಿ ಕೆಲಸ ಮಾಡುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿಧಾನ ಪರಿಷತ್ ಶಾಸಕರಾದ ಎಸ್. ರವಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಕೆ. ರಾಜು, ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಮೋಲ್ ಜೈನ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.



### ಮಧ್ಯಾಹ್ನ 3.30 ರಿಂದ 5.30ರವರೆಗೆ ಕಡ್ಡಾಯವಾಗಿ ಹಾಜರಾತಿ ಇರಲಿ

ಸಾರ್ವಜನಿಕರಿಗೆ ವಿವಿಧ ಇಲಾಖೆಗಳಲ್ಲಿನ ಸರ್ಕಾರಿ ಸೇವೆಗಳು ಹಾಗೂ ಆಡಳಿತಾತ್ಮಕ ಸೌಲಭ್ಯಗಳು ಸಮರ್ಪಕವಾಗಿ ಮತ್ತು ಸಕಾಲದಲ್ಲಿ ದೊರೆಯುವಂತೆ ಮಾಡುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳ ಅಧಿಕಾರಿಗಳು ಪ್ರತಿ ದಿನ ಮಧ್ಯಾಹ್ನ 3.30 ರಿಂದ ಸಂಜೆ 5.30ರ ವರೆಗೆ ಕಚೇರಿಯಲ್ಲಿ ಕಡ್ಡಾಯವಾಗಿ ತಮ್ಮ ಕಚೇರಿಗಳಲ್ಲಿ ಹಾಜರಿದ್ದು, ಸಾರ್ವಜನಿಕರ ಭೇಟಿಗೆ ಲಭ್ಯವಿರುವಂತೆ ಅವರು ತಿಳಿಸಿದರು. ಜಿಲ್ಲಾ ಮಟ್ಟ ಸೇರಿ ತಾಲೂಕು ಮಟ್ಟದಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು, ಗ್ರಾಮ ಮಟ್ಟದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಕಡ್ಡಾಯವಾಗಿ ಸಾರ್ವಜನಿಕರ ಭೇಟಿಗೆ ಲಭಿಸಬೇಕು, ಸರ್ಕಾರಿ ನೌಕರರು ಹಾಗೂ ಸಿಬ್ಬಂದಿಯು ಸರ್ಕಾರದಿಂದ ನೀಡಲಾಗಿರುವ ಗುರುತಿನ ಚೀಟಿಯನ್ನು ಧರಿಸಬೇಕು ಎಂದು ಹೇಳಿದರು. ಬೆಂಗಳೂರು ದಕ್ಷಿಣ ಜಿಲ್ಲೆ, ಮುಖ್ಯಮಂತ್ರಿಯವರು ಪ್ರತಿನಿಧಿಸುವ ಕ್ಷೇತ್ರವಾಗಿದ್ದು, ಎಲ್ಲಾ ಇಲಾಖೆಗಳ ಅಧಿಕಾರಿ– ಸಿಬ್ಬಂದಿಗಳು ಜವಾಬ್ದಾರಿ ಅರಿತು ಕೆಲಸ ಮಾಡಬೇಕು, ಪಾರದರ್ಶಕವಾಗಿ ಹಾಗೂ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವಂತೆ ಅವರು ಸೂಚಿಸಿದರು.

### ಸೆಪ್ಟಂಬರ್‌ನಲ್ಲಿ ಚನ್ನಪಟ್ಟಣಕ್ಕೆ ಸಿಎಂ

▸▸ ಸಿ.ಪಿ.ಯೋಗೇಶ್ವರ್

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿ.ಪಿ. ಯೋಗೇಶ್ವರ್ ಅವರು ಮಾತನಾಡಿ, ಬರುವ ಸೆಪ್ಟಂಬರ್ ಮಾಹೆಯಲ್ಲಿ ಚನ್ನಪಟ್ಟಣದಲ್ಲಿ ಮುಖ್ಯಮಂತ್ರಿಗಳ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ, ಆ ಕಾರ್ಯಕ್ರಮದಲ್ಲಿ ಉದ್ಘಾಟನೆ ಅಥವಾ ಶಂಕುಸ್ಥಾಪನೆಗೆ ಸಿದ್ಧವಿರುವ ಯೋಜನೆಗಳ ವಿವರಗಳನ್ನು ಒದಗಿಸುವಂತೆ ಅಧಿಕಾರಿಗಳಲ್ಲಿ ಕೋರಿದರು.

ಮೊದಲ ಪುಟದಿಂದ

### ವಿವರಕ್ಕೆ ರಘು ಆಗ್ರಹ

ಎಂಬ ಸಂಪೂರ್ಣ ಮಾಹಿತಿಯನ್ನು ಅಧಿಸೂಚನೆ ಮೂಲಕ ಪ್ರಕಟಿಸಬೇಕು ಎಂದು ಒತ್ತಾಯಿಸಿದರು. ಕೃತಕ ದಾಖಲೆಗಳ ಮೂಲಕ ನಿವೇಶನ ಪಡೆದಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು. ಜಮೀನು ನೀಡಿದವರು ನಿಜವಾಗಿಯೂ ಪರಿಹಾರ ಪಡೆದಿದ್ದಾರೆಯೇ ಎಂಬುದನ್ನೂ ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಮುಡಾ ಅಕ್ರಮ ನಿವೇಶನ ಹಂಚಿಕೆ ಕುರಿತು ತಮ್ಮ ಪಕ್ಷ ನಿರಂತರವಾಗಿ ಹೋರಾಟ ನಡೆಸಿದೆ. ಕೆಲವರನ್ನು ರಕ್ಷಿಸಲು ನಗರದ ಆಸ್ತಿಯನ್ನು ಬಲಿಕೊಡಲಾಗುತ್ತಿದೆ ಎಂದು ರಘು ಆರೋಪಿಸಿದರು. ಮುಡಾ ಬಡಾವಣೆ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡುತ್ತಿಲ್ಲ ಹಾಗೂ ಪ್ರಾಧಿಕಾರಕ್ಕೆ ಕಾಯಂ ಆಯುಕ್ತರನ್ನು ನೇಮಿಸದಿರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು.

### ದಿನೇಶ್ ಆಕ್ಷೇಪ

ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ವಿಪಕ್ಷಗಳು ಆಗ್ರಹಿಸುತ್ತಿರುವುದನ್ನೂ ಅವರು ಟೀಕಿಸಿದ್ದು, ಸಿಬಿಐಯನ್ನು ರಾಜಕೀಯವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪ ಮಾಡಿದರು. ವಿಧಾನಮಂಡಲದ ಅಧಿವೇಶನಕ್ಕೆ ಅಡ್ಡಿಪಡಿಸುವ ವಿಪಕ್ಷಗಳ ನಡೆ ಸರಿಯಲ್ಲ ಎಂದರು. ಇದೇ ವೇಳೆ ಆಹಾರ ಸುರಕ್ಷತೆ ಹಾಗೂ ನಕಲಿ ಔಷಧಿಗಳ ವಿರುದ್ಧ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳನ್ನು ಅವರು ಸಮರ್ಥಿಸಿಕೊಂಡರು. ಆಹಾರ ಕಲಬೆರಕೆ ಮತ್ತು ನಕಲಿ ಔಷಧಿಗಳ ನಿಯಂತ್ರಣದಿಂದ ಸಾರ್ವಜನಿಕರ ಸುರಕ್ಷತೆ ಹೆಚ್ಚಲಿದೆ ಎಂದು ಹೇಳಿದರು.

### ಹೊಸ ಅಧಿಸೂಚನೆ

ಹಾಗೂ ಕಿರಿಯ ಸಹಾಯಕ ಸಮಾನ ಹುದ್ದೆಗಳಿಗೆ ದ್ವಿತೀಯ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳು ರಾಜ್ಯದ ಯಾವುದೇ ಭಾಗದಲ್ಲಿ ಸೇವೆ ಸಲ್ಲಿಸಲು ಸಿದ್ಧರಾಗಿರಬೇಕು ಎಂದು ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ.

# ಛಾಯಚಿತ್ರ ಮುಂದಿನ ಪೀಳಿಗೆಗೆ ಪರಿಚಯಿಸುವ ದಾಖಲೆ: ಸೌಮ್ಯ

ಎಚ್.ಡಿ.ಕೋಟೆ: ಛಾಯಾಚಿತ್ರ ಕೇವಲ ಒಂದು ಚಿತ್ರವಲ್ಲ. ಅದು ಒಂದು ಘಟನೆ, ವ್ಯಕ್ತಿಯ ಭಾವನೆ, ಪ್ರಕೃತಿಯ ಸೌಂದರ್ಯ ಅಥವಾ ಸಮಾಜದ ಬದುಕನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ದಾಖಲೆಯಾಗಿದೆ. ಛಾಯಾಗ್ರಾಹಕರು ತಮ್ಮ ವೃತ್ತಿಯನ್ನು ಕೇವಲ ಉದ್ಯೋಗವಾಗಿ ಪರಿಗಣಿಸದೆ, ಸಮಾಜದ ಘಟನೆಗಳನ್ನು ದಾಖಲಿಸುವ ಜವಾಬ್ದಾರಿಯುತ ಕ್ಷೇತ್ರವೆಂದು ಪರಿಗಣಿಸಬೇಕು ಎಂದು ಸೌಮ್ಯ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸರಗೂರು ಹಾಗೂ ಎಚ್.ಡಿ. ಕೋಟೆ ತಾಲೂಕು ಛಾಯಾಗ್ರಾಹಕರ ಸಂಘದ ವತಿಯಿಂದ ಆಯೋಜಿಸಿದ್ದ 187ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಕಾರ್ಯಕ್ರಮಕ್ಕೆ ಕ್ಯಾಮೆರಾ ಕ್ಲಿಕ್ಕಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಪ್ರಸ್ತುತ ತಂತ್ರಜ್ಞಾನವು ಅತ್ಯಂತ ವೇಗವಾಗಿ ಅಭಿ ವೃದ್ಧಿ ಹೊಂದುತ್ತಿದ್ದು, ಮೊಬೈಲ್ ಫೋನ್‌ಗಳಲ್ಲಿಯೇ ಉತ್ತಮ ಗುಣಮಟ್ಟದ ಛಾಯಾಚಿತ್ರಗಳನ್ನು ತೆಗೆಯುವ ಅವಕಾಶವಿದೆ. ಆದರೂ, ಅನುಭವ ಹೊಂದಿರುವ ವೃತ್ತಿಪರ ಛಾಯಾಗ್ರಾಹಕರು ತಮ್ಮ ಕೌಶಲ, ಕಲಾತ್ಮಕ ದೃಷ್ಟಿಕೋನ ಹಾಗೂ ಅನುಭವದ ಮೂಲಕ ಸೆರೆಹಿಡಿಯುವ ಚಿತ್ರಗಳಿಗೆ ವಿಶೇಷ ಮಹತ್ವವಿದೆ ಎಂದು ಹೇಳಿದರು.

ಪ್ರತಿಯೊಂದು ಛಾಯಾಚಿತ್ರವೂ ತನ್ನದೇ ಆದ ಭಾವನೆಯನ್ನು ವ್ಯಕ್ತಪಡಿಸುವುದರ ಜೊತೆಗೆ, ನೂರಾರು ದೃಷ್ಟಿಕೋನಗಳನ್ನು ಬಿಂಬಿಸುವ ಶಕ್ತಿಯನ್ನು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಛಾಯಾಗ್ರಹಣ ಕ್ಷೇತ್ರದತ್ತ ಆಸಕ್ತಿ ತೋರುತ್ತಿರುವುದು ಸಂತಸದ ಸಂಗತಿ. ಹೊಸ ತಂತ್ರಜ್ಞಾನಗಳ ಬಳಕೆ, ಡಿಜಿಟಲ್ ಕ್ಯಾಮೆರಾ, ಡ್ರೋನ್ ಹಾಗೂ ವಿವಿಧ ಆಧುನಿಕ ಉಪಕರಣಗಳ ಬಳಕೆಯಲ್ಲಿ ಯುವಕರು ಮುಂಚೂಣಿಯಲ್ಲಿದ್ದಾರೆ ಎಂದರು.

ತಾಲೂಕು ಛಾಯಾಗ್ರಾಹಕರ ಸಂಘವು ಕಳೆದ ಎರಡು ದಶಕಗಳಿಂದ ತನ್ನ ಸದಸ್ಯರ ಕಷ್ಟ–ಸುಖಗಳಿಗೆ ಸ್ಪಂದಿಸುತ್ತಾ, ಛಾಯಾಗ್ರಾಹಕರ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯವಾಗಿದೆ.

ತಾಲೂಕಿನಲ್ಲಿ ಶಾಸಕರ ವಿರುದ್ಧ ಕೆಲವರು ಅಪಪ್ರಚಾರ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಶಾಸಕ ಅನಿಲ್ ಚಿಕ್ಕಮಾದು ಅವರು ತಾಲೂಕಿನ ಅಭಿವೃದ್ಧಿಗಾಗಿ ಪ್ರಾಮಾಣಿಕತೆ ಹಾಗೂ ಆತ್ಮವಿಶ್ವಾಸದಿಂದ ಕೆಲಸ ಮಾಡುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳು ಹಾಗೂ




ಜನಪರ ಯೋಜನೆಗಳ ಕುರಿತು ಮಾಧ್ಯಮದವರು ಸತ್ಯ ಮತ್ತು ಪಾರದರ್ಶಕ ಮಾಹಿತಿಯನ್ನು ಜನರ ಮುಂದಿಡುವ ಮೂಲಕ ಸಹಕರಿಸಬೇಕು ಎಂದು ಮನವಿ ಮಾಡಿದರು.

ವನ್ಯಜೀವಿ ಛಾಯಾಗ್ರಾಹಕ ಕೆ.ಜಿ. ಸಿದ್ದಲಿಂಗಪ್ರಸಾದ್ ಮಾತನಾಡಿ, ಒಂದು ಛಾಯಾಚಿತ್ರ ಸಾವಿರ ಪದಗಳಿಗೆ ಸಮವಾಗಿದೆ. ಛಾಯಾಗ್ರಾಹಕರು ಸೆರೆಹಿಡಿದಿರುವ ಕೆಲವು ಚಿತ್ರಗಳು ನೂರಾರು ವರ್ಷಗಳ ಇತಿಹಾಸವನ್ನು ಮುಂದಿನ ಪೀಳಿಗೆಗೆ ತಿಳಿಸುವ ಅಮೂಲ್ಯ ದಾಖಲೆಗಳಾಗಿವೆ ಎಂದು ಹೇಳಿದರು.

ಗ್ರಾಮೀಣ ಸೊಗಡನ್ನು ಬಿಂಬಿಸುವ ಛಾಯಾಚಿತ್ರ ಸ್ಪರ್ಧೆಯಲ್ಲಿ ಛಾಯಾಗ್ರಾಹಕರು ಗ್ರಾಮೀಣ ಬದುಕಿನ ವೈವಿಧ್ಯಮಯ ದೃಶ್ಯಗಳನ್ನು ಅಚ್ಚುಕಟ್ಟಾಗಿ ಸೆರೆಹಿಡಿದಿದ್ದಾರೆ. ರೈತರ ಬದುಕು, ಗ್ರಾಮೀಣ ಸಂಸ್ಕೃತಿ, ಜನಜೀವನ, ಪ್ರಕೃತಿ ಹಾಗೂ ಸ್ಥಳೀಯ ಪರಂಪರೆಯನ್ನು ಛಾಯಾಚಿತ್ರಗಳ ಮೂಲಕ ದಾಖಲಿಸುವ ಕೆಲಸ ಇನ್ನಷ್ಟು ನಡೆಯಬೇಕು ಎಂದರು. ತಾಲೂಕಿನ ಛಾಯಾಗ್ರಾಹಕರು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಧನೆ ಮಾಡುವ ನಿಟ್ಟಿನಲ್ಲಿ ಅಗತ್ಯ ಸಹಕಾರ ಮತ್ತು ಮಾರ್ಗದರ್ಶನ ನೀಡುವುದಾಗಿ ಅವರು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಗುರುಸ್ವಾಮಿ, ಉದ್ಯಮಿ ಕುಮಾರ್, ಕೊಡಗು ಜಿಲ್ಲಾಧ್ಯಕ್ಷ ಮಾದೇವಪ್ಪ, ನಂಜನಗೂಡು ತಾಲ್ಲೂಕು ಅಧ್ಯಕ್ಷ ಬಿ. ಸತೀಶ್, ಗೌರವಾಧ್ಯಕ್ಷ ರವಿಕುಮಾರ್ ಆರಾಧ್ಯ, ಕಾರ್ಯದರ್ಶಿ ಪರಮೇಶ್ ಗೌಡ, ಉಪಾಧ್ಯಕ್ಷ ವೆಂಕಟೇಶ್, ಕಾರ್ಯಾಧ್ಯಕ್ಷ ಪಾರಿ, ಖಜಾಂಚಿ ಎಸ್. ರಮೇಶ್, ಸಲಹೆಗಾರರಾದ ಸ್ವಾಮಿಲಕ್ಷ್ಮಿ, ಬಿ.ವಿ. ಬಾಲಸುಬ್ರಹ್ಮಣ್ಯ, ಸಂಚಾಲಕ ನಾಗುಸಾಗರ್, ಸಹಕಾರ್ಯದರ್ಶಿ ಸಿ.ಎಸ್. ರವಿ, ನಿರ್ದೇಶಕರಾದ ಸೋಮೇಶ್, ಕುಮಾರ್, ಮಹೇಂದ್ರ, ಗುರುಆಚಾರ್ಯ, ಪಿ.ಕೆ. ಕುಮಾರ್, ಮೂರ್ತಿ, ಮಾಜಿ ಅಧ್ಯಕ್ಷರಾದ ಸತೀಶ್ ಆರಾಧ್ಯ, ಮನೋಜ್, ವಾಸುಕಿ ನಾಗೇಶ್, ಹೆಚ್.ಕೆ. ಪ್ರಕಾಶ್, ಕನ್ನಡ ಪ್ರಮೋದ್, ಹೊನ್ನೇಗೌಡ, ವನಸಿರಿ ಶಂಕರ್, ನಾಗೇಂದ್ರ, ತ್ರಿಶಂಭು, ರಘುರಾಮ್, ಸುರೇಶ್ ಸೇರಿದಂತೆ ಛಾಯಾಗ್ರಾಹಕರು ಹಾಗೂ ಅವರ ಕುಟುಂಬಸ್ಥರು ಇದ್ದರು.

### ಸಾಧಕರಿಗೆ ಅಭಿನಂದನೆ: ಹಿರಿಯರಿಗೆ ಸನ್ಮಾನ

2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ತಾಲ್ಲೂಕು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆಯಲು ಕಾರಣರಾದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ. ಎನ್. ರಾಜು ಅವರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು. ಛಾಯಾಗ್ರಹಣ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸಿರುವ ಹಿರಿಯ ಛಾಯಾಗ್ರಾಹಕರಾದ ಬಾಲಸುಬ್ರಹ್ಮಣ್ಯ ಹಾಗೂ ಸಮೀರ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.ಗ್ರಾಮೀಣ ಸೊಗಡು ಕುರಿತ ಛಾಯಾಚಿತ್ರ ಸ್ಪರ್ಧೆಯಲ್ಲಿ ಮುರಳಿ ಪ್ರಥಮ, ಗುರುಸ್ವಾಮಿ ದ್ವಿತೀಯ ಹಾಗೂ ವಾದಿರಾಜ್ ತೃತೀಯ ಸ್ಥಾನ ಪಡೆದುಕೊಂಡರು. ವಿಜೇತರಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು.

ಮೊದಲ ಪುಟದಿಂದ

# ನಾಲ್ವರು ಆನೆಗಳ ನಡುವೆ ಪೈಪೋಟಿ

ಮರಳು ಮೂಟೆ ಹೊರುವ ತಾಲೀಮು, ಮರದ ಅಂಬಾರಿ ಹೊರುವ ಅಭ್ಯಾಸ, ಫಿರಂಗಿ ಸಿಡಿಮದ್ದು ತಾಲೀಮು ಹಾಗೂ ಜಂಬೂಸವಾರಿ ಮಾರ್ಗದಲ್ಲಿ ರಿಹರ್ಸಲ್ ನಡೆಸಲಾಗುತ್ತದೆ. ಈ ಪರೀಕ್ಷೆಗಳಲ್ಲಿ ಶಾಂತ ಸ್ವಭಾವ, ಸಮಚಿತ್ತತೆ, ದೈಹಿಕ ಸಾಮರ್ಥ್ಯ ಹಾಗೂ ದೃಢತೆ ತೋರುವ ಆನೆಯನ್ನು ಚಿನ್ನದ ಅಂಬಾರಿ ಹೊರುವ ಜವಾಬ್ದಾರಿಗೆ ಆಯ್ಕೆ ಮಾಡಲಾಗುತ್ತದೆ. ಧನಂಜಯ ಮೊದಲ ಆಯ್ಕೆಯಾಗಿದ್ದರೆ, ಮಹೇಂದ್ರ ಎರಡನೇ ಹಾಗೂ ಏಕಲವ್ಯ ಮೂರನೇ ಆಯ್ಕೆಯಲ್ಲಿದ್ದಾರೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್. ರವಿಶಂಕರ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯವಾಗಿರುವ ಕಿರಿಯ ಆನೆ ಭೀಮನಿಗೂ ಈ ಬಾರಿ ದಸರಾ ಗಜಪಡೆಯಲ್ಲಿ ಅವಕಾಶ ಸಿಗುತ್ತದೆಯೇ ಎಂಬ ಕುತೂಹಲ ಮೂಡಿದೆ. ಭೀಮನಿಗೆ ಸದ್ಯ ಮದ ಬಂದಿರುವ ಕಾರಣ ಮೀಸಲು ಪಟ್ಟಿಯಲ್ಲಿ ಇರಿಸಲಾಗಿದೆ. ಮದ ಕಡಿಮೆಯಾದರೆ ಎರಡನೇ ಹಂತದಲ್ಲಿ ಆತನನ್ನು ದಸರಾಗೆ ಕರೆತರುವ ಸಾಧ್ಯತೆ ಇದೆ. ಹರ್ಷ ಆನೆಯನ್ನೂ ಮೀಸಲು ಪಟ್ಟಿಯಲ್ಲಿ ಇರಿಸಲಾಗಿದೆ.

### 26ರಿಂದ ಗಜಪಯಣ

ಎರಡನೇ ಹಂತದಲ್ಲಿ ರೂಪ, ಚೈತ್ರಾ ಹಾಗೂ ಶ್ರೀಕಂಠ ಮೈಸೂರಿಗೆ ಬರಲಿದ್ದಾರೆ. ಅರಮನೆ ನಗರಿಗೆ ಆಗಮಿಸುವ ಗಜಪಡೆಯ ಸುಮಾರು 50 ದಿನಗಳ ಆಹಾರ, ಪೋಷಣೆ ಹಾಗೂ ನಿರ್ವಹಣೆಗಾಗಿ ಅರಣ್ಯ ಇಲಾಖೆ ಸರ್ಕಾರಕ್ಕೆ 2 ಕೋಟಿ ಅನುದಾನದ ಪ್ರಸ್ತಾವನೆ ಸಲ್ಲಿಸಿದೆ. ದಸರಾ ಜಂಬೂ ಸವಾರಿಗೆ ಆನೆಗಳನ್ನು ಸಜ್ಜುಗೊಳಿಸಲು ತಾಲೀಮು ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ.

### ಮೂಳೆ ಸಾಗಾಟ ಶಂಕೆ?

ವಿಚಾರಣೆಗೆ ಒಳಪಡಿಸಿ ಸತ್ಯಾಸತ್ಯತೆಯನ್ನು ಜನರ ಮುಂದೆ ತರಬೇಕಿದೆ. ಯಾವುದೇ ಪೂರ್ವಗ್ರಹ ಅಥವಾ ಊಹಾಪೋಹಗಳಿಗೆ ಆಸ್ಪದ ನೀಡದೆ, ಸಂಬಂಧಪಟ್ಟ ಕಾನೂನು ಜಾರಿ ಸಂಸ್ಥೆಗಳು ಹಾಗೂ ಪೊಲೀಸ್ ಇಲಾಖೆ ಈ ಘಟನೆಯ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರು ಕಂಡುಬಂದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಕೂಗು ಸಾರ್ವಜನಿಕ ವಲಯದಿಂದ ಬಲವಾಗಿ ಕೇಳಿಬರುತ್ತಿದೆ.

# ಆ.24ರಿಂದ ಮತ್ತೆ ಅಹೋರಾತ್ರಿ ಧರಣಿ



ಗುಂಡ್ಲುಪೇಟೆ, :– ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ವತಿಯಿಂದ ಆ.24ರಿಂದ ತಾಲೂಕು ಕಚೇರಿ ಮುಂಭಾಗ ಮತ್ತೆ ಅಹೋರಾತ್ರಿ ಧರಣಿ ಆರಂಭಿಸಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025ರ ಅಕ್ಟೋಬರ್‌ನಲ್ಲಿ ರೈತರ ಐದು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 37 ದಿನಗಳ ಕಾಲ ಅಹೋರಾತ್ರಿ ಧರಣಿ ನಡೆಸಲಾಗಿತ್ತು. ಈ ವೇಳೆ ಸರ್ಕಾರ ಹಾಗೂ ತಾಲೂಕು ಮತ್ತು ಜಿಲ್ಲಾಡಳಿತ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರೂ, ಹತ್ತು ತಿಂಗಳು ಕಳೆದರೂ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಆರೋಪಿಸಿದರು.

ಪರಿಸರ ಸೂಕ್ಷ್ಮ ವಲಯಕ್ಕೆ ಸಂಬಂಧಿಸಿದ ಏಳನೇ ಕರಡು ಅಧಿಸೂಚನೆಯನ್ನು ರೈತರು ಖಂಡಿಸುತ್ತಾರೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾನುವಾರುಗಳಿಗಾಗಿ ಸರ್ಕಾರಿ ಗೋಮಾಳ ಜಮೀನು ಒದಗಿಸಬೇಕು ಎಂದು ಒತ್ತಾಯಿಸಿದರು. ರೈತ ಸಂಘದ ಮುಖಂಡ ಮಲ್ಲಯ್ಯನಪುರ ಶಿವಣ್ಣ ಮಾತನಾಡಿ, ಮೂರನೇ ಹಂತದ ಕೆರೆಗಳಿಗೆ ನೀರು ಹರಿಸಿರುವ ಜಿಲ್ಲಾಡಳಿತದ ಕ್ರಮ ಅವೈಜ್ಞಾನಿಕವಾಗಿದ್ದು, ನಾಲ್ಕನೇ ಹಂತದ ಕೆರೆಗಳಿಗೂ ನೀರು ಹರಿಸಬೇಕು. ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಪ್ರವೀಣ್, ಚಿಕ್ಕಸಿದ್ದಮ್ಮ, ಮನು, ಸೋಮಶೇಖರ್, ಮಹದೇವಪ್ರಸಾದ್ ಸೇರಿದಂತೆ ರೈತ ಮುಖಂಡರು ಉಪಸ್ಥಿತರಿದ್ದರು.

# ಗಿನ್ನಿಸ್ ಪ್ರದರ್ಶನದಲ್ಲಿ ಮಿಂಚಿದ 14 ಕರಾಟೆ ಪಟುಗಳು




ಚಾಮರಾಜನಗರ: ತಮಿಳುನಾಡಿನ ಚೆನ್ನೈನಲ್ಲಿ (ಆಗಸ್ಟ್ 16, 2026) ನಡೆದ ಇತಿಹಾಸ ಪ್ರಸಿದ್ಧ ಬೃಹತ್ ಕರಾಟೆ ಪ್ರದರ್ಶನದಲ್ಲಿ ಚಾಮರಾಜನಗರದ 14 ಜನ ಕರಾಟೆ ಪಟುಗಳು ಭಾಗವಹಿಸಿ, ಪ್ರತಿಷ್ಠಿತ ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್ (ಉಣುಟಟಿಛಿ ಘಂಡಿಟಜ ಖಜಛಿಂಡಿಜ) ಪುಟ ಸೇರುವ ಮೂಲಕ ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಚೆನ್ನೈನ ಸೆಂಟ್ ಥಾಮಸ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ "ಅತಿ ಹೆಚ್ಚು ಜನರಿಂದ ಏಕಕಾಲದಲ್ಲಿ ನಡೆದ ಕರಾಟೆ ಪ್ರದರ್ಶನ" (ಐಚಿಡಿಣಜಜ ಏಚಿಡಿಚಿಣಜ ಐಜಛಿಣಟಿ) ಎಂಬ ಜಾಗತಿಕ ದಾಖಲೆಯ ಪ್ರಯತ್ನದಲ್ಲಿ ಚಾಮರಾಜನಗರದ

ಸೋಟೋಖಾನ್ ಮಾರ್ಷಲ್ ಆರ್ಟ್ಸ್ ಅಕಾಡೆಮಿ ಇಂಡಿಯಾ ಸಂಸ್ಥೆಯ 14 ಜನ ಪ್ರತಿಭಾವಂತ ಕರಾಟೆ ಪಟುಗಳು ಪಾಲ್ಗೊಂಡಿದ್ದರು. ದೇಶದ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಕರಾಟೆ ಪಟುಗಳ ಜೊತೆಗೂಡಿ, ಒಂದೇ ಸಮರೂಪದ ಶಿಸ್ತಿನೊಂದಿಗೆ ಅತ್ಯಂತ ಯಶಸ್ವಿಯಾಗಿ ಕರಾಟೆ ಪಟ್ಟುಗಳನ್ನು ಪ್ರದರ್ಶಿಸಿ ಈ ಜಾಗತಿಕ ಮೈಲಿಗಲ್ಲನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಅಪೂರ್ವ ಸಾಧನೆಯ ಕುರಿತು ಮಾತನಾಡಿದ ಚಾಮರಾಜನಗರ ತಂಡದ ಮುಖ್ಯ ತರಬೇತಿದಾರರಾದ ನಾಗೇಂದ್ರ ಮತ್ತು ಗಣೇಶ್ ಮೂರ್ತಿರವರು "ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್‌ನಂತಹ ಜಾಗತಿಕ ವೇದಿಕೆಯಲ್ಲಿ ನಮ್ಮ ಚಾಮರಾಜನಗರದ 14 ಜನ ವಿದ್ಯಾರ್ಥಿಗಳು ಪಾಲ್ಗೊಂಡು ವಿಶ್ವ ದಾಖಲೆ ಬರೆದಿರುವುದು ನಮ್ಮ ಜಿಲ್ಲೆಗೆ ಸಂದ ದೊಡ್ಡ ಗೌರವವಾಗಿದೆ. ಮಕ್ಕಳ ತಿಂಗಳುಗಳ ಕಠಿಣ ಪರಿಶ್ರಮ, ಶಿಸ್ತು ಮತ್ತು ಕ್ರೀಡಾ ಮನೋಭಾವಕ್ಕೆ ಇಂದು ಜಾಗತಿಕ ಮನ್ನಣೆ ಸಿಕ್ಕಿದೆ" ಎಂದು ಹೆಮ್ಮೆಯಿಂದ ತಿಳಿಸಿದರು.

ಚೆನ್ನೈನಲ್ಲಿ ನಡೆದ ಈ ಬೃಹತ್ ಪ್ರದರ್ಶನವನ್ನು ವೀಕ್ಷಿಸಿದ ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್‌ನ ಅಧಿಕೃತ ತೀರ್ಪುಗಾರರು (ಂಜರಿಣಜುಛಿಚಿಣಂಡಿ) ಕಟ್ಟುನಿಟ್ಟಿನ ನಿಯಮಾವಳಿಗಳ ಪ್ರಕಾರ ಪರಿಶೀಲನೆ ನಡೆಸಿ, ದಾಖಲೆಯನ್ನು ಅಧಿಕೃತವಾಗಿ ಘೋಷಿಸಿ ಪ್ರಮಾಣಪತ್ರವನ್ನು ಹಸ್ತಾಂತರಿಸಿದ್ದಾರೆ.

ವಿಶ್ವ ದಾಖಲೆ ಬರೆದ ಚಾಮರಾಜನಗರದ ಎಲ್ಲಾ 14 ಕರಾಟೆ ಪಟುಗಳನ್ನು ಜಿಲ್ಲೆಯ ಕ್ರೀಡಾ ಪ್ರೇಮಿಗಳು, ಗಣ್ಯರು ಹಾಗೂ ಸಾರ್ವಜನಿಕರು ಮುಕ್ತಕಂಠದಿಂದ ಶ್ಲಾಘಿಸಿ, ಶುಭ ಕೋರಿದ್ದಾರೆ.

# ಕಂಬಳ ಮೈಸೂರು ದಸರಾಗೆ ಧಕ್ಕೆ




ಮೈಸೂರು: ಈ ಹಿಂದೆ ಕಂಬಳ ಆಚರಣೆ ವೇಳೆ ಕೊರಗ ಸಮುದಾಯದವರನ್ನು ಸಲಿಂಗ ಕಾಮಕ್ಕಿಳಿಸಿ, ಮೈಯ್ಯನ್ನು ಕಂಬಳದ ಅಂಕಣದಲ್ಲಿ ತೊಳೆಯಿಸಿ, ಕಂಬಳದ ಅಂಕಣದಲ್ಲಿ ಕೋಣಗಳಂತೆ ಸಾಗುವಂತೆ ಮಾಡುವ ಪದ್ಧತಿ ಆಚರಣೆಯಲ್ಲಿತ್ತು. ಹೀಗಾಗಿ ಈ ಅನಾಗರಿಕ ಸಂಪ್ರದಾಯ ಒಳಗೊಂಡಿದ್ದ ಕಂಬಳ ಸಾಂಸ್ಕೃತಿಕ ಹಿರಿಮೆ ಸಾರುವ ಮೈಸೂರು ದಸರಾ ವೇಳೆ ಆಯೋಜಿಸಿದರೆ ಮೈಸೂರಿನ ಹಿರಿಮೆಗೆ ಧಕ್ಕೆಯುಂಟಾಗುತ್ತದೆ ಎಂದು ಮಂಟೇಸ್ವಾಮಿ ಪರಂಪರೆ ಹೋರಾಟ ಸಮಿತಿ ಅಧ್ಯಕ್ಷ ಉಗ್ರ ನರಸಿಂಹೇಗೌಡ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಂಬಳ ಪದ್ಧತಿ ಹಿಂದೆ ಸಂವಿಧಾನ ವಿರೋಧೀ, ಆಮಾನವೀಯ ಆಚರಣೆಯಿದ್ದ ಹಿನ್ನೆಲೆಯ ಇದೆ. ಹೀಗಾಗಿ ದಸರಾ ವೇಳೆ ಅದನ್ನು ವೀಕ್ಷಿಸಿದ, ಅದರ ಹಿನ್ನೆಲೆಯ ಬಗ್ಗೆ ಕುತೂಹಲ ಹೊಂದುವ ಯಾರಾದರೂ ಮಾಹಿತಿ ತಿಳಿದರೆ ದಸರಾ ಪರಂಪರೆಗೆ ದೊಡ್ಡ ಅಪಖ್ಯಾತಿ ಬರುತ್ತದೆ. ಹೀಗಾಗಿ ದಸರಾ ವೇಳೆ ಕಂಬಳ ಆಯೋಜನೆ ಬೇಡ ಎಂದು ಮನವಿ ಮಾಡಿದರು. ಮಂಟೇಸ್ವಾಮಿ ಪರಂಪರೆಗೆ ಸಂಬಂಧಿಸಿದಂತೆ ಚಿಕ್ಕಲ್ಲೂರು ಜಾತ್ರೆ ವೇಳೆ ಪ್ರಾಣಿ ಬಲಿ ನಡೆಯುವುದಿಲ್ಲ, ಬದಲಾಗಿ ಪರಂಪರೆಯಂತೆ ಕುರಿ, ಆಡು, ಕೋಳಿ ಕುಯ್ದು ಪಂಕ್ತಿಸೇವೆ ಮಾತ್ರ ಮಾಡಲಾಗುತ್ತದೆ ಎಂಬ ವಾದದ ಕಾರಣ ಅಲ್ಲಿನ ಪಂಕ್ತಿಸೇವೆಗೆ ಹೈಕೋರ್ಟ್ ಅನುಮತಿ ನೀಡಿದೆ. ಹೀಗಾಗಿ ಇದುವರೆಗೂ ಕುರಿ, ಕೋಳಿ, ಆಡುಗಳನ್ನು ಚಿಕ್ಕಲ್ಲೂರಿಗೆ ಕೊಂಡೊಯ್ಯುವ ವೇಳೆ ವಶ ಪಡಿಸಿಕೊಳ್ಳುತ್ತಿದ್ದ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಉದ್ಧಟತನಕ್ಕೆ ತಡೆ ಬಿದ್ದಿದೆ. ಆದ್ದರಿಂದ ಪರಂಪರೆಯ ಅನುಯಾಯಿಗಳು ಎಂದಿನಂತೆ ಪಂಕ್ತಿಸೇವೆ ಮುಂದುವರಿಸಬಹುದಾಗಿದೆ ಎಂದರು. ಶಂಭುಲಿಂಗಸ್ವಾಮಿ, ಮಹದೇವ ಶಂಕನಪುರ ಇದ್ದರು.

## ಭಾರತೀಯ ಯುವ ಕಾಂಗ್ರೆಸ್‌ನ 'ಉತ್ತಮ ನಗರ' ಅಭಿಯಾನಕ್ಕೆ ಚಾಲನೆ



ಮೈಸೂರು: ನಗರದ ನಾಗರಿಕ ಸಮಸ್ಯೆಗಳು, ನಗರ ಕಾರ್ಮಿಕರ ಹಕ್ಕುಗಳು ಹಾಗೂ ಸಮಾನ ಮತ್ತು ಗೌರವಯುತ ನಗರ ಜೀವನದ ಉದ್ದೇಶದೊಂದಿಗೆ ಭಾರತೀಯ ಯುವ ಕಾಂಗ್ರೆಸ್ ವತಿಯಿಂದ "ಉತ್ತಮ ನಗರ" ಅಭಿಯಾನಕ್ಕೆ ಮೈಸೂರಿನಲ್ಲಿ ಚಾಲನೆ ನೀಡಲಾಯಿತು.

ಈ ಕುರಿತು ಮೈಸೂರು ನಗರ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಭಾರತೀಯ ಯುವ ಕಾಂಗ್ರೆಸ್‌ನ ಕೇರಳ ಉಸ್ತುವಾರಿ ನಾಗೇಶ್ ಕರಿಯಪ್ಪ, ಉತ್ತಮ ನಗರ ಅಭಿಯಾನವು ಯಾವುದೇ ಸರ್ಕಾರ ಅಥವಾ ರಾಜಕೀಯ ಪಕ್ಷದ ವಿರುದ್ಧದ ಕಾರ್ಯಕ್ರಮವಲ್ಲ, ಬದಲಾಗಿ ನಗರಗಳಲ್ಲಿ ವಾಸಿಸುವ ಮತ್ತು ದುಡಿಯುವ ಸಾಮಾನ್ಯ ಜನರ ಧ್ವನಿಯಾಗುವ ಜನಪರ ಅಭಿಯಾನ. "ಗೌರವ, ಹಕ್ಕು, ಸಂಘಟನೆ, ನಾಯಕತ್ವ" ಎಂಬ ನಾಲ್ಕು ಪ್ರಮುಖ ತತ್ವಗಳ ಮೇಲೆ ರೂಪುಗೊಂಡಿದೆ. ಭಾರತದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ನ್ಯಾಯ, ಸಮಾನತೆ, ಗೌರವ ಮತ್ತು ಸಹೋದರತ್ವದ ಭರವಸೆ ನೀಡಿದೆ. ಆದರೆ ನಗರಗಳ ಅಭಿವೃದ್ಧಿಯ ಲಾಭ ಮತ್ತು ಮೂಲಭೂತ ಸೌಲಭ್ಯಗಳು ಪ್ರತಿಯೊಬ್ಬ ನಾಗರಿಕನಿಗೂ ಸಮಾನವಾಗಿ ತಲುಪುತ್ತಿವೆಯೇ ಎಂಬುದನ್ನು ಪ್ರಶ್ನಿಸುವುದೇ ಈ ಅಭಿಯಾನದ ಉದ್ದೇಶವಾಗಿದೆ.

ಮೈಸೂರು ಈಗಾಗಲೇ ಸ್ವಚ್ಛತೆ, ಸಂಸ್ಕೃತಿ, ಪರಂಪರೆ ಹಾಗೂ ಜೀವನಮಟ್ಟಕ್ಕಾಗಿ ದೇಶದ ಹೆಮ್ಮೆಯ ನಗರವಾಗಿದೆ. ನಮ್ಮ ಉದ್ದೇಶ ಮೈಸೂರನ್ನು ಟೀಕಿಸುವುದಲ್ಲ, ಮೈಸೂರಿನ ಉತ್ತಮ ಗುಣಮಟ್ಟ ನಗರದ ಪ್ರತಿಯೊಂದು ಬಡಾವಣೆಗೂ, ಹೊರವಲಯಕ್ಕೂ ಮತ್ತು ಪ್ರತಿಯೊಬ್ಬ ಕಾರ್ಮಿಕನಿಗೂ ತಲುಪಬೇಕು ಎಂಬುದು ಎಂದು ತಿಳಿಸಿದರು. ಕೃಷ್ಣರಾಜ ವಿಧಾನಸಭಾ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಆರ್.ಹೊಯ್ಸಳ, ಎನ್.ಎಸ್.ಯು.ಐ ರಾಜ್ಯ ಕಾರ್ಯದರ್ಶಿ ಮಜೀದ್ ಹಿದಾಯತ್ ಖಾನ್, ಚಾಮರಾಜ ವಿಧಾನಸಭಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಂ.ಮನೋಜ್, ನರಸಿಂಹರಾಜ ವಿಧಾನಸಭಾ ಯುವ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಸಕ್ಲೇನ್, ಕೃಷ್ಣರಾಜ ವಿಧಾನಸಭಾ ಯುವ ಕಾಂಗ್ರೆಸ್ ವಾರ್ಡ್ ಅಧ್ಯಕ್ಷ ಕರಣ್ ಶ್ರೀಕಂಠಯ್ಯ, ರೋಹಿತ್ ಸಿಂಗ್, ನಿಥಿನ್ ಇತರರು ಇದ್ದರು.

# ನಿವೇಶನ ರದ್ದಿಗೂ ಆಗ್ರಹ

## 2019ರ ತನಿಖೆ ನಡೆಯಲಿ: ಎಂಎಲ್‌ಸಿ ರಘು



ಮೈಸೂರು: ರಾಜ್ಯ ಸರ್ಕಾರ ಮುಡಾ ನಿವೇಶನದಲ್ಲಿ ಹೊರಡಿಸಿರುವ ಆದೇಶ ಅಸ್ಪಷ್ಟವಾಗಿದ್ದು, ಸರ್ಕಾರಿ ಜಾಗ ಮರಳಿ ಪಡೆಯುವ ಇಚ್ಛಾಸಕ್ತಿ ನಿಜವಾಗಿಯೂ ಇದ್ದಲ್ಲಿ ಸ್ಪಷ್ಟ ಆದೇಶ ಹೊರಡಿಸಲಿ. 2019ರಿಂದಲೂ ಶೇ.50:50 ಹಾಗೂ ಬದಲಿ ನಿವೇಶನ ಎರಡನ್ನು ಮರಳಿ ಪಡೆಯುವ ಕೆಲಸ ಆಗಲಿ ಎಂದು ವಿಧಾನ ಪರಿಷತ್ ಸದಸ್ಯ ರಘು ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ 2023ರ ನಂತರದ ನಿವೇಶನವನ್ನು ಮರಳಿ ಪಡೆಯುವ ನಿಟ್ಟಿನಲ್ಲಿ ಆದೇಶ ಹೊರಡಿಸಿರುವುದು ಅಸ್ಪಷ್ಟವಾಗಿದೆ. ಅಲ್ಲದೆ, 1100ನಿವೇಶನಗಳು ಯಾರಿಗೆ ಸೇರಿದವು? ಅದರಲ್ಲಿ ಬದಲಿ ನಿವೇಶನಗಳೆಷ್ಟು ಎಂಬಿತ್ಯಾದಿ ಎಲ್ಲಾ ಮಾಹಿತಿಯನ್ನು ಜನರಿಗೆ ಬಹಿರಂಗ ಪಡಿಸಬೇಕಿದೆ. ಯಾವ ಕಾರಣಕ್ಕಾಗಿ ಕೇವಲ 2023ರ ನಂತರ ಪಡೆಯುತ್ತಿದ್ದೀರಿ ಎಂಬುದನ್ನು ತಿಳಿಸಬೇಕು. 2009ರಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಶೇ.40–60 ನಿಯಮ ಬರುತ್ತದೆ. ಅದಕ್ಕೆ ರೈತರು ಒಪ್ಪದಿರುವಾಗ 2015ರಲ್ಲಿ ಸಿದ್ದರಾಮಯ್ಯ ಕಾಲದಲ್ಲಿ ಶೇ.50–50 ನೀಡಲು ಮುಂದಾಗುತ್ತಾರೆ. ಆದರೆ, ಇವೆರಡರಲ್ಲಿಯೂ ಯಾವುದೇ ನಿವೇಶನ ಹಂಚಿಕೆಯೇ ಆಗಿಲ್ಲ. ಹೀಗಾಗಿ ಯಾವ ಮಾನದಂಡದ ಮೇಲೆ 1100 ನಿವೇಶನ ಹಂಚಿಕೆ ಆಗಿವೆ ಎಂಬುದು ಸ್ಪಷ್ಟವಾಗಿಲ್ಲವೆಂದರು.

ನಗರಾಭಿವೃದ್ಧಿ ಪ್ರಾಧಿಕಾರ ಭೂಸ್ವಾದೀನ ಮಾಡಿಕೊಂಡು ಮೂವತ್ತು ವರ್ಷ ಆಗಿದೆ. 2020ರ ನಕಲಿ ನಿರ್ದೇಶನ ಇಟ್ಟುಕೊಂಡು 10ಸಾವಿರ ಮಂಜೂರಾತಿ ಪತ್ರ ಹೋಗಿದ್ದು, ಎಷ್ಟು ನಿವೇಶನ ದರೋಡೆ ಆಗಿದೆ ಎಂಬುದಕ್ಕೆ ಅಂದಾಜು ಇಲ್ಲವಾಗಿದೆ. ಈ ಕೂಡಲೇ 2019ರ ನಂತರದ ಬದಲಿ ಹಾಗೂ ಶೇ.50:50 ನಿವೇಶನ ರದ್ದಿಗೂ ಕ್ರಮ ಕೈಗೊಳ್ಳಬೇಕು. ಮೈಸೂರು ಖಾಸಗಿ ಡೆವಲಪರ್ ಪ್ರಾಧಿಕಾರ ಎಂದು ಬದಲಿಸಿ ಕೆಲಸ ನಿರ್ವಹಣೆ ಮಾಡುವಷ್ಟರ ಮಟ್ಟಿಗೆ ಪ್ರಾಧಿಕಾರ ನಡವಳಿಕೆ ತೋರುತ್ತಿದೆ. ಅಳಿದುಳಿದ ನಿವೇಶನ ಲೂಟಿ ಮಾಡುವ ಕೇಂದ್ರ ಪ್ರಾಧಿಕಾರ ಎನ್ನುವಂತಾಗಿದೆ. ಕೃತಕ ದಾಖಲೆಗಳನ್ನು ಸೃಷ್ಟಿಸಿಕೊಂಡು ಬದಲಿ ಹಾಗೂ ಶೇ.50ಯಲ್ಲಿ ನಿವೇಶನ ಪಡೆದಿದ್ದಾರೆ. ಇದರಲ್ಲಿ ಸಚಿವರ ಕುಟುಂಬದವರೂ ಪಾಲುದಾರರಾಗಿರುವುದರಿಂದ ಬೇಲಿಗೆ ಸಚಿವರಾಗಿ ನೇಮಿಸಿ ಜವಾಬ್ದಾರಿ ನೀಡಲಾಗಿದೆ. ಈ ಬಗ್ಗೆ ಮಾಜಿ ಮುಖ್ಯಮಂತ್ರಿಗಳು ತಮ್ಮ ಪುತ್ರನಿಗೆ ಬದಲಿ ಖಾತೆ ನೀಡಲು ಹೇಳಿ ಪಾರದರ್ಶಕತೆ ತೋರುವ ಕೆಲಸ ಮಾಡಿಲ್ಲ. ದೇಸಾಯಿ ಆಯೋಗದ ವರದಿಯೇ ಪಕ್ಷಪಾತಿಯಾಗಿದೆ. ಸಾವಿರಾರು ಕೋಟಿ ಮೌಲ್ಯದ ಮುಡಾ ಆಸ್ತಿ ರಕ್ಷಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ನಿರ್ದೇಶನಾಲಯ ಜಾರಿಗೊಳಿಸಬೇಕು. ಸರ್ಕಾರದ ಆದೇಶ ಸಮರ್ಪಕವಾಗಿಲ್ಲ. ಇದನ್ನು ಪುನರ್ ಪರಿಶೀಲಿಸಬೇಕೆಂದು ಆಗ್ರಹಿಸಿದರು.

ಇದೇ ವೇಳೆ ವಿಧಾನ ಪರಿಷತ್ ನಲ್ಲಿ ಮೈಸೂರು ಮೆಡಿಕಲ್ ಕಾಲೇಜು ನಾಲ್ವಡಿಯವರ ಕೊಡುಗೆ ಆಗಿದ್ದು, ಅದಕ್ಕೆ ಅವರ ಹೆಸರನ್ನೇ ನಾಮಕರಣ ಮಾಡಬೇಕೆಂದು ಮನವಿ ಮಾಡಿರುವುದಾಗಿಯೂ ಹೇಳಿದರು. ಚಾಮುಂಡಿ ಕ್ರೀಡಾಂಗಣದಲ್ಲಿನ ಅವ್ಯವಸ್ಥೆ ಸರಿಪಡಿಸುವಂತೆ ಕೋರಲಾಗಿದೆ ಎಂದರು. ಬಿಜೆಪಿ ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್ ಇನ್ನಿತರರು ಇದ್ದರು.

> ಮುಡಾ ವಿಚಾರದಲ್ಲಿ ಆಯುಕ್ತರಾಗಿದ್ದ ನಟೇಶ ಹಣ್ಣು ತಿಂದಿದ್ದರೆ, ದಿನೇಶ ಉಳಿದಿದ್ದು ತಿನ್ನುವ ಕೆಲಸ ಆಗಿದೆ. ಹೀಗಾಗಿ ನಟೇಶ್ ಗೆ ಬಡ್ತಿ ನೀಡುವ ಮೂಲಕ ಸರ್ಕಾರ ಅವರನ್ನು ರಕ್ಷಿಸುವ ಕೆಲಸ ಮಾಡುತ್ತಿದೆ. ಹೀಗಾಗಿ ಅವರ ಮೇಲೂ ತನಿಖೆಯಾಗಬೇಕು. ಪ್ರಿಯಾಂಕ ಖರ್ಗೆಯವರು ಅಹಿಂದ ಸಂಘಟನೆ ನೊಂದಣಿ ಬಗ್ಗೆ ಮಾಹಿತಿ ಲೆಕ್ಕ ಕೊಡುವ ಕೆಲಸ ಮಾಡಬೇಕು. ದಾವಣಗೆರೆಯಲ್ಲಿ ನಡೆದ ಸಮಾವೇಶದ ಲೆಕ್ಕ ಕೊಡಲಿ. ಅನಂತರ ಆರ್ ಎಸ್ ಎಸ್ ಬಗ್ಗೆ ಮಾತನಾಡಲಿ. ಕುಡಿಯುವ ನೀರಿಗೆ ಸಮಸ್ಯೆ ತಲೆ ದೋರಿರುವ ಈ ಸಂದರ್ಭದಲ್ಲಿ ಕಂಬಳ ಬೇಡ ಎಂಬ ಸಲಹೆಯನ್ನೂ ಕಾವೇರಿ ನೀರು ನಿರ್ವಹಣಾ ಸಮಿತಿಯಲ್ಲೇ ಹೇಳಿದ್ದೇನೆ.
>
> ▸▸ **ರಘು** ವಿಧಾನ ಪರಿಷತ್ ಸದಸ್ಯ

### 2082ನೇ ಮದ್ಯವರ್ಜನ ಶಿಬಿರ

## ನವಜೀವನ ಸಮಿತಿಯ ಮೊದಲ ಮಾಸಿಕ ಸಭೆ

ಗುಂಡ್ಲುಪೇಟೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪಟ್ಟಣದ ಯೋಜನಾ ಕಚೇರಿಯಲ್ಲಿ 2082ನೇ ಮದ್ಯವರ್ಜನ ಶಿಬಿರದ ನವಜೀವನ ಸಮಿತಿಯ ಮೊದಲ ಮಾಸಿಕ ಸಭೆ ನಡೆಯಿತು.

ಸಭೆಯ ಆರಂಭದಲ್ಲಿ ದೇವಗೀತೆ ಹಾಗೂ ಧ್ಯೇಯಗೀತೆಯೊಂದಿಗೆ ಪ್ರಾರ್ಥನೆ ನೆರವೇರಿಸಲಾಯಿತು. ಬಳಿಕ ನವಜೀವನ ಸಮಿತಿ ಸದಸ್ಯರು ದೀಪ ಬೆಳಗಿಸುವ ಮೂಲಕ ಸಭೆಗೆ ಚಾಲನೆ ನೀಡಿದರು.

ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ಮುಖೇಶ್ ಮಾತನಾಡಿ, ನವಜೀವನ ಸಮಿತಿ ಸದಸ್ಯರಿಗೆ ಆರೋಗ್ಯದ ಮಹತ್ವ ಹಾಗೂ ನವಜೀವನ ಸಭೆಯ ಉದ್ದೇಶ ಮತ್ತು ಮಹತ್ವ ಕುರಿತು ಮಾಹಿತಿ ನೀಡಿದರು.

ಶಿಬಿರಾಧಿಕಾರಿ ನಾಗೇಂದ್ರ ಮಾತನಾಡಿ, ನವಜೀವನ ಸಮಿತಿಯ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿದರು. ಯೋಜನಾಧಿಕಾರಿ ಚಂದ್ರಶೇಖರ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕೃಷಿ ಮೇಲ್ವಿಚಾರಕರು, ನವಜೀವನ ಪೋಷಕರು ಹಾಗೂ ನವಜೀವನ ಸಮಿತಿ ಸದಸ್ಯರು ಭಾಗವಹಿಸಿದ್ದರು.



ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ದೇಶಭಕ್ತಿ ನಿತ್ಯ ನಮ್ಮೊಳಗೆ ಆವರಿಸಿಕೊಳ್ಳಲಿ: ವಾಸುದೇವ್ ಭಟ್



ಮೈಸೂರು: ದೇಶಭಕ್ತಿ ಎಂಬುದು ಕೇವಲ ಒಂದೆರೆಡು ತಿಂಗಳಿಗೆ ಮಾತ್ರ ಸೀಮಿತವಾಗಿರದೆ ಪ್ರತಿದಿನವೂ ನಮ್ಮೊಳಗೆ ಆವರಿಸಿಕೊಳ್ಳಬೇಕು ಎಂದು ಉದ್ಯಮಿ ಆರ್.ವಾಸುದೇವ ಭಟ್ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ವಿಜಯ ವಿಠಲ ಕಾಲೇಜಿನ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಬಹುಭಾಷಾ ದೇಶಭಕ್ತಿ ಗೀತಗಾಯನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ದೇಶಭಕ್ತಿಗೀತೆಯನ್ನು ಯಾವುದೇ ಭಾಷೆಯಲ್ಲಿ ಹಾಡಿದರೂ ಅದರ ಭಾವದಿಂದ ನಮಗೆ ಅರ್ಥವಾಗುತ್ತದೆ.ದೇಶಭಕ್ತಿ ಗೀತೆಗಳನ್ನು ಹಾಡುವಂತ ವಿದ್ಯಾರ್ಥಿಗಳು ನಿಜಕ್ಕೂ ದೇಶದ ಹೆಮ್ಮೆ, ಬಹುಮಾನಕ್ಕೆ ಹಾಡುವುದಕ್ಕಿಂತ ದೇಶಭಕ್ತಿಯನ್ನು ಹೊರಹೊಮ್ಮುವಂತಹ ಹಾಡನ್ನು ಹಾಡುವುದು ನಿಜವಾದ ದೇಶಭಕ್ತಿಯನ್ನು ತೋರುತ್ತದೆ ಎಂದು ಹೇಳಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಜಯಲಕ್ಷ್ಮಿ ಮಾತನಾಡಿ, ಎಲ್ಲಾ ಭಾಷೆಗಳ ಹಾಡುಗಳನ್ನು ಒಂದೇ ಸೂರಿನಡಿ ಕೇಳುವುದು ಸಂತಸದ ವಿಷಯ, ಪುಟ್ಟ ಭಾರತವೇ ಮೇಳೈಸಿದೆ.ಚಿಕ್ಕ ವಯಸ್ಸಿನಿಂದಲೇ ಮಕ್ಕಳಲ್ಲಿ ದೇಶಭಕ್ತಿಯ ಬಗ್ಗೆ ಅರಿವು ಮೂಡಿಸುವ ಇಂತಹ ಕೆಲಸಗಳು ಶ್ಲಾಘನೀಯ ಎಂದರು. ಸ್ಪರ್ಧೆಯಲ್ಲಿ 10 ರಿಂ 18 ರ ವಯೋಮಾನದ ಒಟ್ಟು 59 ವಿದ್ಯಾರ್ಥಿಗಳು ಮೇಘಾಲಯ, ಮಣಿಪುರಿ, ಅಸ್ಸಾಮಿ, ಕನ್ನಡ, ಹಿಂದಿ ಮುಂತಾದ ವಿವಿಧ ಹನ್ನೆರಡು ಭಾಷೆಯ ದೇಶಭಕ್ತಿ ಗೀತೆಗಳನ್ನು ಹಾಡಿದರು. ವೇದಿಕೆಯಲ್ಲಿ ಪ್ರಾಂತ ಹಾಗು ವಲಯ ಪ್ರಮುಖ್ ಡಾ.ವಿ.ರಂಗನಾಥ್, ಡಾ.ರಾಘವೇಂದ್ರ ಶೆಟ್ಟಿ, ಜಿಲ್ಲಾಧ್ಯಕ್ಷ ಎಸ್.ಸುಬ್ರಹ್ಮಣ್ಯ ಹಾಜರಿದ್ದರು.

### ಇಂದು ವಿದ್ಯುತ್ ವ್ಯತ್ಯಯ

ರಾಮನಗರ: 66/11 ಕೆವಿ ಚನ್ನಪಟ್ಟಣ ಸ್ವೀಕರಣ ಕೇಂದ್ರದ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳಲಾಗಿದೆ. ಆದಕಾರಣ ಚನ್ನಪಟ್ಟಣ ನಗರ, ಮಹದೇಶ್ವರನಗರ, ಅಂಬೇಡ್ಕರ್‌ನಗರ, ಕೆ.ಎಚ್.ಬಿ, ಟಿಪ್ಪುನಗರ, ಅಪ್ಪಗೆರೆ, ಮಂಗಳವಾರಪೇಟೆ, ಚಿಕ್ಕಮಳ್ಳೂರು, ಬ್ರಹ್ಮಣೀಪುರ, ಹೊಂಗನೂರು, ಕೂಡ್ಲೂರು, ಎಸ್,ಎಸ್,ಮಿಲ್, ಮುದುಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಆ.22ರ ಬೆಳ್ಗಿಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ರಾಮನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ಸಹಕಾರದಿಂದ ಸಹಕಾರ ಸಂಘಗಳ ಅಭಿವೃದ್ಧಿ



ಗುಂಡ್ಲುಪೇಟೆ, :–: ಸಹಕಾರ ಸಂಘಗಳ ಅಭಿವೃದ್ಧಿಗೆ ಸರ್ವ ಸದಸ್ಯರ ಸಹಕಾರ ಅತ್ಯಗತ್ಯ. ರಾಜಕೀಯವೇ ಬೇರೆ, ಸಹಕಾರ ಕ್ಷೇತ್ರವೇ ಬೇರೆ. ವೈಯಕ್ತಿಕ ದ್ವೇಷಗಳನ್ನು ಬದಿಗಿಟ್ಟು ಸಂಘದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕ ಹಾಗೂ ಶಾಸಕ ಎಚ್.ಎಂ.ಗಣೇಶಪ್ರಸಾದ್ ಹೇಳಿದರು.

ತಾಲೂಕಿನ ಭೋಗಯ್ಯನಹುಂಡಿ ಗ್ರಾಮದಲ್ಲಿ ಕೋಟೆಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆ ಹಾಗೂ ರೈತರಿಗೆ ಬೆಳೆ ಸಾಲದ ಚೆಕ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಹಕಾರ ಬ್ಯಾಂಕ್‌ಗಳಲ್ಲಿಯೂ ಸಿಬಿಲ್ ಸ್ಕೋರ್ ಪರಿಗಣನೆಯಲ್ಲಿದ್ದರೂ, ಕೋಟೆಕೆರೆ ಕೃಷಿ ಪತ್ತಿನ ಸಹಕಾರ ಸಂಘ ಸೇರಿದಂತೆ ಹಲವು ಸಂಘಗಳಲ್ಲಿ ಶೇ.90ರಷ್ಟು ಸಾಲ ವಸೂಲಾತಿಯಾಗಿರುವ ಹಿನ್ನೆಲೆಯಲ್ಲಿ ಸಾಲ ವಿತರಿಸುವಂತೆ ಸೂಚಿಸಲಾಗಿದೆ. ರೈತರು ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸುವ ಮೂಲಕ ಸಹಕಾರ ಬ್ಯಾಂಕ್‌ಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.ಕೋಟೆಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ ಮಾತನಾಡಿದರು. ಕೋಟೆಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 38 ಸದಸ್ಯರಿಗೆ ಒಟ್ಟು ?51.10 ಲಕ್ಷ ಬೆಳೆ ಸಾಲದ ಚೆಕ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಚಾಮುಲ್ ನಿರ್ದೇಶಕ ಎಚ್ ಎಸ್ ನಂಜುಂಡಪ್ರಸಾದ್, ಕಾಡ ಮಾಜಿ ಅಧ್ಯಕ್ಷ ನಂಜಪ್ಪ ಹಿರಿಯ ಮುಖಂಡ. ನೀಲಕಂಠಪ್ಪ, ಉಪಾಧ್ಯಕ್ಷ ರಾಮಕೃಷ್ಣ, ರತ್ನಮ್ಮ ಸೇರಿದಂತೆ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ರೈತರು ಉಪಸ್ಥಿತರಿದ್ದರು.

## ವರಮಹಾಲಕ್ಷ್ಮೀ ಹಬ್ಬ ಆಚರಿಸಿದ ಸ್ತ್ರೀಯರು



ಚಾಮರಾಜನಗರ: ಚಾಮರಾಜನಗರ ಜಿಲ್ಲೆಯಲ್ಲಿ ವರಮಹಾಲಕ್ಷ್ಮಿ ಹಬ್ಬವನ್ನು ಸಡಗರ,ಸಂಭ್ರಮದಿಂದ ಆಚರಿಸಲಾಯಿತು.

ಹೊಸ ಸೀರೆ ಧರಿಸಿ ಕಂಗೊಳಿಸುತ್ತಿದ್ದ ಸುಮಂಗಲಿಯರು ಮನೆಗಳಲ್ಲಿ ಮಹಾಲಕ್ಷ್ಮಿಯ ಪ್ರತಿ ಸ್ಥಾಪಿಸಿ, ಹೂವು, ಚಿನ್ನಾಭರಣಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಿದರು.ಹೆಣ್ಣುಮಕ್ಕಳು ಜೊತೆಯಾದರು ಮನೆಗಳಲ್ಲಿ ಲಕ್ಷ್ಮಿ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ, ವಿಶೇಷ ಅಲಂಕಾರ ಮಾಡಿ, ಪೂಜೆಗಳನ್ನು ಸಲ್ಲಿಸಿ, ನೆರೆಹೊರೆಯವರನ್ನು, ಬಂಧು–ಬಾಂಧವರನ್ನು ಆಹ್ವಾನಿಸಿ, ಕುಂಕುಮಾರ್ಚನೆ ಮಾಡುವುದು ಈ ಹಬ್ಬದ ಒಂದು ವಿಶೇಷತೆ. ಹಿಂದೂ ಧರ್ಮದಲ್ಲಿ ವರಮಹಾಲಕ್ಷ್ಮಿ ಹಬ್ಬವು ಬಹಳ ಮುಖ್ಯವಾದ ಹಬ್ಬವಾಗಿದೆ. ಈ ದಿನ ಲಕ್ಷ್ಮಿ ದೇವಿಯನ್ನು ಪೂಜಿಸುವುದರಿಂದ ಮನೆಯಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸುತ್ತದೆ ಎಂಬ ನಂಬಿಕೆ . ಮನೆ ಮನೆಗಳಲ್ಲಿ ಶುಕ್ರವಾರ ಹಬ್ಬದ ವಾತಾವರಣ ಕಂಡು ಬಂತು. ಮನೆಗಳನ್ನು ಬಾಳೆ ಕಂದು, ಮಾವಿನ ಸೊಪ್ಪು, ಕಬ್ಬು ತೋರಣಗಳಿಂದ ಸಿಂಗರಿಸಲಾಗಿತ್ತು. ಮನೆಗಳ ಮುಂಭಾಗ ಮಹಿಳೆಯರು ಆಕರ್ಷಕ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಹಬ್ಬಕ್ಕೆ ಕಳೆ ಕಟ್ಟಿಸಿದರು.

### ಮಣಿಪಾಲ್ ವೃತ್ತದಿಂದ ಮಿಲಿ ನಿಯಂ ವೃತ್ತದ ತನಕ 2.2ಕಿಮೀ ವೈಟ್ ಟಾಪಿಂಗ್

# ವೈಟ್ ಟಾಪಿಂಗ್ ರಸ್ತೆ ಕಾಮಗಾರಿಗೆ ತನ್ವೀರ್ ಸೇಠ್ ಚಾಲನೆ



ಮೈಸೂರು: ನಗದ ಮಣಿಪಾಲ್ ವೃತ್ತದಿಂದ ಮಿಲಿನಿಯಂ ವೃತ್ತದ ತನಕ 2.2ಕಿಮೀ ವೈಟ್ ಟಾಪಿಂಗ್ ರಸ್ತೆಗೆ ಶಾಸಕ ತನ್ವೀರ್ ಸೇಠ್ ಶನಿವಾರ ಭೂಮಿ ಪೂಜೆ ಸಲ್ಲಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಭೂಮಿಪೂಜೆ ಸಲ್ಲಿಸಿದ ಬಳಿಕ ಶಾಸಕ ತನ್ವೀರ್ ಸೇಠ್ ಮಾತನಾಡಿ, ನಗರದಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವ ಕಾರಣದಿಂದ 12 ಪ್ರಮುಖ ರಸ್ತೆಗಳಿಗೆ ವೈಟ್ ಟ್ಯಾಪಿಂಗ್ ಕಾಂಕ್ರಿಟ್ ರಸ್ತೆಗೆ ಲೋಕೋಪಯೋಗಿ ಇಲಾಖೆ ಮೂಲಕ ಕಾಮಗಾರಿ ನಡೆಸಲು ಸರ್ಕಾರ ಅನುದಾನ ಬಿಡುಗಡೆ ಮಾಡಿದೆ.

ಸಿದ್ದರಾಮಯ್ಯ ಸಿಎಂ ಆಗಿದ್ದಾಗಲೇ ಇದರ ಸಾಮೂಹಿಕ ಶಂಕುಸ್ಥಾಪನೆ ನಡೆದಿತ್ತು, ತಾಂತ್ರಿಕ ವರದಿ ಸಿದ್ದವಾದ ನಂತರ ದಸರಾ ಹಬ್ಬಕ್ಕೂ ಮುನ್ನ ಅಭಿವೃದ್ಧಿಪಡಿಸಬಹುದಾದ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದ್ದು, ಇದರಲ್ಲಿ ಎನ್ ಆರ್ ಕ್ಷೇತ್ರದ ಮೂರು ರಸ್ತೆಗಳಿಗೆ ವೈಟ್ ಟ್ಯಾಪಿಂಗ್ ಮಾಡಲಾಗುತ್ತಿದೆ. ಪ್ರಮುಖವಾಗಿ ಇಂದು ಭೂಮಿ ಪೂಜೆ ನಡೆದಿರುವ ಮಣಿಪಾಲ್ ವೃತ್ತದಿಂದ ಮಿಲಿನಿಯಂ ವೃತ್ತದವರೆಗಿನ 2.2 ಕಿಮೀ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದ್ದು, ಈ ಕಾಮಗಾರಿಯನ್ನು ದಸರಾ ಹಬ್ಬಕ್ಕೂ ಮುನ್ನ ಮುಗಿಸಿ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದರು. ವೈಟ್ ಟಾಪಿಂಗ್ ರಸ್ತೆಗಳಿಗೆ ಒಟ್ಟು 121 ಕೋಟಿ ರೂ ಮೀಸಲು ಇಡಲಾಗಿದೆ. 67 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ, ಯಾವುದೇ ಸಮಸ್ಯೆ ಇಲ್ಲದ ನಿರ್ವಹಣೆ ವೆಚ್ಚ ಕಡಿಮೆಯಾಗಿ ರಸ್ತೆಗಳ ಬಾಳಿಕೆ ಮತ್ತು ಸಂಚಾರ ಗುಣಮಟ್ಟ ಉತ್ತಮವಾಗಿರುತ್ತದೆ. ಅದರಂತೆ ಮೈಸೂರು ನಗರದ ವ್ಯಾಪ್ತಿಯಲ್ಲಿನ ಅಧಿಕ ವಾಹನ ದಟ್ಟಣೆ ಇರುವ ಪ್ರಮುಖ ರಸ್ತೆಗಳನ್ನು ಗುರುತಿಸಿ, ಸದರಿ ರಸ್ತೆಗಳ ಧೀರ್ಘಬಾಳಿಕೆಯ ಉದ್ದೇಶದಿಂದ ಮೈಸೂರು ನಗರ ವ್ಯಾಪ್ತಿಯಲ್ಲಿನ ಪ್ರಮುಖ 12 ರಸ್ತೆಗಳಲ್ಲಿ ಒಟ್ಟು 46.088 ಕಿಮೀ ಉದ್ದಕ್ಕೆ ರೂ. 393.85 ಕೋಟಿಗಳ ವೆಚ್ಚದಲ್ಲಿ ವೈಟ್ ಟಾಪಿಂಗ್ ಮಾಡಿ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿರುತ್ತದೆ ಎಂದು ಹೇಳಿದರು.

ವೈಟ್‌ಟಾಪಿಂಗ್ ಕಾಮಗಾರಿಯಲ್ಲಿ ವೈಟ್ ಟಾಪಿಂಗ್ ಕ್ಯಾರೇಜ್–ವೇ, ಮುಂದಿನ ದಿನಗಳಲ್ಲಿ ಒಳಚರಂಡಿ ನೀರು ಸರಬರಾಜು ಹಾಗೂ, ವಿದ್ಯುತ್ ಕೇಬಲ್‌ಗಳನ್ನು ಅಳವಡಿಸಲು ರಸ್ತೆಗೆ ಹೊಂದಿಕೊಂಡಂತೆ ಪೇವರ್ ಬ್ಲಾಕ್ ಅಳವಡಿಸಿ ಬಫರ್ ಜೋನ್ ಪ್ರಾವಧಾನ, ಪಾದಚಾರಿಗಳ ಸುಗಮ ಸಂಚಾರಕ್ಕೆ ಫುಟ್ ಪಾತ್ ಅಭಿವೃದ್ಧಿ ಕಾಮಗಾರಿ, ಮಳೆ ನೀರು ಸರಾಗವಾಗಿ ಹರಿಯಲು ಆರ್.ಸಿ.ಸಿ ಚರಂಡಿ ಮತ್ತು ಕಲ್ವರ್ಟ್ ನಿರ್ಮಾಣ, ರಸ್ತೆಯ ವಿಭಜಕಗಳಲ್ಲಿ ಪಾರಂಪರಿಕ ವಿದ್ಯುತ್ ದೀಪ ಅಳವಡಿಸುವುದು, ಹಾಲಿ ಇರುವ ರಸ್ತೆಯ ನೀರು ಸರಬರಾಜು ವ್ಯವಸ್ಥೆ ಹಾಗೂ ಒಳಚರಂಡಿಯ ಕೊಳವೆ ಮಾರ್ಗಗಳನ್ನು ಸ್ಥಳಾಂತರಿಸುವುದು ಕಾಮಗಾರಿಯಲ್ಲಿವೆ ಎಂದರು.

ಈ ಸಂದರ್ಭದಲ್ಲಿ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್, ಕೆಪಿಸಿಸಿ ಸಂಯೋಜಕ ಶೌಕತ್ ಅಲಿಖಾನ್, ಮಜೀದ್ ಅಹಮದ್, ನಬಿಜಾನ್, ಮುಖಂಡರಾದ ಎನ್. ಮಾದೇಗೌಡ, ನೂರ್ ಅಹಮದ್, ಅಬ್ದುಲ್ ವಸೀಂ, ಇರ್ಫಾನ್, ಸೈಯದ್ ಫಾರೂಖ್, ಅಫ್ತಾಬ್ ಅಫು, ಅಕ್ಮಲ್, ಶಾಕಿರಾ ಬೇಗಂ, ಪ್ರದೀಪ್ ಚಂದ್ರ ಇತರರು ಇದ್ದರು.

### ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ

# ಸ್ಕೌಟ್ ಗೈಡ್ಸ್ ತೃತೀಯ ಸೋಪಾನ ಟೆಸ್ಟಿಂಗ್ ಶಿಬಿರಕ್ಕೆ ಚಾಲನೆ



ಚನ್ನಪಟ್ಟಣ: ಕೆಂಗಲ್ ಸಮೀಪದ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ 2026ನೇ ಸಾಲಿನ ತೃತೀಯ ಸೋಪಾನ ಟೆಸ್ಟಿಂಗ್ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಆಗಸ್ಟ್ 20ರಿಂದ 23ರವರೆಗೆ ನಡೆಯಲಿರುವ ಶಿಬಿರದಲ್ಲಿ ಕರ್ನಾಟಕದ ವಿವಿಧ ಕೇಂದ್ರೀಯ ವಿದ್ಯಾಲಯಗಳಿಂದ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು, ತರಬೇತುದಾರರು ಹಾಗೂ ಸ್ಕೌಟ್ಸ್?ಗೈಡ್ಸ್ ಅಧಿಕಾರಿಗಳು ಭಾಗವಹಿಸಿದ್ದಾರೆ.

ರಾಷ್ಟ್ರೀಯ ಮಟ್ಟದ ಯೋಗ ಮತ್ತು ಮಲ್ಲಕಂಬ ತರಬೇತುದಾರ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಗಳಿಸಿರುವ ಶ್ರೀಶೈಲ ಈರಪ್ಪ ಹೂಗಾರ್ ಅವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು. ಸ್ಕೌಟ್ಸ್ ಗೈಡ್ಸ್ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸೇವಾ ಮನೋಭಾವ, ನಾಯಕತ್ವದ ಗುಣ ಹಾಗೂ ಸಮಯಪಾಲನೆಯನ್ನು ಬೆಳೆಸುತ್ತವೆ. ಸಮಯ ಅತ್ಯಂತ ಅಮೂಲ್ಯವಾಗಿದ್ದು, ವಿದ್ಯಾರ್ಥಿಗಳು ಸಮಯವನ್ನು ಸದುಪಯೋಗಪಡಿಸಿಕೊಂಡು ತಮ್ಮ ಗುರಿಯತ್ತ ಮುನ್ನಡೆಯಬೇಕು ಎಂದು ಸಲಹೆ ನೀಡಿದರು. ಶಿಬಿರ ಯಶಸ್ವಿಯಾಗಲಿ ಎಂದು ಹಾರೈಸಿದ ಅವರು, ಆಯೋಜಕರನ್ನು ಅಭಿನಂದಿಸಿದರು.

ಶಾಲೆಯ ಪ್ರಾಂಶುಪಾಲರಾದ ನಿಶಾ ಎಂ. ಮೋಹನ್ ಅವರು ವಿದ್ಯಾರ್ಥಿಗಳು, ತರಬೇತುದಾರರು, ಅಧಿಕಾರಿಗಳು ಹಾಗೂ ಶಿಕ್ಷಕರನ್ನು ಸ್ವಾಗತಿಸಿ ಮಾತನಾಡಿ, ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಸದೃಢತೆಯನ್ನೂ ಹೆಚ್ಚಿಸುತ್ತವೆ. ಶಿಕ್ಷಣದೊಂದಿಗೆ ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಸಮನ್ವಯಗೊಳಿಸಿಕೊಂಡು ವಿದ್ಯಾರ್ಥಿಗಳು ಮುನ್ನಡೆಯಬೇಕು ಎಂದು ತಿಳಿಸಿದರು. ಶಿಬಿರದ ಉಸ್ತುವಾರಿಯನ್ನು ಬೆಂಗಳೂರಿನ ಕೇಂದ್ರೀಯ ವಿದ್ಯಾಲಯದ ಟಿಜಿಟಿ ಆಂಗ್ಲ ಭಾ?ಾ ಶಿಕ್ಷಕರಾದ ಶ್ರೀ ಸರವಣನ್ ಅವರು ವಹಿಸಿಕೊಂಡಿದ್ದಾರೆ. ಶಾಲೆಯ ಶಿಕ್ಷಕರಾದ ಜಲಜ, ಬೀನಾ, ಶೋಭಿತ, ಪೂರ್ಣಚಂದ್ರ ಸೇರಿದಂತೆ ಶಿಕ್ಷಕರು ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕೆಜಿ ಕೊಪ್ಪಲಿನಲ್ಲಿ ಶ್ರೀಮದ್ ದಿವ್ಯ ಬ್ರಹ್ಮರಥೋತ್ಸವ

ಮೈಸೂರು: ನಗರದ ಕನ್ನೇಗೌಡನ ಕೊಪ್ಪಲಿನ ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸಮಿತಿಯಿಂದ 23ನೇ ವರ್ಷದ ಶ್ರೀಮದ್ ದಿವ್ಯ ಬ್ರಹ್ಮರಥೋತ್ಸವ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ ಅದ್ದೂರಿಯಾಗಿ ನೆರವೇರಿತು.

ಎರಡು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿ ಶನಿವಾರ ಬೆ.7ಕ್ಕೆ ಶ್ರೀ ಮದ್ ದಿವ್ಯ ಬ್ರಹ್ಮರಥೋತ್ಸವವು ಜಾನಪದ ಕಲಾತಂಡಗಳ ಮೆರವಣಿಗೆಯೊಂದಿಗೆ ದೇವಾಲಯದಿಂದ ಹೊರಟು ಕನ್ನೇಗೌಡನ ಕೊಪ್ಪಲಿನ ವಿವಿಧ ರಸ್ತೆ ಹಾಗೂ ಜಯನಗರ ನಾನಾ ರಸ್ತೆಗಳಲ್ಲಿ ಸಂಚರಿಸಿ ದೇವಾಲಯಕ್ಕೆ ಮರಳಿತು. 12.30ಕ್ಕೆ ಅನ್ನ ಸಂತರ್ಪಣೆ ಸಾವಿರಾರು ಮಂದಿ ಭಾಗವಹಿಸಿ ಗಮನ ಸೆಳೆದರು.

ಶ್ರೀ ನಂಜಾವಧೂತ ಸ್ವಾಮೀಜಿ, ಶಾಸಕ ಕೆ.ಹರೀಶ್ ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಸಮಿತಿಯ ಗೌರವಾಧ್ಯಕ್ಷ ಎಂ.ಶಿವಕುಮಾರ್, ಅಧ್ಯಕ್ಷ ರಾಜಣ್ಣ, ಉಪಾಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಸಿ.ರಮೇಶ್, ಖಜಾಂಚಿ ರಾಜು, ಸಹಕಾರ್ಯದರ್ಶಿ ಕೆ.ಎಂ.ರಾಜಣ್ಣ, ಪತ್ರಿಕಾಕಾರ್ಯದರ್ಶಿ ಕೆ.ದೇವೇಗೌಡ, ಸಂಚಾಲಕ ನಾಗಣ್ಣ, ಸದಸ್ಯರಾದ ಎಸ್.ಬಾಲು, ಡಿ.ರಮೇಶ್, ಎಂ.ಪುಟ್ಟಸ್ವಾಮಿ, ಕುಮಾರಗೌಡ, ಎಂ.ಬಂದಣ್ಣ, ಚನ್ನೇಗೌಡ, ಶಂಭಣ್ಣ, ಬಿ.ಜಗದೀಶ್, ಆರ್. ರಾಜುಕುಮಾರ್, ಪಿ.ಪುಟ್ಟಸ್ವಾಮಿ, ಎಂ.ಈ.ಚೇತನ್, ಭಾಸ್ಕರ್ ಎಲ್. ಗೌಡ ಇನ್ನಿತರರು ಇದ್ದರು.



# ಚಿದಾನಂದ ಸ್ವಾಮೀಜಿಗೆ ನಮನ



ಮೈಸೂರು: ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಣ್ಯರು ಇತ್ತೀಚೆಗೆ ಲಿಂಗೈಕ್ಯರಾದ ಶ್ರೀ ಹೊಸಮಠದ ಚಿದಾನಂದ ಸ್ವಾಮೀಜಿಗಳವರಿಗೆ ನುಡಿನಮನ ಸಲ್ಲಿಸಲಾಯಿತು.

ಮೊದಲಿಗೆ ಸಂಸ್ಕೃತಿ ಚಿಂತಕ ಕೆ. ರಘುರಾಂ ವಾಜಪೇಯಿ ಮಾತನಾಡಿ, ಶ್ರೀಗಳು ನಗರದ ಇತಿಹಾಸದ ಜೊತೆ ಹಾಸುಹೊಕ್ಕಾಗಿದ್ದ ಸಂತ, ದಾರ್ಶನಿಕರಾಗಿದ್ದರು. ಸದಾ ಮೌನಿಂಯಾಗಿದ್ದ ಅವರ ದರ್ಶನ ಮಾಡಿದರೆ ಸಾಕು ಮನಸ್ಸಿನಲ್ಲಿನ ಅನೇಕ ಪ್ರಶ್ನೆಗಳಿಗೆ ಪರಿಹಾರ ದೊರೆಯುತ್ತಿದ್ದವು. ಅವರ ಆದರ್ಶ ಎತ್ತರದ್ದಾಗಿದ್ದವು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರೆಂದರು.

ಸಾಹಿತಿ ಡಾ.ಎಸ್.ಶಿವರಾಜಪ್ಪ ಮಾತನಾಡಿ, ಸ್ವಾಮೀಜಿ ಯಾರಿಂದಲೂ ಕಾಣಿಕೆ ಸ್ವೀಕರಿಸುತ್ತಿರಲಿಲ್ಲ. ಅವರು ಸಮಾಜದಿಂದ ಏನನ್ನೂ ಪಡೆಯದೇ ಹೆಚ್ಚಿನದನ್ನು ನೀಡಿದ್ದಾರೆ. ಸನ್ಯಾಸಿ, ಜಂಗಮ ಹೇಗಿರಬೇಕೆಂಬುದಕ್ಕೆ ನಿದರ್ಶನವಾಗಿದ್ದರು. ಯಾವುದೇ ಮೂಢನಂಬಿಕೆ, ಕಂದಾಚಾರ ಅನುಸರಿಸುತ್ತಿರಲಿಲ್ಲ. ಮಹಿಳಾ ಶಿಕ್ಷಣದಿಂದ ಇಡೀ ಸಮಾಜ ಉನ್ನತಿಗೇರುತ್ತದೆ ಎಂಬ ಕಾರಣದಿಂದ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿಯೇ ಅನೇಕ ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದರೆಂದು ಸ್ಮರಿಸಿದರು. ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಲಯನ್ ಗೋಲ್ಡನ್ ಟಿ. ಸುರೇಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರಸ್ವಾಮಿ ಹಾಜರಿದ್ದರು

# ಖರ್ಗೆಗೆ ಅಪಮಾನ: ನಾಳೆ ಪ್ರತಿಭಟನೆ



ಮೈಸೂರು: ಉತ್ತರಾಖಾಂಡದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಅಪಮಾನ ಮಾಡಿದ ಘಟನೆ ಖಂಡಿಸಿ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಆ.24ರಂದು ಡಿಸಿ ಕಚೇರಿ ಮೂಲಕ ರಾಷ್ಟ್ರಪತಿ, ಪ್ರಧಾನಿ ಮೊದಲಾದವರಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸದರಿ ಪ್ರಕರಣ ದೇಶದ ಇಡೀ ಬಹುಸಂಖ್ಯಾತರಿಗೆ ಮಾಡಿದ ಅಪಮಾನ. ಮಲ್ಲಿಕಾರ್ಜುನ ಖರ್ಗೆ ಸಹಾ ಮೌನ ಮುರಿಯಬೇಕಾಗಿತ್ತು. ಅವರು ಭಾಷಣ ಮಾಡಿದ ಸ್ಥಳವನ್ನು ಕೆಲವರು ಗಂಜಲ ಮೊದಲಾದವುಗಳಿಂದ ಶುದ್ಧೀಕರಿಸಿರುವುದು ಅಸ್ಪೃಶ್ಯತೆ ಆಚರಣೆಯಾಗಿದೆ. ಇದರ ವಿಡಿಯೋಗಳು ಸಹಾ ಎಲ್ಲೆಡೆ ಹರಿದಾಡಿವೆ. ಹೀಗಿದ್ದರೂ ಸಹಾ ಸಂಬಂಧಿಸಿದವರು ಅವರ ವಿರುದ್ಧ ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಆ. 24 ರಂದು ಪ್ರತಿಭಟಿಸಲಾಗುವುದು. ನಂತರವೂ ಕ್ರಮ ಕೈಗೊಳ್ಳದಿದ್ದರೆ ಮೈಸೂರು, ಕರ್ನಾಟಕ ಬಂದ್‌ಗೆ ಕರೆ ನೀಡುವುದು ಅನಿವಾರ್ಯವಾಗಲಿದೆ ಎಂದರು.


ದೇಶದ ಸ್ವಘೋಷಿತ ಸ್ಪೃಶ್ಯ ಮನಸ್ಸುಗಳು ಪಾರಂಪರಿಕ ಅಸ್ಪೃಶ್ಯತೆ ಆಚರಣೆಯಲ್ಲಿ ಮಾನಸಿಕ ಸ್ಥಿಮಿತತೆ ಕಳೆದುಕೊಂಡಂತೆ ಕಾಣುತ್ತಿದೆ. ದೇಶದ ಅನೇಕ ಪ್ರಸಿದ್ಧ ಮಾನವ ನಿರ್ಮಿತ ಹಾಗೂ ಪ್ರಕೃತಿ ನಿರ್ಮಿತ ತಾಣಗಳು ವಿಶ್ವಖ್ಯಾತಿ ಪಡೆದಿವೆ. ಆದರೆ ಇಲಿನ ಅಸ್ಪೃಶ್ಯತೆ ಆಚರಣೆ ದೇಶಕ್ಕೆ ಕಳಂಕ ತರುತ್ತಿದೆ. ಭಾರತ ಪದವೀಧರರ ದೇಶವಾಗುತ್ತಿದೆಯೇ ಹೊರತು ಬೌದ್ಧಿಕವಾಗಿ ಈ ನೆಲದಲ್ಲಿ ಗಟ್ಟಿತನದಿಂದ ಬದುಕುವ ಹಿನ್ನೆಲೆಯಿಂದ ಬದುಕಿನ ವಾಸ್ತವದ ಶಿಕ್ಷಣ ಪಡೆಯುವವರ ದೇಶವಾಗುತ್ತಿಲ್ಲದಿರುವುದು ಬೇಸರದ ಸಂಗತಿ ಎಂದರು. ಅಶೋಕಪುರಂ ಆದಿ ಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಸುನಿಲ್, ಮಹೇಶ್, ಆಟೋ ಪುಟ್ಟರಾಜು, ನಾಗರಾಜು ಇದ್ದರು.

# ತಂತಿ ಬೇಲಿ, ಪ್ರವೇಶ ದ್ವಾರ ಧ್ವಂಸ

## ಮೂವರ ಗುಂಡಿನ ಚಕಮಕಿ ಪ್ರಕರಣ: ತೋಮಿಯಾರ್ ಪಾಳ್ಯದ ಬಳಿ ಘಟನೆ

ಚಾಮರಾಜನಗರ: ಹನೂರು ತಾಲೂಕಿನ ಕಾವೇರಿ ವನ್ಯಜೀವಿಧಾಮದ ಶಾಗ್ಯ ವಿಭಾಗದಲ್ಲಿ ನಡೆದ ಮೂವರ ಗುಂಡಿನ ಚಕಮಕಿ ಘಟನೆಯ ಬೆನ್ನಲ್ಲೇ, ಕಿಡಿಗೇಡಿಗಳು ಸೌರಶಕ್ತಿ ತಂತಿ ಬೇಲಿ ಹಾಗೂ ಪ್ರವೇಶ ದ್ವಾರಗಳನ್ನು ಧ್ವಂಸಗೊಳಿಸಿರುವ ಘಟನೆ ತೋಮಿಯಾರ್ ಪಾಳ್ಯದ ಬಳಿ ನಡೆದಿದೆ.

ಕಾಡಿನಿಂದ ನಾಡಿಗೆ ಕಾಡುಪ್ರಾಣಿಗಳು ನುಗ್ಗದಂತೆ ತಡೆಯಲು ಅರಣ್ಯ ಇಲಾಖೆಯು ಅಳವಡಿಸಿದ್ದ ಸೌರಶಕ್ತಿ ಬೇಲಿ, ಪ್ರವೇಶ ದ್ವಾರ ಹಾಗೂ ವಿದ್ಯುತ್ ನಿಯಂತ್ರಣ ಸಾಧನಗಳನ್ನು ಕಿಡಿಗೇಡಿಗಳು ಸಂಪೂರ್ಣವಾಗಿ ನಾಶಪಡಿಸಿದ್ದು, ಇದರಿಂದಾಗಿ ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ಮತ್ತೆ ಹೆಚ್ಚಾಗುವ ಆತಂಕ ಎದುರಾಗಿದೆ.



### ಅರಣ್ಯ ಇಲಾಖೆ ಕಚೇರಿಗಳಿಗೆ ಪೊಲೀಸ್ ಸರ್ಪಗಾವಲು

ಅರಣ್ಯ ಸಿಬ್ಬಂದಿಯ ಗುಂಡಿನ ದಾಳಿಯ ನಂತರ ಕೆಲ ಕಿಡಿಗೇಡಿಗಳು ಅರಣ್ಯ ಇಲಾಖೆಯನ್ನೇ ಗುರಿಯಾಗಿಸಿಕೊಂಡು ಆಕ್ರೋಶ ಹೊರಹಾಕುತ್ತಿರುವ ಹಿನ್ನೆಲೆಯಲ್ಲಿ, ಹನೂರಿನ ಅರಣ್ಯ ಕಚೇರಿ ಹಾಗೂ ಸಿಬ್ಬಂದಿಯ ವಸತಿ ಗೃಹಗಳಿಗೆ ಪೊಲೀಸ್ ಸರ್ಪಗಾವಲು ಮುಂದುವರಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಒಂದು ತುಕಡಿಯನ್ನು ಅರಣ್ಯ ಕಚೇರಿಯ ಮುಂಭಾಗ ನಿಯೋಜಿಸಲಾಗಿದ್ದು, ಸಿಬ್ಬಂದಿಯ ಸುರಕ್ಷತೆಗಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

### ಅರಣ್ಯ ಸಿಬ್ಬಂದಿಯನ್ನೇ ಗುರಿಯಾಗಿಸಿ ದಾಳಿ ನಡೆಸುವ ಸಂಚಿನ ಶಂಕೆ

ಕಾಡಾನೆಗಳು ಹಾಗೂ ಇತರೆ ಕಾಡುಪ್ರಾಣಿಗಳು ರೈತರ ಜಮೀನುಗಳಿಗೆ ನುಗ್ಗದಂತೆ ತಡೆಯಲು ಅಳವಡಿಸಲಾಗಿದ್ದ ಈ ಬೇಲಿಯನ್ನು ನಾಶಪಡಿಸಿರುವುದರ ಹಿಂದೆ ಅರಣ್ಯ ಸಿಬ್ಬಂದಿಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಹುನ್ನಾರ ಅಡಗಿದೆ ಎಂಬ ಶಂಕೆ ವ್ಯಕ್ತವಾಗಿದೆ. ಪ್ರವೇಶ ದ್ವಾರಗಳು ತೆರವಾದರೆ ಕಾಡುಪ್ರಾಣಿಗಳು ಗ್ರಾಮಗಳ ಕಡೆಗೆ ನುಗ್ಗಲಿವೆ, ಆಗ ಪ್ರಾಣಿಗಳನ್ನು ಹಿಮ್ಮೆಟ್ಟಿಸಲು ಅನಿವಾರ್ಯವಾಗಿ ಗ್ರಾಮದೊಳಗೆ ಬರುವ ಅರಣ್ಯ ಸಿಬ್ಬಂದಿಯ ಮೇಲೆ ದಾಳಿ ನಡೆಸಲು ಇಂತಹ ಕುಕೃತ್ಯ ಎಸಗಿರಬಹುದು ಎಂದು ಸಿಬ್ಬಂದಿ ಆತಂಕ ವ್ಯಕ್ತಪಡಿಸಿದ್ದಾರೆ. ಮಾಹಿತಿ ತಿಳಿದ ತಕ್ಷಣವೇ ತೋಮಿಯಾರ್ ಪಾಳ್ಯ, ಕಾರಯ್ಯನ ಬೆಟ್ಟ ಹಾಗೂ ಬೇಟೆಗಾರನ ಗುಡ್ಡದ ಬಳಿಯ ಕಳ್ಳಬೇಟೆ ತಡೆ ಶಿಬಿರದ ಸಮೀಪವಿರುವ ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

### ಮಾನವೀಯ ನೆಲೆಗಟ್ಟಿನಲ್ಲಿ ಪರಿಹಾರ: ಜಿಲ್ಲಾ ಉಸ್ತುವಾರಿ ಸಚಿವರ ಸ್ಪಷ್ಟನೆ

ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ಅರಣ್ಯ ಇಲಾಖೆಯ ವಿವರಣೆ ಹಾಗೂ ಮೃತರ ಕುಟುಂಬಸ್ಥರ ಆರೋಪಗಳಿಗೆ ತನಿಖಾ ವರದಿಯಲ್ಲಿ ನಿಖರ ಉತ್ತರ ಸಿಗಬೇಕಿದೆ ಎಂದರು. ದಂಡಾಧಿಕಾರಿಗಳ ತನಿಖಾ ವರದಿ ಕೈಸೇರಿದ ನಂತರವಷ್ಟೇ ನೈಜ ಸತ್ಯಾಂಶ ಹೊರ ಬರಲಿದ್ದು, ಬಳಿಕವೇ ಉನ್ನತ ಮಟ್ಟದ ತನಿಖೆಯ ಅಗತ್ಯತೆಯ ಬಗ್ಗೆ ಸರ್ಕಾರ ಅಂತಿಮ ತೀರ್ಮಾನ ಕೈಗೊಳ್ಳಲಿದೆ. ಸರ್ಕಾರದಿಂದ ಮೃತರ ಕುಟುಂಬಗಳಿಗೆ ತಲಾ ಐದು ಲಕ್ಷ ರೂಪಾಯಿಗಳ ಆರ್ಥಿಕ ಪರಿಹಾರ ನೀಡಿರುವುದು ಕೇವಲ ಮಾನವೀಯತೆಯ ದೃಷ್ಟಿಯಿಂದ ಮಾತ್ರ ಎಂದು ಸ್ಪಷ್ಟಪಡಿಸಿದರು.

### ಶಾಸಕರ ಪ್ರತಿಕ್ರಿಯೆ ಮತ್ತು ತನಿಖಾ ವರದಿ ಸಲ್ಲಿಕೆಯ ಸಾಧ್ಯತೆ

ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಹನೂರು ಶಾಸಕ ಎಂ.ಆರ್. ಮಂಜುನಾಥ್, ದಂಡಾಧಿಕಾರಿಗಳ ತನಿಖೆ ಬಹುತೇಕ ಪೂರ್ಣಗೊಂಡಿದ್ದು ಸೋಮವಾರ ವರದಿ ಸಲ್ಲಿಕೆಯಾಗುವ ಸಾಧ್ಯತೆಯಿದೆ ಎಂದರು. ಈ ವರದಿ ವಿಧಾನಮಂಡಲದ ಕಲಾಪದಲ್ಲಿ ಬಹಿರಂಗವಾಗುವ ಸಾಧ್ಯತೆಯಿದೆ. ಹನೂರು ತಾಲೂಕಿನಲ್ಲಿ ಕಾಡಿನ ಒಳಗೇ ಹೆಚ್ಚಿನ ಜನವಸತಿ ಪ್ರದೇಶಗಳಿರುವುದರಿಂದ ಅರಣ್ಯ ಇಲಾಖೆಯ ಕಠಿಣ ನಿಯಮಗಳಲ್ಲಿ ಸಾರ್ವಜನಿಕರ ಮುಕ್ತ ಸಂಚಾರಕ್ಕೆ ಸಡಿಲಿಕೆ ನೀಡುವಂತೆ ಸದನದಲ್ಲಿ ಧ್ವನಿ ಎತ್ತುವುದಾಗಿ ತಿಳಿಸಿದರು.

# ಅಂಚೆ ಇಲಾಖೆಯಲ್ಲಿರುವ ಅತ್ಯುತ್ತಮ ಯೋಜನೆಗಳನ್ನು ಪಡೆಯಿರಿ

ಚಾಮರಾಜನಗರ : ತಾಲೂಕಿನ ಪುಣಜನೂರು ಗ್ರಾಮೀಣ ಅಂಚೆ ಕಚೇರಿಯಲ್ಲಿ ಆರ್ ಡಿ, ಎಸ್ ಎಸ್ ಎ, ( ಸುಕನ್ಯಾ ಸಮೃದ್ಧಿ ), ಆರ್ ಪಿ ಎಲ್ ಐ, ಪಿ ಎಲ್ ಐ, ಟೈಮ್ ಬಾಂಡ್ ಡಿಪಾಸಿಟ್ ಇನ್ನಿತರ ಸ್ಕೀಮ್ ಗಳನ್ನು ಒಳಗೊಂಡಿದ್ದು ಸಾರ್ವಜನಿಕರು ಈ ಸ್ಕೀಮ್ ಗಳನ್ನು ಪಡೆಯುವ ಮೂಲಕ ಅನುಕೂಲ ಪಡೆದುಕೊಳ್ಳಬೇಕೆಂದು ಹಾಗೂ ಅಂಚೆ ಇಲಾಖೆಗೆ ಹೆಚ್ಚು ಪ್ರೋತ್ಸಾಹ ನೀಡಬೇಕೆಂದು ಪುಣಜನೂರು ಅಂಚೆ ಪೋಸ್ಟ್ ಮಾಸ್ಟರ್, pin code no – ( 571127 ) ಮನವಿ ಮಾಡಿದ್ದಾರೆ.



# ಕಬಿನಿ ನದಿ ನೀರು ಸುರಕ್ಷತೆಗೆ ಪ್ರಧಾನಿಗೆ ಪತ್ರ

**ಎಚ್.ಡಿ.ಕೋಟೆ:** ರೆಸಾರ್ಟ್ ಗಳು ಹಾಗೂ ವಾಣಿಜ್ಯ ಸಂಸ್ಥೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರು, ಸರಗೂರು ಪಟ್ಟಣದಿಂದ ಬರುವ ಸಂಸ್ಕರಿಸದ ಒಳ ಚರಂಡಿ ನೀರನ್ನು ಕಬಿನಿ ನದಿಗೆ ಬಿಡುವುದರಿಂದ ಸಾರ್ವಜನಿಕರ ಆರೋಗ್ಯ ಮತ್ತು ಪರಿಸರದ ಮೇಲಾಗುವ ದುಷ್ಪರಿಣಾಮವನ್ನು ತಪ್ಪಿಸಲು ಕ್ರಮ ಕೈಗೊಳ್ಳುವಂತೆ ಪ್ರಧಾನಿಗೆ, ಮೈಸೂರು ನಗರ ಬಿಜೆಪಿ ವಕ್ತಾರ ಮೋಹನ್ ಪತ್ರ ಬರೆದಿದ್ದಾರೆ.



ಕಬಿನಿ ನದಿಯ ನೀರನ್ನು ಮೈಸೂರು, ಬೆಂಗಳೂರು ನಗರ ಪ್ರದೇಶದ ಜನರು ಕುಡಿಯಲು ಬಳಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ನೀರು ಕಲುಷಿತಗೊಳ್ಳುತ್ತಿದೆ. ನಮ್ಮ ಮುಂದಿನ ಪೀಳಿಗೆಗೆ ನದಿ ಮೂಲವನ್ನು ಉಳಿಸುವ ದೃಷ್ಟಿಯಿಂದ ಅಗತ್ಯ ಕ್ರಮಕೈಗೊಳ್ಳಬೇಕು ಎಂದಿದ್ದಾರೆ.

ನದಿಗಳ ಸಮೀಪದಲ್ಲಿರುವ ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆ, ಪಟ್ಟಣ, ಕೈಗಾರಿಕೆ, ರೆಸಾರ್ಟ್ ಮತ್ತು ವಾಣಿಜ್ಯ ಸಂಸ್ಥೆಯು ತನ್ನ ತ್ಯಾಜ್ಯ ನೀರನ್ನು ಕಡ್ಡಾಯವಾಗಿ ಎಸ್ಟಿಪಿ/ಇಟಿಪಿ ಮೂಲಕ ಸಂಸ್ಕರಿಸಿದ ನಂತರ ಮಾತ್ರ ನದಿ ಅಥವಾ ಯಾವುದೇ ಜಲಮೂಲಕ್ಕೆ ಹರಿಸುವಂತೆ ಕಾನೂನುಬದ್ಧವಾಗಿ ಕಡ್ಡಾಯಗೊಳಿಸಬೇಕು. ಸಂಸ್ಕರಿಸಿದ ನೀರಿನ ಗುಣಮಟ್ಟವನ್ನು ನಿರಂತರವಾಗಿ ಪರಿಶೀಲಿಸಲು ಕಟ್ಟುನಿಟ್ಟಿನ ಮೇಲ್ವಿಚಾರಣೆ, ನಿಯಮಿತ ತಪಾಸಣೆ ಮತ್ತು ಆನ್ ಲೈನ್ ನೀರಿನ ಗುಣಮಟ್ಟದ ಮಾನಿಟರಿಂಗ್ ವ್ಯವಸ್ಥೆ ಜಾರಿಗೆ ತರಬೇಕು. ನಿಯಮ ಉಲ್ಲಂಘಿಸಿ ಸಂಸ್ಕರಿಸದ ನೀರನ್ನು ನದಿಗೆ ಹರಿಸುವ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ವಿರುದ್ಧ ಕಠಿಣ ದಂಡ ಹಾಗೂ ಕಾನೂನುಕ್ರಮ ಕೈಗೊಳ್ಳಬೇಕು. ಕಬಿನಿ ನದಿಯನ್ನು ಆಧರಿಸಿ ಸಮಗ್ರ ಪೈಲಟ್ ಯೋಜನೆಯನ್ನು ಭಾರತ ಸರ್ಕಾರದ ವತಿಯಿಂದ ಕೈಗೊಳ್ಳಬೇಕು. ಸರಗೂರು ಪಟ್ಟಣ, ನದಿಯ ದಡದಲ್ಲಿರುವ ರೆಸಾರ್ಟ್‌ಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳಿಂದ ಹೊರಬರುವ ತ್ಯಾಜ್ಯ ನೀರನ್ನು ಸಂಪೂರ್ಣವಾಗಿ ಸಂಸ್ಕರಿಸುವ ವ್ಯವಸ್ಥೆಯನ್ನು ರೂಪಿಸಿ, ಕಬಿನಿಯನ್ನು ಮಾದರಿ ನದಿಯಾಗಿ ಅಭಿವೃದ್ಧಿಪಡಿಸಬೇಕು.

ಕಬಿನಿ ಪೈಲಟ್ ಯೋಜನೆಯ ಫಲಿತಾಂಶವನ್ನು ಆಧರಿಸಿ. ಇದೇ ಮಾದರಿಯನ್ನು ದೇಶದ ಇತರ ಪ್ರಮುಖ ನದಿಗಳು ಮತ್ತು ನದಿ ಜಲಾನಯನ ಪ್ರದೇಶಗಳಲ್ಲಿ ಹಂತ, ಹಂತವಾಗಿ ಜಾರಿಗೆ ತರಬೇಕು.

ಕೃಷಿ, ಅರಣ್ಯ, ವನ್ಯಜೀವಿ, ಜೀವವೈವಿಧ್ಯ ಹಾಗೂ ಕೋಟ್ಯಂತರ ಜನರ ಜೀವನಾಧಾರದ ಮೂಲವಾಗಿರುವ ಕಬಿನಿ ನದಿಯ ಪರಿಸ್ಥಿತಿಯನ್ನು ಒಂದು ಕೇಸ್ ಸ್ಟಡಿ ಹಾಗೂ ರಾಷ್ಟ್ರೀಯ ಪೈಲಟ್ ಪ್ರಾಜೆಕ್ಟ್ ಆಗಿ ಪರಿಗಣಿಸಿ, ಕೇಂದ್ರ ಸರ್ಕಾರದ ಸಂಬಂಧಿತ ಸಚಿವಾಲಯಗಳು ಮತ್ತು ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಸಮಗ್ರ ಕ್ರಮ ಕೈಗೊಳ್ಳುವಂತೆ ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಸಚಿವಾಲಯಕ್ಕೂ ಪತ್ರದಲ್ಲಿ ಬರೆದಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಕರ್ನಾಟಕ ಸರ್ಕಾರ
**ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ**
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು–570010.
ದೂರವಾಣಿ (ಕಛೇರಿ): 0821–2523626, ಇ–ಮೇಲ್:exhibitionauthority@gmail.com

ಸಂಖ್ಯೆ:ಕವಪ್ರಾ/ಮುಕಾನಿ/2026–27 ದಿನಾಂಕ: 21.08.2026

**ಪ್ರಕಟಣೆ**

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ "ಇ" ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತ್ತಿದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್‌ನ ಮೊತ್ತ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| 1 | Daily maintenance of Electrical installations connected to power house I & II and Fountains maintenance (excluding materials) during dasara exhibition -2025 by skilled electrical wiremen and electrical helpers. | ರೂ. 13,80,797/– | 28.08.2026 ಸಂಜೆ 04.00ಕ್ಕೆ |
| 2 | Maintenance of Cleaning work at Roads, Drains, Open Areas, Parks, & Toilets in KEA Premises. From 03.10.2026 to 20.01.2027 (110days) | ರೂ. 31,03,298/– | |

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್), ರವರನ್ನು ಸಂಪರ್ಕಿಸಿ ಹಾಗೂ ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ,
ಮೈಸೂರು

ವಾಸಾಸಂಇ/ಮೈಸೂರು/ಎಸ್‌ಎಸ್‌ಸಿ/602/2026–27

### ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಕಾರ್ಯಕ್ರಮ

# ತ್ಯಾಜ್ಯದಿಂದ ಸೃಜನಶೀಲತೆ: 'ಬೆಸ್ಟ್ ಔಟ್ ಆಫ್ ವೇಸ್ಟ್'

ಚಾಮರಾಜನಗರ, ಪರಿಸರ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ಜೆಎಸ್‌ಎಸ್ ಮಹಿಳಾ ಕಾಲೇಜು ಪರಿಸರ ಅಧ್ಯಯನ ವಿಭಾಗದ ಪ್ರೊಫೆಸರ್ ಎಲ್ ಅಮೂಲ್ಯ ಹೇಳಿದರು.

ನಗರದ ಜೋಡಿ ರಸ್ತೆಯಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಪರಿಸರ ಅಧ್ಯಯನ ವಿಭಾಗದ ಇಕೋ ಕ್ಲಬ್ ವತಿಯಿಂದ ಪ್ರಥಮ ವರ್ಷದ ಬಿ.ಎಸ್ಸಿ. ಹಾಗೂ ಬಿ.ಸಿ.ಎ ವಿದ್ಯಾರ್ಥಿಗಳಿಗಾಗಿ 'ಬೆಸ್ಟ್ ಔಟ್ ಆಫ್ ವೇಸ್ಟ್' ಸ್ಪರ್ಧೆಯನ್ನು ಕಾಲೇಜಿನ ಸಸ್ಯಶಾಸ್ತ್ರ ಪ್ರಯೋಗಾಲಯದಲ್ಲಿ ಆಯೋಜಿಸಲಾಯಿತು. ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದ ಎಲ್ ಅಮೂಲ್ಯ ವಿದ್ಯಾರ್ಥಿಗಳು ಬಿಡುವಿನ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ, ತ್ಯಾಜ್ಯ ನಿರ್ವಹಣೆ ಹಾಗೂ ತ್ಯಾಜ್ಯ ವಸ್ತುಗಳ ಮರುಬಳಕೆಯ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು ಸ್ಪರ್ಧೆಯ ಮುಖ್ಯ ಉದ್ದೇಶವಾಗಿತ್ತು. ವಿದ್ಯಾರ್ಥಿಗಳು ಬಳಸಿದ ಕಾಗದ, ರಟ್ಟಿನ ಪೆಟ್ಟಿಗೆಗಳು, ಪ್ಲಾಸ್ಟಿಕ್ ಬಾಟಲಿಗಳು,



ಬಟ್ಟೆಯ ತುಂಡುಗಳು ಹಾಗೂ ಇತರೆ ತ್ಯಾಜ್ಯ ವಸ್ತುಗಳನ್ನು ಸೃಜನಾತ್ಮಕವಾಗಿ ಬಳಸಿಕೊಂಡು ಉಪಯುಕ್ತ ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಪ್ರದರ್ಶಿಸಿದರು. ಸ್ಪರ್ಧೆಯಲ್ಲಿ ಕಡಿಮೆ ಬಳಕೆ, ಮರುಬಳಕೆ, ಮರುಸಂಸ್ಕರಣೆ, ಪುನರ್ವಿಮರ್ಶೆ ಮತ್ತು ನಿರಾಕರಣೆ (Reduce, Reuse, Recycle, Rethink, Refuse) ಎಂಬ 5ಖ ತತ್ವಗಳ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ತ್ಯಾಜ್ಯವೆಂದು ಪರಿಗಣಿಸುವ ವಸ್ತುಗಳನ್ನು ಕೂಡ ಹೊಸ ರೂಪದಲ್ಲಿ ಉಪಯುಕ್ತವಾಗಿಸಬಹುದು ಎಂಬ ಸಂದೇಶವನ್ನು ಕಾರ್ಯಕ್ರಮ ನೀಡಿತು.

ಸ್ಪರ್ಧೆಯ ತೀರ್ಪುಗಾರರಾಗಿ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಪ್ರಮೀಳಾ, ಕನ್ನಡ ವಿಭಾಗದ ಪ್ರೊಫೆಸರ್ ಜಮುನಾ ,ವಾಣಿಜ್ಯ ವಿಭಾಗದ ರಾಜೇಶ್ವರಿ ಭಾಗವಹಿಸಿ, ವಿದ್ಯಾರ್ಥಿಗಳ ಕೃತಿಗಳನ್ನು ಸೃಜನಶೀಲತೆ, ನವೀನತೆ, ತ್ಯಾಜ್ಯ ವಸ್ತುಗಳ ಸಮರ್ಪಕ ಬಳಕೆ, ಉಪಯುಕ್ತತೆ, ಅಲಂಕಾರಿಕತೆ ಹಾಗೂ ಪರಿಸರ ಪ್ರಸ್ತುತತೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಿದರು.ಕಾಲೇಜಿನ ಪ್ರಾಂಶುಪಾಲ ಡಾ. ಪ್ರಭು ಎಂ ಸ್ಪರ್ಧಾ ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಸೃಜನಶೀಲತೆಯನ್ನು ಮೆಚ್ಚಿ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಇಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿದರು. ಐಕ್ಯೂಎಸಿ ಸಂಯೋಜಕ ಕೆಂಡ್ಗಣ ಸ್ವಾಮಿ ಮತ್ತು ಸಸ್ಯಶಾಸ್ತ್ರದ ವಿಭಾಗದ ಮುಖ್ಯಸ್ಥರಾದ ರೇವಣಂಬ. ಬಿ ಸಹ ಸ್ಪರ್ಧಾ ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗ ವಿದ್ಯಾರ್ಥಿನಿಯರಿಗೆ ಸಲಹೆ ಸೂಚನೆ ನೀಡಿದರು ವಿವಿಧ ವಿಭಾಗಗಳ ಅಧ್ಯಾಪಕರು ಕೂಡ ಕಾರ್ಯಕ್ರಮಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದರು. ಸ್ಪರ್ಧೆಯು ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ, ಸೃಜನಶೀಲತೆ, ಸಮಸ್ಯೆ ಪರಿಹಾರ ಕೌಶಲ್ಯ, ಆತ್ಮವಿಶ್ವಾಸ, ತಂಡದ ಮನೋಭಾವ ಹಾಗೂ ಸಂಪನ್ಮೂಲಗಳ ಜವಾಬ್ದಾರಿಯುತ ಬಳಕೆಯ ಅರಿವನ್ನು ಬೆಳೆಸುವಲ್ಲಿ ಸಹಕಾರಿಯಾಯಿತು

ತ್ಯಾಜ್ಯವನ್ನು ಕೇವಲ ವಿಲೇವಾರಿ ಮಾಡುವ ಬದಲು ಅದರ ಮರುಬಳಕೆ ಮೂಲಕ ಸ್ವಚ್ಛ, ಹಸಿರು ಮತ್ತು ಸುಸ್ಥಿರ ಪರಿಸರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂಬ ಸಂದೇಶದೊಂದಿಗೆ ವಿದ್ಯಾರ್ಥಿನಿಯರು ಭಾಗವಹಿಸಿದರು

# ಮನೆ ಮುಂದೆ ನಿಲ್ಲಿಸುವ ವಾಹನಗಳಿಗೆ ಪಾರ್ಕಿಂಗ್ ಶುಲ್ಕದ ಬರೆ
# ರಾಜ್ಯ ಸರ್ಕಾರದ ನಿರ್ಧಾರಕ್ಕೆ ಜೆಡಿಎಸ್ ಸ್ಪಷ್ಟ ವಿರೋಧ

**ಬೆಂಗಳೂರು:** ಮನೆ ಮುಂದೆ ನಿಲ್ಲಿಸಲಾಗುವ ಮನೆ ಮಾಲೀಕರ ವಾಹನಗಳಿಗೂ ಪಾರ್ಕಿಂಗ್ ಶುಲ್ಕ ವಿಧಿಸುವುದಕ್ಕೆ ಜೆಡಿಎಸ್ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ ಎಂದು ಗ್ರೇಟರ್ ಬೆಂಗಳೂರು ಅಧ್ಯಕ್ಷ ಹೆಚ್.ಎಂ. ರಮೇಶ್ ಗೌಡ ಹೇಳಿದರು.

ಪಕ್ಷದ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ರಮೇಶ್ ಗೌಡ ಅವರು; "ಬೆಂಗಳೂರು ನಗರ ಅಭಿವೃದ್ಧಿ ಖಾತೆ ಸಚಿವ ಕೃಷ್ಣಭೈರೇಗೌಡ ಅವರೇ ಇದ್ಯಾವ ಸೀಮೆ ಆಡಳಿತ ನಿಮ್ಮದು ವಿಧಾನಸೌಧ, ಜಿಬಿಎ, ನ್ಯಾಯಾಲಯಗಳ ಸಂಕೀರ್ಣಗಳಲ್ಲಿಯೇ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗದ ನಿಮ್ಮ ವೈಫಲ್ಯ ಮುಚ್ಚಿಟ್ಟುಕೊಳ್ಳಲು ಸಾರ್ವಜನಿಕರ ಮೇಲೆ ಬರೆ ಹಾಕುತ್ತಿದ್ದೀರಿ. ಇದು ಎಷ್ಟು ಸರಿ " ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಉಚ್ಚ ನ್ಯಾಯಾಲಯ, ಸಿಟಿ ನ್ಯಾಯಾಲಯಗಳ ಸಂಕೀರ್ಣ,ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ಸಾರ್ವಜನಿಕರಿಗೆ ಪಾರ್ಕಿಂಗ್ ವ್ಯವಸ್ಥೆಯೇ ಇಲ್ಲ ಎನ್ನುವುದು ಈ ಸರ್ಕಾರಕ್ಕೆ ಗೊತ್ತಿಲ್ಲವೇ ವಿಧಾನಸೌಧಕ್ಕೆ ಹೋಗುವ ಸಾರ್ವಜನಿಕರಿಗೂ ಪಾರ್ಕಿಂಗ್ ವ್ಯವಸ್ಥೆ ಇಲ್ಲ ಎಂದರೆ ಈ ವ್ಯವಸ್ಥೆಗೆ ಏನು ಹೇಳಬೇಕಾಗುತ್ತದೆ ಪಾಲಿಕೆ ಕಚೇರಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲ ಅಂದರೆ ಜಿಬಿಎಗೆ ಏನೆನ್ನಬೇಕು ನಗರದ ಬಹುತೇಕ ಕಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರಿಗೆ ವಾಹನಗಳನ್ನು ನಿಲ್ಲಿಸಲು ವ್ಯವಸ್ಥೆ ಇಲ್ಲ. ತಪ್ಪು ಸರ್ಕಾರದ್ದಾಗಿದ್ದರೆ ಅದರ ಪ್ರತಿಫಲವನ್ನು ಸಾರ್ವಜನಿಕರು ಅನುಭವಿಸಬೇಕು ಎಂದರೆ ಒಪ್ಪಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಅಷ್ಟೇ ಏಕೆ, ಬೆಂಗಳೂರು ನಗರಾಭಿವೃದ್ಧಿ ಖಾತೆಯ ಮಂತ್ರಿಗಳಾದ ಕೃಷ್ಣಭೈರೇಗೌಡರ ಮನೆ ಸಮೀಪವಿರುವ ಅಪಾರ್ಟ್ಮೆಂಟ್ ಮುಂದೆಯೇ ಪಾರ್ಕಿಂಗ್ ಮಾಡಲು ಜಾಗವಿಲ್ಲ. ಆ ಅಪಾರ್ಟ್ಮೆಂಟಿಗೆ ಬರುವ ಅತಿಥಿಗಳು ವಾಹನಗಳನ್ನು ಎಲ್ಲಿ ನಿಲ್ಲಿಸಬೇಕು ಎಂಬುದನ್ನು ನಗರಾಭಿವೃದ್ಧಿ ಸಚಿವರೇ ಹೇಳಬೇಕಾಗುತ್ತದೆ. ಕೇವಲ ಕಾನೂನು ಮಾಡುವುದು ಅಥವಾ ನಿಯಮ ರೂಪಿಸುವುದು ದೊಡ್ಡ ವಿಷಯವಲ್ಲ. ಜನರ ನಿಜವಾದ ಪರಿಸ್ಥಿತಿ ಏನಿದೆ ಎಂಬುದನ್ನು ಅಧ್ಯಯನ ಮಾಡಿ ರೂಪಿಸಬೇಕಾಗುತ್ತದೆ ಎಂದು ರಮೇಶ್ ಗೌಡ ಹೇಳಿದರು.

**ಜೆ.ಸಿ.ರಸ್ತೆ ಪಾರ್ಕಿಂಗ್ ಕಟ್ಟಡ ಬಾಡಿಗೆಗೆ ಕೊಟ್ಟಿದ್ದಾರೆ:** ಜೆ.ಸಿ. ರಸ್ತೆಯಲ್ಲಿ ಬೃಹತ್ ಪಾರ್ಕಿಂಗ್ ಕಟ್ಟಡವನ್ನು ಪಾಲಿಕೆ ವತಿಯಿಂದ ನಿರ್ಮಿಸಲಾಗಿದೆ. ದುರಂತವೆಂದರೆ ಈ ಕಟ್ಟಡವನ್ನು ಖಾಸಗಿ ವ್ಯಕ್ತಿಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ಬಾಡಿಗೆಗೆ ನೀಡಲಾಗಿದೆ. ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಕೇವಲ ಬಿಬಿಎಂಪಿಯನ್ನು ಜಿಬಿಎ ಮಾಡಿದ್ದಾಯ್ತು. ರಾಮನಗರವನ್ನು ಬೆಂಗಳೂರು ದಕ್ಷಿಣ ಎಂದು ಮಾಡಿದ್ದಾಯಿತು. ಕೇವಲ ಹೆಸರು ಬದಲಾವಣೆ ಮಾಡಿದರೆ ಉಪಯೋಗ ಇಲ್ಲ. ಬೆಂಗಳೂರಿನಲ್ಲಿ ಒಂದು ರಸ್ತೆ ಗುಂಡಿಗೆ ಒಂದು ಬಾಂಡ್ಲಿ ಮಣ್ಣು ಹಾಕುವ ಯೋಗ್ಯತೆ ಈ ಸರ್ಕಾರಕ್ಕೆ ಇಲ್ಲವಾಗಿದೆ ಎಂದು ಅವರು ಟೀಕಾಪ್ರಹಾರ ನಡೆಸಿದರು.

ಜಿಬಿಎ ಅದೆಷ್ಟು ಅದಕ್ಷತೆಯಿಂದ ಕೆಲಸ ಮಾಡುತ್ತಿದೆ ಎಂಬುದಕ್ಕೆ ಜೆ.ಸಿ. ರಸ್ತೆಯ ಪಾರ್ಕಿಂಗ್ ಕಟ್ಟಡವನ್ನು ಬಾಡಿಗೆಗೆ ನೀಡಿರುವ ಪ್ರಕರಣ ಸಾಕ್ಷಿ. ಸರ್ಕಾರವು ತನ್ನ ವೈಫಲ್ಯಗಳಿಂದ ತಪ್ಪಿಸಿಕೊಳ್ಳಲು ಸಾರ್ವಜನಿಕರು ತಮ್ಮ ಮನೆಗಳ ಮುಂದೆ ಕಾರು ನಿಲ್ಲಿಸಿದರೆ ಅದಕ್ಕೆ ಪಾರ್ಕಿಂಗ್ ಶುಲ್ಕ ವಿಧಿಸುವ ಹುನ್ನಾರವನ್ನು ಸಹಿಸಲು ಸಾಧ್ಯವಿಲ್ಲ ಎಂದು ರಮೇಶ್ ಗೌಡ ಹೇಳಿದರು.

- ಜೆ.ಸಿ. ರಸ್ತೆಯ ಪಾರ್ಕಿಂಗ್ ಕಟ್ಟಡ ಬಾಡಿಗೆ ಕೊಟ್ಟ ಸರ್ಕಾರ; ಹೆಚ್.ಎಂ.ರಮೇಶ್ ಗೌಡ ಆಕ್ರೋಶ
- ವಿಧಾನಸೌಧ, ಹೈಕೋರ್ಟ್, ನಗರ ನ್ಯಾಯಾಲಯಗಳ ಸಂಕೀರ್ಣ, ಸರಕಾರಿ ಕಚೇರಿಗಳು, ಆಸ್ಪತ್ರೆಗಳಲ್ಲೇ ಪಾರ್ಕಿಂಗ್ ವ್ಯವಸ್ಥೆ ಮಾಡಲು ಸರ್ಕಾರ ವಿಫಲ ಎಂದು ಕಿಡಿ
- ಪಾರ್ಕಿಂಗ್ ಶುಲ್ಕದ ವಿರುದ್ಧ ಜೆಡಿಎಸ್ ಹೋರಾಟದ ಎಚ್ಚರಿಕೆ

ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿಯೇ ಪಾರ್ಕಿಂಗ್ ವ್ಯವಸ್ಥೆ ಮಾಡಿದೆ ಸರ್ಕಾರ ನಿರ್ಲಕ್ಷ್ಯ ಮಾಡಿದೆ. ಅಂತದ್ದರಲ್ಲಿ ತಮ್ಮ ಮನೆಗಳ ಮುಂದೆ ಮನೆ ಮಾಲೀಕರು ವಾಹನಗಳನ್ನು ನಿಲ್ಲಿಸಿದರೆ ಪಾರ್ಕಿಂಗ್ ಶುಲ್ಕ ವಿಧಿಸಲು ಹೊರಟಿರುವುದು ಸರಿಯಲ್ಲ ಎಂದು ಕಟುವಾಗಿ ಟೀಕಿಸಿದರು.

ಭಾರತದ ಯಾವುದೇ ನಗರದಲ್ಲಿಯೂ ಇಲ್ಲದ ಪಾರ್ಕಿಂಗ್ ಶುಲ್ಕವನ್ನು ಸಾರ್ವಜನಿಕರ ಮೇಲೆ ಹೇರಲು ರಾಜ ಕಾಂಗ್ರೆಸ್ ಸರ್ಕಾರ ಹೊರಟಿದೆ. ಕೂಡಲೇ ಈ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯಬೇಕು ಎಂದು ಅವರು ಒತ್ತಾಯ ಮಾಡಿದರು.

ಸರ್ಕಾರವು ಕೇವಲ ವಿಧಾನಸೌಧದಲ್ಲಿ ಅಷ್ಟೇ ಅಲ್ಲದೆ ಸ್ಥಳೀಯ ಮಟ್ಟದಲ್ಲಿಯೂ ಆಡಳಿತ ವೈಫಲ್ಯ ಕಂಡಿದೆ. ತನ್ನ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸದೆ ತೆರಿಗೆದಾರರನ್ನು ಅಪರಾಧಿಗಳಂತೆ ಬಿಂಬಿಸಲು ಹೊರಟಿದೆ. ಇದು ಸರಿಯಲ್ಲ, ಬೆಂಗಳೂರಿನ ಜನತೆ ಇದನ್ನು ಒಪ್ಪುವುದಿಲ್ಲ. ತಕ್ಷಣವೇ ಜಿಬಿಎ ಪಾರ್ಕಿಂಗ್ ಶುಲ್ಕ ವಿಧಿಸುವ ನಿರ್ಧಾರದಿಂದ ಸಂಪೂರ್ಣವಾಗಿ ಹಿಂದೆ ಸರಿಯಬೇಕು. ಇಲ್ಲದಿದ್ದರೆ ಜೆಡಿಎಸ್ ಪಕ್ಷದಿಂದ ದೊಡ್ಡ ಪ್ರಮಾಣದಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ರಮೇಶ್ ಗೌಡ ಎಚ್ಚರಿಕೆ ನೀಡಿದರು.

ಬೆಂಗಳೂರು ನಗರದ ಪ್ರಮುಖ ರಸ್ತೆಗಳ ಎರಡು ಬದಿಗಳಲ್ಲಿ ಪಾರ್ಕಿಂಗ್ ಮಾಡಿದರೆ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಅಂತಹ ಕಡೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಕರ್ತವ್ಯ. ಆದರೆ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ ಅನಗತ್ಯವಾಗಿ ಜನರ ಮೇಲೆ ಪಾರ್ಕಿಂಗ್ ಶುಲ್ಕ ವಿಧಿಸಲು ಹೊರಟಿರುವುದು ಸರಿಯಲ್ಲ ಎಂದು ಅವರು ಹೇಳಿದರು.

**ಸರ್ಕಾರ ಕಾನೂನನ್ನು ಮೀರುತ್ತಿದೆ:** ರಾಜ್ಯ ಸರ್ಕಾರವು ಸ್ಥಳೀಯ ನಗರ ಪಾಲಿಕೆಗಳ ಜತೆ ನೇರವಾಗಿ ಸಮಾಲೋಚನೆ ನಡೆಸದೆ ಹಾಗೂ ಪಾಲಿಕೆಗಳ ಸ್ವಾಯತ್ತತೆಯನ್ನು ಮೀರಿ ನೇರವಾಗಿ ಪಾರ್ಕಿಂಗ್ ಅಥವಾ ಟೋವಿಂಗ್ ನಿಯಮಗಳನ್ನು ಜಾರಿ ಮಾಡುವುದು ಸಂಪೂರ್ಣವಾಗಿ ಕಾನೂನಿಗೆ ವಿರುದ್ಧವಾಗಿದೆ. ಈ ನಿಯಮ ಜಾರಿ ಮಾಡೋದಕ್ಕೆ ಸಾರ್ವಜನಿಕರ ಅಭಿಪ್ರಾಯ ಬಹಳ ಮುಖ್ಯವಾಗಿರುತ್ತದೆ. ಆದರೆ ಪಾರ್ಕಿಂಗ್ ನಿಯಮವನ್ನು ಜನರ ಅಭಿಪ್ರಾಯ ವಿರುದ್ಧವಾಗಿ ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರ ಹೊರಟಿರುವುದು ಸರಿಯಲ್ಲ ಎಂದು ಅವರು ಹೇಳಿದರು. ಈಗಾಗಲೇ ಪಾರ್ಕಿಂಗ್ ನಿಯಮಗಳಿಗೆ ಸಂಬಂಧಪಟ್ಟ ಹಾಗೆ ವಿವಿಧ ನ್ಯಾಯಾಲಯಗಳು ಮಹತ್ವದ ತೀರ್ಪುಗಳನ್ನು ನೀಡಿವೆ. ರಾಜ್ಯ ಸರ್ಕಾರ ಎಲ್ಲಾ ತೀರ್ಪುಗಳನ್ನು ಗಾಳಿಗೆ ತೂರಿದ್ದು, ಕಾನೂನಾತ್ಮಕವಾಗಿ ಒಪ್ಪಲಾಗದ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರುತ್ತಿರುವುದನ್ನು ಜೆಡಿಎಸ್ ಸ್ಪಷ್ಟವಾಗಿ ವಿರೋಧಿಸುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ವೈಭವ್ ಪಾಂಡೆ ಪ್ರಕರಣದಲ್ಲಿ ಕಡ್ಡಾಯವಾದ ಸಾಂವಿಧಾನಿಕ ಮತ್ತು ಶಾಸನಬದ್ಧ ಕ್ರಮಗಳನ್ನು ಅನುಸರಿಸದೇ ಸ್ಥಳೀಯ ಸಂಸ್ಥೆಗಳ ಪ್ರತಿನಿತ್ಯ ಹಾಗೂ ರಚನಾತ್ಮಕ ಅನುಸರಣೆಯ ನಿಯಮಗಳನ್ನು ನೀಡುವುದು ಅಥವಾ ಬದಲಾಯಿಸುವುದು ಅಸಮರ್ಪಕ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ತೀರ್ಪನ್ನು ಸರ್ಕಾರ ಗಾಳಿಗೆ ತೂರುತಿದೆ ಎಂದು ರಮೇಶ್ ಗೌಡ ಕಿಡಿಕಾರಿದರು.

ಸರ್ಕಾರ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಮನಸೋ ಇಚ್ಛೆ ವರ್ತಿಸುತ್ತಿದೆ. ಹೊಸ ಪಾರ್ಕಿಂಗ್ ನೀತಿಯನ್ನು ಒಪ್ಪಲು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ಕೂಡಲೇ ಈ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯಬೇಕು ಎಂದು ಅವರು ಒತ್ತಾಯ ಮಾಡಿದರು. ಮಾಧ್ಯಮಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಮಾಜಿ ಶಾಸಕರಾದ ಈ ಕೃಷ್ಣಪ್ಪ, ಅಖಂಡ ಶ್ರೀನಿವಾಸಮೂರ್ತಿ, ಮುಖಂಡರಾದ ತಿಮ್ಮೇಗೌಡ, ದೇವರಾಜ್, ಹೆಚ್.ಸಿ.ಕೃಷ್ಣ, ಶೈಲಜಾ ರಾವ್, ಟಿ.ಆರ್.ತುಳಸಿ ರಾಮ್, ಎಸ್. ರಮೇಶ, ಶ್ವೇತಾ ಯಾದವ್, ಮಂಗಳಮ್ಮ, ಆರ್.ಸ್ಯಾಮುಯೆಲ್ ಸೇರಿ ಇನ್ನಿತರ ಅನೇಕ ಮುಖಂಡರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## "ಮಳೆ ಕೊರತೆ ನಿವಾರಣೆಗೆ ಕೃತಕ ಮಳೆ ಯೋಜನೆ: ಸರ್ಕಾರದ ಅನುಮೋದನೆ"
### "28.52 ಕೋಟಿ ರೂ. ವೆಚ್ಚದಲ್ಲಿ 60 ದಿನ ಮೋಡ ಬಿತ್ತನೆ: ಸಚಿವ ಚಲುವರಾಯಸ್ವಾಮಿ"

**ಬೆಂಗಳೂರು:** ರಾಜ್ಯದಲ್ಲಿ ಮುಂಗಾರು ಮಳೆಯ ತೀವ್ರ ಕೊರತೆ ಮತ್ತು ಬರದ ಭೀತಿ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮೋಡ ಬಿತ್ತನೆ (Cloud Seeding) ಕಾರ್ಯಕ್ರಮ ಜಾರಿಗೆ ಮುಂದಾಗಿದೆ.



ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಸಕ್ತ ಜಲ ವರ್ಷದಲ್ಲಿ ಮಳೆ ಕೊರತೆ ಕುರಿತು ಚರ್ಚಿಸಿ, ಮೋಡ ಬಿತ್ತನೆ ಕಾರ್ಯಕ್ರಮ ಕೈಗೊಳ್ಳಲು ಜನಪ್ರತಿನಿಧಿಗಳು ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ 2026-27ನೇ ಸಾಲಿನಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ವಿಧಾನಗಳನ್ನು ಬಳಸಿ ಮಳೆ ಕೊರತೆ ನಿವಾರಿಸಲು ಸರ್ಕಾರ ನಿರ್ಧರಿಸಿದೆ.

28.52 ಕೋಟಿ ಯೋಜನೆಗೆ ಅನುಮೋದನೆ

ಈ ಸಂಬಂಧ M/s. Kyathi Climate Modification Consultants LLP (KCMC) ಸಂಸ್ಥೆಯಿಂದ ದಿನಾಂಕ 13.08.2026 ರಂದು ಸಲ್ಲಿಸಲಾದ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆ.

ಪ್ರಸ್ತಾವನೆಯಂತೆ 60 ದಿನಗಳ ಅವಧಿಗೆ 200 ಗಂಟೆಗಳ ವೈಮಾನಿಕ ಹಾರಾಟ ***(DI aircraft)*** ನಡೆಸಲು:

- ಸ್ಥಿರ ವೆಚ್ಚ: ರೂ. 27.52 ಕೋಟಿ
- ವೇರಿಯಬಲ್ ವೆಚ್ಚ: ರೂ. 1.00 ಕೋಟಿ
- ಒಟ್ಟು ವೆಚ್ಚ: ರೂ. 28.52 ಕೋಟಿ (GST ಹೊರತುಪಡಿಸಿ)

ಸರ್ಕಾರದ ಆದೇಶ ಸಂಖ್ಯೆ ಜಸಂಇ 144 ಎಂಟಿಪಿ 2026, ದಿನಾಂಕ 19.08.2026 ರಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ವೈಜ್ಞಾನಿಕ ಉಸ್ತುವಾರಿ KSNDMCಗೆ

ಮೋಡ ಬಿತ್ತನೆ ಕಾರ್ಯಾಚರಣೆಯು specialised scientific activity ಆಗಿರುವುದರಿಂದ, ಪ್ರಸ್ತಾವನೆಯ ತಾಂತ್ರಿಕ ಮತ್ತು ವೈಜ್ಞಾನಿಕ ಅಂಶಗಳನ್ನು ಸ್ವತಂತ್ರವಾಗಿ ಪ್ರಮಾಣೀಕರಿಸಲು ಕರ್ನಾಟಕ ನೀರಾವರಿ ನಿಗಮದಲ್ಲಿ institutional expertise ಇಲ್ಲವೆಂದು ವರದಿಯಾಗಿತ್ತು.

**ಈ ಹಿನ್ನೆಲೆಯಲ್ಲಿ:** ತಾಂತ್ರಿಕ ಉಸ್ತುವಾರಿ:* Estimate Preparation, Technical Parameters, Meteorological Assessment, Monitoring, Operational Assessment ಮತ್ತು Completion Certification ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC) ವಹಿಸಿಕೊಳ್ಳಲಿದೆ.

**ಆರ್ಥಿಕ ಉಸ್ತುವಾರಿ:** ಆಡಳಿತಾತ್ಮಕ ಮತ್ತು ಬಿಲ್ ಪಾವತಿ ಸೇರಿದಂತೆ financial matters ಅನ್ನು ಕರ್ನಾಟಕ ನೀರಾವರಿ ನಿಗಮ ನಿಯಮಾನುಸಾರ ನಿರ್ವಹಿಸಲಿದೆ. ಈ ಆದೇಶವು ಕರ್ನಾಟಕ ಸರ್ಕಾರದ (ವ್ಯವಹಾರಗಳ ನಿರ್ವಹಣೆ) ನಿಯಮಗಳು 1977ರ 17ನೇ ನಿಯಮದ 2ನೇ ಉಪನಿಯಮದ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ-1) ಶುಭಾ ಕೆ. ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಅವರ ಮಾರ್ಗದರ್ಶನದಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದ್ದು, ಮುಂಗಾರು ಕೊರತೆಯ ನಡುವೆ ರೈತರಿಗೆ ಮತ್ತು ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಇದು ಸಹಕಾರಿಯಾಗಲಿದೆ ಎಂದು ಇಲಾಖೆ ತಿಳಿಸಿವೆ.

## ಒಂದು ಬೆಳಗು ಸಾಕು,ಜೀವನ ಬದಲಾಗುತ್ತದೆ



ನಿದ್ರೆಯ ಕರೆಯನ್ನು ಮುರಿದು, ಕೋಳಿ ಕೂಗುವ ಹೊತ್ತಿಗೆ ಕಣ್ಣು ತೆರೆದರೆ ಸಾಕು.ಆ ಬೆಳಗಿನ ತಂಗಾಳಿ ನಿಮ್ಮ ರಕ್ತನಾಳಗಳಿಗೆ ಹೊಸ ಸಂಗೀತ ಹರಿಸುತ್ತದೆ. ಅಂಗೈಯಲ್ಲಿ ನೀರು ಹಿಡಿದು ಮುಖ ತೊಳೆಯುವ ಮೊದಲು ಹಲ್ಲುಜ್ಜಿ ನಂತರ ಮುಖ ತೊಳೆದು ತಾಮ್ರದ ಚೊಂಬಿನ ನೀರು ಕುಡಿಯಿರಿ. ಹೊಟ್ಟೆಯೊಳಗಿನ ಬೆಂಕಿ ತಂಪಾಗುತ್ತದೆ, ದಿನವಿಡೀ ಸುಸ್ತು ಹತ್ತಿರ ಸುಳಿಯುವುದಿಲ್ಲ.

ಒಂಟಿ ನಡಿಗೆಯನ್ನು ಬಿಟ್ಟು ನೇರೆಯ ಜನರೊಂದಿಗೆ ಕಾಲುಜೋಡಿಸಿ. "ಇವತ್ತು ಹೇಗಿದ್ದೀರಿ" ಎಂಬ ಒಂದೇ ಮಾತು ರಕ್ತದ ಒತ್ತಡ ಇಳಿಸುತ್ತದೆ. ತಿಂಗಳಿಗೆ ಎರಡು ಬಾರಿ ಊರಿನ ಹಿರಿಯರೊಂದಿಗೆ ಮರ ನೆಟ್ಟು, ಮಕ್ಕಳಿಗೆ ಕಥೆ ಹೇಳಿ. ಕೈಯಿಂದ ಮಾಡುವ ಈ ಸಣ್ಣ ಕೆಲಸಗಳೇ ಮನಸ್ಸಿಗೆ ಅತಿ ದೊಡ್ಡ ಲಸಿಕೆಯಾಗುತ್ತವೆ. ಸಂಬಂಧ ಬೆಳೆಸಿದವರಿಗೆ ಆಸ್ಪತ್ರೆ ದೂರವಾಗುತ್ತದೆ.

ಆಹಾರ ಮತ್ತು ಚಲನೆಯಲ್ಲಿ ಹೊಸ ಪ್ರಯೋಗ ಮಾಡಿ. ಹತ್ತು ನಿಮಿಷ ಬಿಸಿಲು ಮೈಗೆ ತಾಗಲಿ. ತಿಂಡಿಗೆ ರಾಗಿ ಗಂಜಿ, ನೆನೆಸಿದ ಬದಾಮು ಮತ್ತು ಮೆಂತ್ಯ ನೀರು ರೂಢಿಸಿಕೊಳ್ಳಿ. ಒಂದು ಗಂಟೆ ಕೂತರೆ ಸಾಕು, ಎದ್ದು ಅಂಗಳ ಒಂದು ಸುತ್ತು ಹಾಕಿ ಬನ್ನಿ. ದೇಹವನ್ನು ಚಲಿಸಿದಷ್ಟೂ ಅದು ನಿಮ್ಮ ಮಾತು ಕೇಳುತ್ತದೆ.

ರಾತ್ರಿ ದೀಪ ಆರುವ ಮುನ್ನ ಪರದೆಯ ಬೆಳಕು ಆಫ್ ಮಾಡಿ. ಅನ್ನದ ತಟ್ಟೆಯ ಮುಂದೆ ಕುಟುಂಬದ ಕಥೆ ಇರಲಿ. ಇವತ್ತು ನಡೆದ ಒಂದು ನಗು, ಒಂದು ಸಹಾಯವನ್ನು ಡೈರಿಯಲ್ಲಿ ಬರೆದಿಡಿ. ದೇಹವನ್ನು ದೇಗುಲದಂತೆ ಕಾಪಾಡಿದರೆ, ರೋಗವೂ ಬಾಗಿಲಲ್ಲಿ ನಿಂತು ವಾಪಸ್ ಹೋಗುತ್ತದೆ. ಗುಳಿಗೆಯ ಮೊದಲು, ನಿಮ್ಮ ದಿನಚರಿಯೇ ದೊಡ್ಡ ವೈದ್ಯ.

ಅಂಕಣ-02

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

## ಕಾರ್ಯಾಧ್ಯಕ್ಷರಾಗಿ ನೇಮಕ



**ಮೈಸೂರು:** ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಮೈಸೂರು ಜಿಲ್ಲಾ ಯುವ ಘಟಕದ ಕಾರ್ಯಾಧ್ಯಕ್ಷರನ್ನಾಗಿ ಕಾರ್ತಿಕ್. ಎಂ ಅವರನ್ನು ನೇಮಿಸಲಾಗಿದೆ.

ಸಂಘದ ಕಾರ್ಯವೈಖರಿ ಹಾಗೂ ತತ್ವ,ಸಿದ್ಧಾಂತಗಳನ್ನು ಮೆಚ್ಚಿ ಸಂಘಕ್ಕೆ ಸೇರ್ಪಡೆ ಯಾಗುವ ಆಶಯ ವ್ಯಕ್ತಪಡಿಸಿ, ಪ್ರಧಾನ ಕಚೇರಿಗೆ ಆಗಮಿಸಿದ್ದ ಮೈಸೂರಿನ ಅಗ್ರ ಹಾರದ ನಿವಾಸಿಯಾದ ಕಾರ್ತಿಕ್.ಎಂ ಅವರನ್ನು ಮೈಸೂರು ಜಿಲ್ಲಾ ಯುವ ಘಟಕದ ಕಾರ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ, ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡರ ಸಮ್ಮುಖದಲ್ಲಿ ಆದೇಶ ಪತ್ರವನ್ನು ವಿತರಿಸಲಾಯಿತು.

ಅನ್ನದಾತರ ಪರವಾಗಿ ಸಂಘದ ಹಿತಾಸಕ್ತಿಗೆ ಬದ್ಧರಾಗಿ ಕಾರ್ಯ ನಿರ್ವಹಿಸಿ, ತಮಗೆ ನೀಡಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವುದಾಗಿ ಕಾರ್ತಿಕ್.ಎಂ ಅವರು ಈ ವೇಳೆ ತಿಳಿಸಿದರು.

## ಶಿಕ್ಷಣ, ಪ್ರತಿಭೆ ಮತ್ತು ಸಮಾನ ಅವಕಾಶ: ಮೈನಾ ನೇಮಕಾತಿ



**ಮಂಡ್ಯ:** ತೃತೀಯ ಲಿಂಗದ ಮೈನಾ ಹೆಚ್. ಅವರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರ ***(KVK)***, ಮಂಡ್ಯದಲ್ಲಿ ಸಹಾಯಕ ***(Assistant)*** ಹುದ್ದೆಗೆ ಕರ್ತವ್ಯಕ್ಕೆ ಹಾಜರಾಗಿದ್ದು, ವಿಶ್ವವಿದ್ಯಾಲಯದ ಸಮಾನ ಅವಕಾಶ, ಒಳಗೊಳ್ಳುವಿಕೆ ಹಾಗೂ ಪ್ರತಿಭಾ ಆಧಾರಿತ ನೇಮಕಾತಿಯ ಬದ್ಧತೆಯನ್ನು ಪ್ರತಿಬಿಂಬಿಸುವ ಮಹತ್ವದ ಸಾಧನೆಯಾಗಿದೆ.ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಕೃಷಿ ವಿಜ್ಞಾನ ಕೇಂದ್ರದ ಸಹಾಯಕ ಹುದ್ದೆಗೆ ನಡೆದ ನಿಗದಿತ ನೇಮಕಾತಿ ಪ್ರಕ್ರಿಯೆಯಲ್ಲಿ ಮೈನಾ ಹೆಚ್. ಅವರು ನೇಮಕಗೊಂಡಿದ್ದಾರೆ.

ಮೈನಾ ಹೆಚ್. ಅವರು 2015ರಲ್ಲಿ ***B.T.L. Institute of Technology and Management*** ನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿಯನ್ನು ಶೇ. 71.73 ಅಂಕಗಳೊಂದಿಗೆ ಪೂರ್ಣಗೊಳಿಸಿದ್ದಾರೆ. ಖಾಸಗಿ ವಲಯದಲ್ಲಿ ವೃತ್ತಿ ಅನುಭವ ಪಡೆದ ನಂತರ, ನಿರಂತರ ಪರಿಶ್ರಮ, ಆತ್ಮವಿಶ್ವಾಸ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಯ ಮೂಲಕ ಸರ್ಕಾರಿ ಸೇವೆಗೆ ಆಯ್ಕೆಯಾಗಿದ್ದಾರೆ.

ತಮ್ಮ ಸಾಧನೆಯ ಕುರಿತು ಮಾತನಾಡಿದ ಮೈನಾ ಹೆಚ್. ಅವರು, ಶಿಕ್ಷಣ, ಪರಿಶ್ರಮ, ಆತ್ಮವಿಶ್ವಾಸ ಮತ್ತು ನಿರಂತರ ಪ್ರಯತ್ನದಿಂದ ಸರ್ಕಾರಿ ಉದ್ಯೋಗ ಪಡೆಯಬೇಕೆಂಬ ನನ್ನ ಕನಸು ನನಸಾಗಿದೆ. ದೊರೆತಿರುವ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತೇನೆ ಎಂದು ಹೇಳಿದರು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯದ ಗೌರವಾನ್ವಿತ ಕುಲಪತಿಗಳಾದ ಡಾ. ಕೆ.ಸಿ. ನಾರಾಯಣಸ್ವಾಮಿ ಅವರು ಮೈನಾ ಹೆಚ್. ಅವರನ್ನು ಅಭಿನಂದಿಸಿ, ಶಿಕ್ಷಣ, ಸಾಮರ್ಥ್ಯ ಮತ್ತು ಪ್ರತಿಭೆಯ ಆಧಾರದ ಮೇಲೆ ಸರ್ಕಾರಿ ಸೇವೆಗೆ ಆಯ್ಕೆಯಾಗಿರುವ ಮೈನಾ ಅವರ ಸಾಧನೆ ಶ್ಲಾಘನೀಯ. ಕೃಷಿ ವಿಶ್ವವಿದ್ಯಾಲಯಗಳ ವ್ಯವಸ್ಥೆಯಲ್ಲಿ ತೃತೀಯ ಲಿಂಗದ ವ್ಯಕ್ತಿಯೊಬ್ಬರು ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಅವರ ಸಾಧನೆಯು ತೃತೀಯ ಲಿಂಗದ ಯುವಜನರು ಶಿಕ್ಷಣ, ಉದ್ಯೋಗ ಮತ್ತು ಸ್ವಾವಲಂಬನೆಯತ್ತ ಮುನ್ನಡೆಯಲು ಪ್ರೇರಣೆಯಾಗಲಿದೆ ಎಂದು ತಿಳಿಸಿದರು. ಮೈನಾ ಹೆಚ್. ಅವರ ಸಾಧನೆಯು ಅವಕಾಶ ದೊರೆತಾಗ ಪ್ರತಿಭೆಯನ್ನು ಸಾಬೀತುಪಡಿಸಬಹುದು ಎಂಬ ಸಂದೇಶವನ್ನು ಸಮಾಜಕ್ಕೆ ನೀಡಿದ್ದು, ಸಮಾನ ಅವಕಾಶ ಮತ್ತು ಒಳಗೊಳ್ಳುವಿಕೆ ಮಹತ್ವವನ್ನು ಸಾರುತ್ತದೆ.

## 'ಇಲ್ಲ ' ಎನ್ನುವುದು ಅಹಂಕಾರವಲ್ಲ




ಸಮಾಜದಲ್ಲಿ ಗೌರವದಿಂದ, ನೆಮ್ಮದಿಯಿಂದ ಬದುಕಲು ಪ್ರತಿಯೊಬ್ಬ ವ್ಯಕ್ತಿಗೂ ಕೆಲವು ಮೂಲಭೂತ ಕೌಶಲಗಳು ಅಗತ್ಯ. ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಮತ್ತು ನಾವು ಆಗಾಗ್ಗೆ ನಿರ್ಲಕ್ಷಿಸುವುದು 'ಇಲ್ಲ' ಅಥವಾ 'ಸಾಧ್ಯವಿಲ್ಲ' ಎಂದು ಸ್ಪಷ್ಟವಾಗಿ ಹೇಳುವ ಕಲೆ. ಬಾಲ್ಯದಿಂದಲೂ ನಮಗೆ ಇತರರನ್ನು ತೃಪ್ತಿಪಡಿಸುವುದನ್ನೇ ಶ್ರೇಷ್ಠ ಗುಣವೆಂದು ಬೋಧಿಸಲಾಗುತ್ತದೆ. ಯಾರಾದರೂ ಸಹಾಯ ಕೇಳಿದಾಗ, ಆಹ್ವಾನಿಸಿದಾಗ ಅಥವಾ ಜವಾಬ್ದಾರಿ ನೀಡಿದಾಗ 'ಆಗಲಿ' ಎನ್ನುವುದೇ ವಿನಯದ ಲಕ್ಷಣ ಎಂಬ ನಂಬಿಕೆ ನಮ್ಮಲ್ಲಿ ಬೇರೂರಿದೆ. ಆದರೆ, ನಮ್ಮ ಸಾಮರ್ಥ್ಯ ಮತ್ತು ಮಿತಿಗಳನ್ನು ಮೀರಿ ಪ್ರತಿಯೊಂದಕ್ಕೂ 'ಹೌದು' ಎನ್ನುತ್ತಾ ಹೋದರೆ, ಅದು ಕೊನೆಗೆ ನಮ್ಮ ಮಾನಸಿಕ ಶಾಂತಿ, ಆರೋಗ್ಯ ಮತ್ತು ಸೃಜನಶೀಲತೆಯನ್ನೇ ಬಲಿ ತೆಗೆದುಕೊಳ್ಳುತ್ತದೆ. ಆದ್ದರಿಂದ, 'ಇಲ್ಲ' ಎಂದು ಹೇಳುವುದನ್ನು ಸಾಂಸ್ಕೃತಿಕವಾಗಿ ಮತ್ತು ಮಾನಸಿಕವಾಗಿ ಒಂದು ಉನ್ನತ ಕಲೆಯಾಗಿ ನಾವು ಸ್ವೀಕರಿಸಬೇಕಾಗಿದೆ.

1. **ಸಾಂಸ್ಕೃತಿಕ ಹಿನ್ನೆಲೆ ಮತ್ತು ಅಪರಾಧ ಪ್ರಜ್ಞೆಯ ಸುಳಿ**
   ನಮ್ಮ ಸಾಮಾಜಿಕ ವ್ಯವಸ್ಥೆಯು ಸಾಮೂಹಿಕ ಜೀವನ ಶೈಲಿಯನ್ನು ಆಧರಿಸಿದೆ. 'ಅತಿಥಿ ದೇವೋ ಭವ' ಮತ್ತು ಪರಸ್ಪರ ಸಹಕಾರ ನಮ್ಮ ಸಂಸ್ಕೃತಿಯ ಜೀವಾಳ. ಇಂತಹ ವಾತಾವರಣದಲ್ಲಿ ಬೆಳೆದ ನಮಗೆ ಯಾರನ್ನಾದರೂ ನೇರವಾಗಿ ನಿರಾಕರಿಸುವುದು ಅತ್ಯಂತ ಕಷ್ಟದ ಕೆಲಸ. ಕುಟುಂಬ, ಬಂಧುಬಳಗ ಅಥವಾ ಕಚೇರಿಯಲ್ಲಿ 'ಇಲ್ಲ' ಎಂದರೆ ಎಲ್ಲಿ ಬಾಂಧವ್ಯ ಹಾಳಾಗುತ್ತದೋ, ಎಲ್ಲಿ ನಮ್ಮನ್ನು 'ಸ್ವಾರ್ಥಿ' ಅಥವಾ 'ಅಹಂಕಾರಿ' ಎಂದು ಜರಿಯುತ್ತಾರೋ ಎನ್ನುವ ಭೀತಿ ನಮ್ಮನ್ನು ಸದಾ ಕಾಡುತ್ತದೆ.
   ಈ ಭೀತಿಯಿಂದಲೇ ಹುಟ್ಟಿಕೊಳ್ಳುವುದು 'ಅಪರಾಧ ಪ್ರಜ್ಞೆ' ***(Guilt Culture)***. ಈ ಪ್ರಜ್ಞೆಯು ವ್ಯಕ್ತಿಯನ್ನು ತನ್ನ ಇಷ್ಟವಿಲ್ಲದಿದ್ದರೂ, ತನ್ನ ಕೈಲಲ್ಲಿ ಸಾಧ್ಯವಿಲ್ಲದಿದ್ದರೂ ಇತರರ ಒತ್ತಡಕ್ಕೆ ಮಣಿದು ಒಪ್ಪಿಗೆ ಸೂಚಿಸುವಂತೆ ಮಾಡುತ್ತದೆ. ಆದರೆ ನಾವು ಗ್ರಹಿಸಬೇಕಾದ ಸತ್ಯವೆಂದರೆ ಎಲ್ಲರನ್ನೂ ಸದಾ ಸಂತಸಪಡಿಸಲು ಸಾಧ್ಯವಿಲ್ಲ. ಇತರರನ್ನು ಮೆಚ್ಚಿಸುವ ಭರದಲ್ಲಿ ನಮ್ಮ ಸ್ವಂತ ಜೀವನದ ಆದ್ಯತೆಗಳನ್ನು ಬಲಿಕೊಡುವುದು ದಯೆಯಲ್ಲ; ಅದು ನಮ್ಮದೇ ವ್ಯಕ್ತಿತ್ವಕ್ಕೆ ನಾವು ಎಸಗುವ ಅನ್ಯಾಯ.
2. **ಮಾನಸಿಕ ಆರೋಗ್ಯ ಮತ್ತು 'ಬರ್ನ್‌ಔಟ್' ಪರಿಣಾಮ**
   ನಿರಂತರವಾಗಿ 'ಹೌದು' ಎನ್ನುವ ಅಭ್ಯಾಸವು ವ್ಯಕ್ತಿಯ ಮಾನಸಿಕ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ. ಜಗತ್ತಿನ ಪ್ರತಿಯೊಂದು ವಿನಂತಿಗೂ ಸ್ಪಂದಿಸಲು ಹೊರಟಾಗ, ನಮ್ಮ ಸ್ವಂತ ಸಮಯ ಮತ್ತು ಶಕ್ತಿ ಕ್ಷೀಣಿಸುತ್ತದೆ. ಇದು ಕೊನೆಗೆ ತೀವ್ರ ಮಾನಸಿಕ ಒತ್ತಡ, ಕೋಪ ಮತ್ತು ಆಂತರಿಕ ಅಸಮಾಧಾನಕ್ಕೆ ಹಾದಿ ಮಾಡಿಕೊಡುತ್ತದೆ. ಮಾನಸಿಕ ವಿಜ್ಞಾನದ ಪ್ರಕಾರ, ಸ್ಪಷ್ಟ ಗಡಿಗಳನ್ನು ***(Psychological Boundaries)*** ಕಾಯ್ದುಕೊಳ್ಳದ ವ್ಯಕ್ತಿಗಳು ಬೇಗನೆ 'ಬರ್ನ್‌ಔಟ್' ಅಥವಾ ಮಾನಸಿಕ ಆಯಾಸಕ್ಕೆ ಒಳಗಾಗುತ್ತಾರೆ. ಪ್ರತಿಯೊಂದಕ್ಕೂ ಒಪ್ಪಿಗೆ ನೀಡುತ್ತಾ ಹೋದಾಗ, ನಾವು ಮಾಡುವ ಯಾವುದೇ ಕೆಲಸದಲ್ಲೂ ಪೂರ್ಣ ಪ್ರಮಾಣದ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದ ಆತ್ಮವಿಶ್ವಾಸ ಕುಸಿಯುತ್ತದೆ. 'ಇಲ್ಲ' ಎಂದು ಹೇಳುವುದು ಎಂದರೆ ಇತರರನ್ನು ದ್ವೇಷಿಸುವುದಲ್ಲ; ಬದಲಿಗೆ ನಮ್ಮ ಮಾನಸಿಕ ಗಡಿಗಳನ್ನು ರಕ್ಷಿಸಿಕೊಳ್ಳುವುದು.
3. ಬದುಕಿನ ವಿವಿಧ ರಂಗಗಳಲ್ಲಿ ನಿರಾಕರಣೆಯ ಅನ್ವಯ
   ಅ) ವೃತ್ತಿಜೀವನ ಮತ್ತು ಕಚೇರಿಯ ವಾತಾವರಣದಲ್ಲಿ: ಉದ್ಯೋಗದ ಸ್ಥಳದಲ್ಲಿ ನಿಮ್ಮ ಕೆಲಸದ ಮಿತಿಯನ್ನು ಗುರುತಿಸುವುದು ಅತ್ಯಗತ್ಯ. ನಿಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸವನ್ನು ವಹಿಸಿದಾಗ ಅಥವಾ ನಿಮ್ಮ ವ್ಯಾಪ್ತಿಗೆ ಬಾರದ ಜವಾಬ್ದಾರಿಗಳನ್ನು ಹೇರಿದಾಗ ಮೌನವಾಗಿ ಒಪ್ಪಿಕೊಳ್ಳುವುದು ವೃತ್ತಿಪರತೆಯಲ್ಲ. "ನನ್ನ ಪ್ರಸ್ತುತ ಜವಾಬ್ದಾರಿಗಳಿಗೆ ಪೂರ್ಣ ನ್ಯಾಯ ಒದಗಿಸಲು ನನಗೆ ಈ ಹೊಸ ಕೆಲಸವನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ" ಎಂದು ಸ್ಪಷ್ಟವಾಗಿ ತಿಳಿಸುವುದು ನಿಮ್ಮ ವೃತ್ತಿಪರ ನೈತಿಕತೆಯನ್ನು ಎತ್ತಿಹಿಡಿಯುತ್ತದೆ. ಇದು ಮೇಲಧಿಕಾರಿಗಳಿಗೆ ನಿಮ್ಮ ಕೆಲಸದ ಮೇಲಿರುವ ಬದ್ಧತೆಯನ್ನು ತೋರಿಸುತ್ತದೆಯೇ ಹೊರತು ಸೋಲನ್ನಲ್ಲ.
   ಆ) ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳಲ್ಲಿ: ಬಂಧು-ಮಿತ್ರರ ನಡುವೆ ನಿರಾಕರಣೆ ಅತ್ಯಂತ ಸೂಕ್ಷ್ಮ ವಿಷಯ. ಅನಗತ್ಯ ಸಾಮಾಜಿಕ ಸಮಾರಂಭಗಳು, ಸಾಲದ ಬೇಡಿಕೆಗಳು ಅಥವಾ ಅನಗತ್ಯ ಅಪೇಕ್ಷೆಗಳಿಗೆ ಒಪ್ಪಿಗೆ ನೀಡಿ ನಂತರ ಒಳಗೆ ಕೊರಗುವುದಕ್ಕಿಂತ ಆರಂಭದಲ್ಲೇ ವಿನಮ್ರವಾಗಿ ನಿರಾಕರಿಸುವುದು ಒಳಿತು. "ನಿಮ್ಮ ಆಹ್ವಾನ/ಅಗತ್ಯ ನನಗೆ ಅರ್ಥವಾಗುತ್ತದೆ, ಆದರೆ ಅನಿವಾರ್ಯ ಕಾರಣಗಳಿಂದ ನನಗೆ ಭಾಗವಹಿಸಲು/ಸಹಕರಿಸಲು ಸಾಧ್ಯವಾಗುತ್ತಿಲ್ಲ" ಎನ್ನುವ ಸ್ಪಷ್ಟ ಮಾತು ಸುಳ್ಳು ಭರವಸೆಗಿಂತ ನೂರು ಪಟ್ಟು ಲೇಸು.
   ಇ) ಪೋಷಕತ್ವದಲ್ಲಿ ***(Parenting)***: ಇಂದಿನ ಪೋಷಕರು ಎದುರಿಸುತ್ತಿರುವ ದೊಡ್ಡ ಸವಾಲೆಂದರೆ ಮಕ್ಕಳಿಗೆ 'ಇಲ್ಲ' ಎಂದು ಹೇಳುವುದು. ಮಕ್ಕಳ ಪ್ರತಿಯೊಂದು ಹಠಕ್ಕೂ, ಬೇಡಿಕೆಗೂ 'ಹೌದು' ಎನ್ನುವುದು ಪ್ರೀತಿಯ ಸಂಕೇತವಲ್ಲ. ಬಾಲ್ಯದಲ್ಲೇ 'ಇಲ್ಲ' ಎನ್ನುವ ವಾಸ್ತವವನ್ನು ಎದುರಿಸದ ಮಕ್ಕಳು ಬೆಳೆದಂತೆ ಸಣ್ಣ ಸೋಲು ಅಥವಾ ನಿರಾಕರಣೆಯನ್ನೂ ತಡೆದುಕೊಳ್ಳಲಾಗದೆ ಕುಸಿದುಬೀಳುತ್ತಾರೆ. ಮಕ್ಕಳಿಗೆ ವಸ್ತುವಿನ ಅಥವಾ ಸಮಯದ ಮೌಲ್ಯವನ್ನು ತಿಳಿಸಲು ಸೂಕ್ತ ಸಮಯದಲ್ಲಿ 'ಇಲ್ಲ' ಎಂದು ಹೇಳುವುದು ಪ್ರಬುದ್ಧ ಪೋಷಕತ್ವದ ಲಕ್ಷಣ.
4. ಗೌರವಯುತವಾಗಿ 'ಇಲ್ಲ' ಎಂದು ಹೇಳುವ ಕಲೆ
   'ಇಲ್ಲ' ಎಂದು ಹೇಳುವುದು ಕೋಪದಿಂದ ಅಥವಾ ಅಹಂಕಾರದಿಂದ ಮಾಡುವ ಕೆಲಸವಲ್ಲ. ಅದನ್ನು ಶಮನವಾಗಿ, ವಿನಯದಿಂದ ಮತ್ತು ಸ್ಪಷ್ಟವಾಗಿ ನಿರ್ವಹಿಸಬಹುದು. ಅದಕ್ಕಾಗಿ ಕೆಲವು ಸರಳ ತಂತ್ರಗಳನ್ನು ಅಳವಡಿಸಿಕೊಳ್ಳಬಹುದು:
   - ಸರಳತೆ ಮತ್ತು ನೇರ ನಡೆ: ಸುದೀರ್ಘ ಸುಳ್ಳು ನೆಪಗಳನ್ನು ಹೆಣೆಯಬೇಡಿ. ಸುಳ್ಳುಗಳು ಸಿಕ್ಕಿಬಿದ್ದಾಗ ಸಂಬಂಧಗಳು ಇನ್ನಷ್ಟು ಹಾಳಾಗುತ್ತವೆ. ನಿರಾಕರಣೆಗೆ ಸರಳ ಹಾಗೂ ಸತ್ಯವಾದ ಕಾರಣ ನೀಡಿ.
   - **ಕೃತಜ್ಞತೆ ವ್ಯಕ್ತಪಡಿಸುವುದು:** ಒಬ್ಬರು ನಿಮ್ಮ ಬಳಿ ಸಹಾಯ ಅಥವಾ ಸಲಹೆ ಕೇಳಿ ಬಂದಾಗ, ಅವರ ನಂಬಿಕೆಯನ್ನು ಗೌರವಿಸಿ. "ನನ್ನನ್ನು ನೆನಪಿಸಿಕೊಂಡಿದ್ದಕ್ಕೆ ಧನ್ಯವಾದಗಳು, ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ನನಗೆ ಇದು ಸಾಧ್ಯವಿಲ್ಲ" ಎಂದು ಹೇಳಿ.
   - **ಪರ್ಯಾಯ ಮಾರ್ಗ ಸೂಚಿಸುವುದು:** ಸಂಪೂರ್ಣವಾಗಿ ಬಾಗಿಲು ಮುಚ್ಚುವ ಬದಲು ಸಾಧ್ಯವಿದ್ದರೆ ಪರ್ಯಾಯ ಪರಿಹಾರ ನೀಡಿ. "ನನಗೆ ಈ ಕೆಲಸ ಮಾಡಲು ಸಮಯವಿಲ್ಲ, ಆದರೆ ಇದನ್ನು ಮಾಡಬಲ್ಲ ಇನ್ನೊಬ್ಬ ವ್ಯಕ್ತಿಯನ್ನು ನಾನು ಪರಿಚಯಿಸಬಲ್ಲೆ" ಎನ್ನಬಹುದು.
   - ಸಮಯ ಕೇಳುವುದು: ತಕ್ಷಣದ ಒತ್ತಡದಲ್ಲಿ 'ಹೌದು' ಎಂದುಬಿಡುವ ಅಭ್ಯಾಸವಿದ್ದರೆ, "ನಾನು ಯೋಚಿಸಿ ನಾಳೆ ತಿಳಿಸುತ್ತೇನೆ" ಎಂದು ಸಮಯ ತಡೆದು ನಿರ್ಧಾರ ತಗೊಳ್ಳಿ.
5. ನಿಜವಾದ 'ಹೌದು' ಎನ್ನುವ ಮಾತಿನ ಮೌಲ್ಯ
   ನಾವು ಪ್ರತಿಯೊಂದಕ್ಕೂ 'ಹೌದು' ಎನ್ನುತ್ತಿದ್ದರೆ, ಆ 'ಹೌದು' ಎನ್ನುವ ಮಾತಿಗೆ ಯಾವುದೇ ತೂಕ ಅಥವಾ ಮೌಲ್ಯ ಇರುವುದಿಲ್ಲ. ಯಾವ ವ್ಯಕ್ತಿಗೆ ಧೈರ್ಯವಾಗಿ 'ಇಲ್ಲ' ಎಂದು ಹೇಳುವ ಸಾಮರ್ಥ್ಯವಿರುತ್ತದೆಯೋ, ಆತ ಹೇಳುವ 'ಹೌದು' ಎನ್ನುವ ಮಾತಿಗೆ ಸತ್ಯಸಂಧತೆ ಮತ್ತು ಬದ್ಧತೆ ಇರುತ್ತದೆ.
   'ಇಲ್ಲ' ಎನ್ನುವುದು ಬಾಂಧವ್ಯಗಳನ್ನು ಕಡಿತಗೊಳಿಸುವ ಕತ್ತರಿಯಲ್ಲ; ಬದಲಿಗೆ ನಮ್ಮ ಜೀವನದ ಆದ್ಯತೆಗಳನ್ನು, ಸಮಯವನ್ನು ಮತ್ತು ಆತ್ಮಗೌರವವನ್ನು ಜೋಪಾನವಾಗಿ ಕಾಯ್ದುಕೊಳ್ಳುವ ಗುರಾಣಿ. ಸಮಾಜದ ಮೆಚ್ಚುಗೆಗಾಗಿ ನಮ್ಮನ್ನೇ ನಾವು ಕಳೆದುಕೊಳ್ಳುವ ಬದಲು, ಮುಕ್ತ ಮನಸ್ಸಿನಿಂದ, ಗೌರವಯುತವಾಗಿ ನಿರಾಕರಿಸುವುದನ್ನು ಕಲಿಯೋಣ. ಏಕೆಂದರೆ, ಸ್ವಯಂ ಗೌರವವಿಲ್ಲದ ಮನಸ್ಸಿನಿಂದ ಇತರರಿಗೆ ನೀಡುವ ಯಾವುದೇ ಸಹಕಾರವೂ ಪೂರ್ಣಪ್ರಮಾಣದ್ದಾಗಿರಲು ಸಾಧ್ಯವಿಲ್ಲ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಮೊಬೈಲ್ ಕೈಯಲ್ಲಿದೆಯೇ ಅಥವಾ ಮೊಬೈಲ್‌ನ ಕೈಯಲ್ಲಿ ನಾವಿದ್ದೇವೆಯೇ



| ಶಿವಬಸಪ್ಪ ಗು ಜಂಗಾಲಿ


ಒಂದು ಕಾಲದಲ್ಲಿ ಮೊಬೈಲ್ ಫೋನ್ ನಮ್ಮ ಕೈಯಲ್ಲಿದ್ದ ಒಂದು ಸಾಧನವಾಗಿತ್ತು. ಇಂದು ಅದು ನಮ್ಮ ಕೈಯಲ್ಲಿದೆಯೋ, ಅಥವಾ ನಾವೇ ಅದರ ಕೈಯಲ್ಲಿದ್ದೇವೋ ಎಂಬ ಪ್ರಶ್ನೆ ಮೂಡುವಷ್ಟು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಬೆಳಗ್ಗೆ ಕಣ್ಣು ತೆರೆದ ತಕ್ಷಣ ದೇವರ ನೆನಪಿಗಿಂತ ಮೊದಲು ಮೊಬೈಲ್ ಪರದೆ ನೋಡುವ ಅಭ್ಯಾಸ, ರಾತ್ರಿ ಕಣ್ಣು ಮುಚ್ಚುವ ಮುನ್ನ ಕೊನೆಯ ಕ್ಷಣದವರೆಗೂ ಮೊಬೈಲ್ ಕೈಬಿಡದ ಸ್ಥಿತಿ ಸಾಮಾನ್ಯವಾಗುತ್ತಿದೆ. ಊಟದ ಮೇಜಿನ ಮೇಲೆ ಊಟಕ್ಕಿಂತ ಮೊಬೈಲ್‌ಗೆ ಹೆಚ್ಚು ಜಾಗ, ಕುಟುಂಬದ ಮಾತುಕತೆಯಲ್ಲಿ ಮುಖಾಮುಖಿ ಸಂಭಾಷಣೆಗೆ ಬದಲಾಗಿ ಪರದೆಯ ಬೆಳಕು, ಪ್ರವಾಸದ ಸಂದರ್ಭದಲ್ಲಿ ಪ್ರಕೃತಿಯನ್ನು ನೋಡುವುದಕ್ಕಿಂತ ಅದರ ಫೋಟೋ ತೆಗೆಯುವ ಆತುರ ಇವೆಲ್ಲವೂ ನಮ್ಮ ಜೀವನಶೈಲಿಯಲ್ಲಿ ನಡೆದಿರುವ ದೊಡ್ಡ ಬದಲಾವಣೆಯ ಸಂಕೇತಗಳು. ತಂತ್ರಜ್ಞಾನ ಮನುಷ್ಯನ ಸೇವೆಗೆ ಬಂದಿತೇ ಹೊರತು ಮನುಷ್ಯ ತಂತ್ರಜ್ಞಾನದ ಸೇವಕನಾಗಲು ಅಲ್ಲ. ಆದರೆ ಇಂದು ಈ ಗಡಿ ನಿಧಾನವಾಗಿ ಮಸುಕಾಗುತ್ತಿದೆ.

ಮೊಬೈಲ್ ಫೋನ್ ಸ್ವತಃ ಶತ್ರುವಲ್ಲ. ಅದು ಜ್ಞಾನದ ಬಾಗಿಲು, ಸಂವಹನದ ಸೇತುವೆ, ಶಿಕ್ಷಣದ ಸಾಧನ, ಉದ್ಯೋಗದ ಅವಕಾಶ, ವ್ಯಾಪಾರದ ವೇದಿಕೆ ಮತ್ತು ತುರ್ತು ಸಂದರ್ಭಗಳಲ್ಲಿ ನೆರವಾಗುವ ಅತ್ಯಂತ ಉಪಯುಕ್ತ ಸಾಧನ. ಒಂದು ಕಾಲದಲ್ಲಿ ಮಾಹಿತಿ ಪಡೆಯಲು ಗ್ರಂಥಾಲಯ ಹುಡುಕಬೇಕಾಗಿತ್ತು; ಇಂದು ಕೆಲವೇ ಕ್ಷಣಗಳಲ್ಲಿ ಜಗತ್ತಿನ ಮಾಹಿತಿಯನ್ನು ಕೈಯಲ್ಲಿರುವ ಮೊಬೈಲ್ ಮೂಲಕ ಪಡೆಯಬಹುದು. ವಿದ್ಯಾರ್ಥಿಗಳು ಆನ್‌ಲೈನ್ ಪಾಠಗಳನ್ನು ಕಲಿಯಬಹುದು, ಉದ್ಯೋಗಿಗಳು ದೂರದಿಂದಲೇ ಕೆಲಸ ಮಾಡಬಹುದು, ರೈತರು ಹವಾಮಾನ ಮತ್ತು ಮಾರುಕಟ್ಟೆ ಮಾಹಿತಿಯನ್ನು ಪಡೆಯಬಹುದು, ಕುಟುಂಬದವರು ದೂರದಲ್ಲಿದ್ದರೂ ಕ್ಷಣಾರ್ಧದಲ್ಲಿ ಸಂಪರ್ಕಿಸಬಹುದು. ಭಾರತದಲ್ಲಿ ಡಿಜಿಟಲ್ ಸಂಪರ್ಕದ ವ್ಯಾಪ್ತಿ ಬಹಳ ವೇಗವಾಗಿ ವಿಸ್ತರಿಸಿದ್ದು, 2025ರಲ್ಲಿ ಸುಮಾರು 85.5% ಕುಟುಂಬಗಳಲ್ಲಿ ಕನಿಷ್ಠ ಒಂದು ಸ್ಮಾರ್ಟ್‌ಫೋನ್ ಇದ್ದಿದೆ ಎಂದು ಆರ್ಥಿಕ ಸಮೀಕ್ಷೆಯ ಅಧ್ಯಾಯವೊಂದು ದಾಖಲಿಸಿದೆ.

ಆದರೆ ಸಮಸ್ಯೆ ಮೊಬೈಲ್ ಹೊಂದಿರುವುದರಲ್ಲಿ ಇಲ್ಲ; ಮೊಬೈಲ್ ನಮ್ಮ ಜೀವನವನ್ನು ಎಷ್ಟು ನಿಯಂತ್ರಿಸುತ್ತಿದೆ ಎಂಬುದರಲ್ಲಿ ಇದೆ. ಅಗತ್ಯವಿದ್ದಾಗ ಬಳಸಬೇಕಾದ ಸಾಧನವನ್ನು ಅಗತ್ಯವಿಲ್ಲದಿದ್ದರೂ ಮತ್ತೆ ಮತ್ತೆ ಕೈಗೆತ್ತಿಕೊಳ್ಳುವುದು ಯಾವಾಗ ಆರಂಭವಾಗುತ್ತದೆ ಎಂಬುದೇ ನಮಗೆ ತಿಳಿಯುವುದಿಲ್ಲ. ಒಂದು ನೋಟಿಫಿಕೇಶನ್, ಒಂದು ಸಂದೇಶ, ಒಂದು ರೀಲ್, ಒಂದು ವಿಡಿಯೋ ಹೀಗೆ ಆರಂಭವಾದ ಬಳಕೆ ಕೆಲವೊಮ್ಮೆ ಗಂಟೆಗಳ ಕಾಲ ಮುಂದುವರಿಯುತ್ತದೆ. ಇನ್ನೊಂದು ವಿಡಿಯೋ ಮಾತ್ರ ಎಂದು ಆರಂಭಿಸಿದ ವ್ಯಕ್ತಿ ಯಾವಾಗ ರಾತ್ರಿ ಕಳೆದಿದೆ ಎಂಬುದನ್ನೇ ಗಮನಿಸದಿರುವುದು ಹೊಸ ಸಾಮಾನ್ಯವಾಗಿದೆ. ಮೊಬೈಲ್‌ನಲ್ಲಿರುವ ವಿಷಯಗಳಿಗೆ ಅಂತ್ಯವಿಲ್ಲ; ಆದರೆ ಮನುಷ್ಯನ ಸಮಯಕ್ಕೆ ಮಾತ್ರ ಮಿತಿ ಇದೆ. ಆ ಮಿತಿಯನ್ನೇ ನಾವು ಮರೆತಾಗ ಸಮಸ್ಯೆ ಆರಂಭವಾಗುತ್ತದೆ.

ಇದರ ಪರಿಣಾಮವನ್ನು ಮಕ್ಕಳ ಜೀವನದಲ್ಲಿ ಇನ್ನಷ್ಟು ಸ್ಪಷ್ಟವಾಗಿ ಕಾಣಬಹುದು. ಆಟದ ಮೈದಾನದಲ್ಲಿ ಓಡಾಡಬೇಕಾದ ವಯಸ್ಸಿನಲ್ಲಿ ಮಕ್ಕಳು ಮೊಬೈಲ್ ಪರದೆಯ ಮುಂದೆ ಕುಳಿತುಕೊಳ್ಳುತ್ತಿದ್ದಾರೆ. ಸ್ನೇಹಿತರೊಂದಿಗೆ ಮಾತನಾಡಬೇಕಾದ ಸಮಯವನ್ನು ಆನ್‌ಲೈನ್ ಆಟಗಳು ಮತ್ತು ಚಿಕ್ಕ ವಿಡಿಯೋಗಳು ಆಕ್ರಮಿಸಿಕೊಳ್ಳುತ್ತಿವೆ. ಪುಸ್ತಕ ಓದುವ ಸಹನೆ ಕಡಿಮೆಯಾಗುತ್ತಿದೆ; ಒಂದು ವಿಷಯದ ಮೇಲೆ ದೀರ್ಘಕಾಲ ಗಮನ ಕೇಂದ್ರೀಕರಿಸುವ ಸಾಮರ್ಥ್ಯಕ್ಕೂ ಸವಾಲು ಎದುರಾಗುತ್ತಿದೆ. ಇತ್ತೀಚೆಗೆ ಸಂಸದೀಯ ಸಮಿತಿಯೊಂದು ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಮೊಬೈಲ್ ವ್ಯಸನದ ಬಗ್ಗೆ ಕಳವಳ ವ್ಯಕ್ತಪಡಿಸಿ, 9ರಿಂದ 12ನೇ ತರಗತಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ ಸೈಬರ್‌ಸ್ಪೇಸ್ ಸುರಕ್ಷತಾ ಕಾರ್ಯಕ್ರಮದ ಅಗತ್ಯವನ್ನು ಒತ್ತಿಹೇಳಿದೆ.

ಮಕ್ಕಳಿಗೆ ಮೊಬೈಲ್ ಕೊಡಬಾರದು ಎಂಬುದು ಪರಿಹಾರವಲ್ಲ; ಆದರೆ ಮೊಬೈಲ್ ಹೇಗೆ ಬಳಸಬೇಕು ಎಂಬುದನ್ನು ಕಲಿಸದೇ ಕೈಗೆ



ಕೊಡುವುದು ದೊಡ್ಡ ತಪ್ಪು. ಪೋಷಕರು ಮಕ್ಕಳನ್ನು ಮೊಬೈಲ್ ನೋಡಬೇಡ ಎಂದು ಹೇಳುವ ಮೊದಲು ತಾವು ದಿನಕ್ಕೆ ಎಷ್ಟು ಗಂಟೆ ಮೊಬೈಲ್ ನೋಡುತ್ತಾರೆ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಮಕ್ಕಳು ಮಾತಿನಿಂದ ಮಾತ್ರ ಕಲಿಯುವುದಿಲ್ಲ; ಅವರು ಮನೆಯಲ್ಲಿರುವವರನ್ನು ನೋಡಿ ಕಲಿಯುತ್ತಾರೆ. ತಂದೆ ಊಟ ಮಾಡುವಾಗ ಮೊಬೈಲ್ ನೋಡುತ್ತಿದ್ದರೆ, ತಾಯಿ ನಿರಂತರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ತೊಡಗಿದ್ದರೆ, ಮಗುವಿಗೆ ಮೊಬೈಲ್ ಬಳಕೆ ತಪ್ಪು ಎಂದು ಹೇಳುವುದು ಪರಿಣಾಮಕಾರಿಯಾಗುವುದಿಲ್ಲ. ಮನೆಯಲ್ಲಿಯೇ ಡಿಜಿಟಲ್ ಶಿಸ್ತು ಆರಂಭವಾಗಬೇಕು.

ಇಂದು ಕುಟುಂಬದೊಳಗಿನ ಮೌನಕ್ಕೂ ಮೊಬೈಲ್ ಒಂದು ಕಾರಣವಾಗುತ್ತಿದೆ. ಒಂದೇ ಮನೆಯಲ್ಲಿ ನಾಲ್ಕು ಜನರಿದ್ದರೂ ನಾಲ್ಕು ಪರದೆಗಳು, ನಾಲ್ಕು ಪ್ರಪಂಚಗಳು. ತಂದೆ ಒಂದು ವಿಡಿಯೋದಲ್ಲಿ, ತಾಯಿ ಮತ್ತೊಂದು ಸಾಮಾಜಿಕ ಜಾಲತಾಣದಲ್ಲಿ, ಮಕ್ಕಳು ಆನ್‌ಲೈನ್ ಆಟದಲ್ಲಿ ಮನೆ ಒಂದೇ ಆದರೂ ಮನಸ್ಸುಗಳು ಬೇರೆ ಬೇರೆ ಲೋಕಗಳಲ್ಲಿ. ಹಿಂದೆ ಊಟದ ಸಮಯದಲ್ಲಿ ಇಂದು ಏನಾಯಿತು ಎಂಬ ಪ್ರಶ್ನೆ ಕೇಳಲಾಗುತ್ತಿತ್ತು. ಈಗ ವೈ-ಫೈ ಇದೆಯಾ ಎಂಬ ಪ್ರಶ್ನೆ ಕೇಳುವ ಪರಿಸ್ಥಿತಿ ಬಂದಿದೆ. ಇದು ಕೇವಲ ತಂತ್ರಜ್ಞಾನ ಬದಲಾವಣೆಯಲ್ಲ; ಕುಟುಂಬದ ಸಂವಹನದ ಸ್ವರೂಪದಲ್ಲಾದ ಬದಲಾವಣೆ.

ಮೊಬೈಲ್‌ನ ಮತ್ತೊಂದು ದೊಡ್ಡ ಪರಿಣಾಮವೆಂದರೆ ಹೋಲಿಕೆಯ ಮನೋಭಾವ. ಸಾಮಾಜಿಕ ಜಾಲತಾಣದಲ್ಲಿ ಪ್ರತಿಯೊಬ್ಬರೂ ತಮ್ಮ ಬದುಕಿನ ಸುಂದರ ಭಾಗವನ್ನೇ ತೋರಿಸುತ್ತಾರೆ. ಪ್ರವಾಸದ ಚಿತ್ರ, ಹೊಸ ಕಾರು, ಹೊಸ ಮನೆ, ಯಶಸ್ಸಿನ ಕ್ಷಣ, ಸಂತೋಷದ ಕುಟುಂಬ ಎಲ್ಲವೂ ಪರದೆಯಲ್ಲಿ ಹೊಳೆಯುತ್ತವೆ. ಆದರೆ ಆ ಚಿತ್ರದ ಹಿಂದೆ ಇರುವ ಸಾಲ, ಒತ್ತಡ, ಕಣ್ಣೀರು, ವೈಯಕ್ತಿಕ ಹೋರಾಟಗಳು ಕಾಣಿಸುವುದಿಲ್ಲ. ಆದರೂ ಅದನ್ನು ನೋಡಿದ ವ್ಯಕ್ತಿ ತನ್ನ ಬದುಕನ್ನು ಮತ್ತೊಬ್ಬರ ಬದುಕಿನೊಂದಿಗೆ ಹೋಲಿಸಲು ಆರಂಭಿಸುತ್ತಾನೆ. ಅವನಿಗೆ ಎಲ್ಲವೂ ಇದೆ, ನನಗೇನು ಇಲ್ಲ ಎಂಬ ಪ್ರಶ್ನೆ ಮನಸ್ಸಿನಲ್ಲಿ ಹುಟ್ಟುತ್ತದೆ. ಹೀಗೆ ಸಾಮಾಜಿಕ ಜಾಲತಾಣದ ಕೃತಕ ಪರಿಪೂರ್ಣತೆ ನಿಜ ಜೀವನದ ಸಂತೋಷವನ್ನು ನಿಧಾನವಾಗಿ ಕಸಿದುಕೊಳ್ಳಬಹುದು.

2026ರಲ್ಲಿ ಪ್ರಕಟವಾದ ಬೆಂಗಳೂರಿನ ಓಖಒಊಂಖನ ಸಂಶೋಧಕರ ಅಧ್ಯಯನವೊಂದು 18ರಿಂದ 25 ವರ್ಷದ 779 ಭಾರತೀಯ ಯುವಕರನ್ನು ಪರಿಶೀಲಿಸಿದ್ದು, ಸಮಸ್ಯಾತ್ಮಕ ಸಾಮಾಜಿಕ ಮಾಧ್ಯಮ ಬಳಕೆ ಖಿನ್ನತೆ, ಆತಂಕ ಮತ್ತು ಒತ್ತಡದ ಅಂಕಗಳೊಂದಿಗೆ ಗಮನಾರ್ಹವಾಗಿ ಸಂಬಂಧಿಸಿದೆ ಎಂದು ವರದಿ ಮಾಡಿದೆ. ಆದರೆ ಇದೇ ಅಧ್ಯಯನವು ಸಾಮಾನ್ಯ ಸ್ಮಾರ್ಟ್‌ಫೋನ್ ಬಳಕೆ ಮತ್ತು ಸಮಸ್ಯಾತ್ಮಕ ಸಾಮಾಜಿಕ ಮಾಧ್ಯಮ ಬಳಕೆ ಎರಡನ್ನೂ ಒಂದೇ ರೀತಿಯಲ್ಲಿ ನೋಡುವುದು ಸರಿಯಲ್ಲ ಎಂಬುದನ್ನೂ ಸೂಚಿಸುತ್ತದೆ. ಅಂದರೆ ತಂತ್ರಜ್ಞಾನವನ್ನೇ ದೂಷಿಸುವುದಕ್ಕಿಂತ ಅದರ ಬಳಕೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ.

ನಮ್ಮ ನಿದ್ರೆಯ ಮೇಲೂ ಮೊಬೈಲ್‌ನ ಪ್ರಭಾವವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ರಾತ್ರಿ ಹಾಸಿಗೆಯಲ್ಲಿದ್ದರೂ ಮೊಬೈಲ್ ಪರದೆ ನೋಡುತ್ತಾ ಸಮಯ ಕಳೆಯುವುದು, ನೋಟಿಫಿಕೇಶನ್‌ಗಳಿಗಾಗಿ ಮತ್ತೆ ಮತ್ತೆ ಎಚ್ಚರಗೊಳ್ಳುವುದು, ಬೆಳಗ್ಗೆಯವರೆಗೂ ವಿಡಿಯೋ ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ತೊಡಗಿರುವುದು ದೇಹದ ವಿಶ್ರಾಂತಿಗೆ ಅಡ್ಡಿಯಾಗಬಹುದು. 2026ರ ಭಾರತೀಯ ಅಧ್ಯಯನಗಳ ವಿಮರ್ಶೆಯಲ್ಲಿಯೂ ಅತಿಯಾದ ಸ್ಮಾರ್ಟ್‌ಫೋನ್ ಮತ್ತು ಸಾಮಾಜಿಕ ಮಾಧ್ಯಮ ಬಳಕೆಯೊಂದಿಗೆ ಕಣ್ಣುಗಳ ಒತ್ತಡ, ದೈಹಿಕ ಅಸೌಕರ್ಯ, ಆತಂಕ, ಒತ್ತಡ ಮತ್ತು ನಿದ್ರೆಯ ಗುಣಮಟ್ಟ ಕುಸಿತದಂತಹ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿದೆ.

ಆದರೆ ಇಲ್ಲಿ ಮತ್ತೊಂದು ಸತ್ಯವನ್ನೂ ಮರೆಯಬಾರದು. ಮೊಬೈಲ್ ನಮ್ಮ ಜೀವನವನ್ನು ಹಾಳುಮಾಡುವ ಸಾಧನ ಮಾತ್ರವಲ್ಲ; ಸರಿಯಾಗಿ ಬಳಸಿದರೆ ಜೀವನವನ್ನು ರೂಪಿಸುವ ಸಾಧನವೂ ಹೌದು. ಒಬ್ಬ ವಿದ್ಯಾರ್ಥಿ ಮೊಬೈಲ್ ಮೂಲಕ ವಿಶ್ವದ ಅತ್ಯುತ್ತಮ ಶಿಕ್ಷಕರ ಪಾಠಗಳನ್ನು ಕಲಿಯಬಹುದು. ಒಬ್ಬ ಯುವಕ ತನ್ನ ಕೌಶಲ್ಯವನ್ನು ಆನ್‌ಲೈನ್ ಮೂಲಕ ಜಗತ್ತಿಗೆ ಪರಿಚಯಿಸಬಹುದು. ಒಬ್ಬ ಸಣ್ಣ ವ್ಯಾಪಾರಿ ತನ್ನ ಉತ್ಪನ್ನವನ್ನು ದೂರದ ಗ್ರಾಹಕರಿಗೆ ತಲುಪಿಸಬಹುದು. ಒಬ್ಬ ರೈತ ಮಾರುಕಟ್ಟೆ ಬೆಲೆಗಳನ್ನು ತಿಳಿದುಕೊಳ್ಳಬಹುದು. ಒಬ್ಬ ಉದ್ಯೋಗಿ ಹೊಸ ತಂತ್ರಜ್ಞಾನ ಕಲಿತು ತನ್ನ ವೃತ್ತಿಜೀವನವನ್ನು ಬೆಳೆಸಬಹುದು. ಹೀಗಾಗಿ ಪ್ರಶ್ನೆ ಮೊಬೈಲ್ ಒಳ್ಳೆಯದೋ ಕೆಟ್ಟದ್ದೋ ಎಂಬುದಲ್ಲ. ನಾವು ಮೊಬೈಲ್ ಅನ್ನು ಹೇಗೆ ಬಳಸುತ್ತಿದ್ದೇವೆ ಎಂಬುದೇ ನಿಜವಾದ ಪ್ರಶ್ನೆ.

ತಂತ್ರಜ್ಞಾನವನ್ನು ತಿರಸ್ಕರಿಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ತಂತ್ರಜ್ಞಾನವನ್ನು ನಿಯಂತ್ರಿತವಾಗಿ ಬಳಸುವುದನ್ನು ಕಲಿಯಬೇಕು. ದಿನದಲ್ಲಿ ಕೆಲವು ಸಮಯವನ್ನು ಮೊಬೈಲ್ ಮುಕ್ತ ಸಮಯ ವನ್ನಾಗಿ ಮಾಡಬಹುದು. ಊಟದ ಸಮಯದಲ್ಲಿ ಮೊಬೈಲ್ ಬದಿಗಿಡಬಹುದು. ಮಲಗುವ ಮುನ್ನ ಸ್ವಲ್ಪ ಸಮಯ ಪರದೆಗಳಿಂದ ದೂರವಿರಬಹುದು. ಕುಟುಂಬದೊಂದಿಗೆ ಮಾತನಾಡುವಾಗ ಮೊಬೈಲ್‌ಗಿಂತ ಎದುರಿನ ವ್ಯಕ್ತಿಯ ಮುಖವನ್ನು ನೋಡಬಹುದು. ವಾರದಲ್ಲಿ ಒಂದು ದಿನ ಪ್ರಕೃತಿಯೊಂದಿಗೆ, ಪುಸ್ತಕದೊಂದಿಗೆ ಅಥವಾ ಕುಟುಂಬದೊಂದಿಗೆ ಹೆಚ್ಚು ಸಮಯ ಕಳೆಯಬಹುದು. ಇಂತಹ ಸಣ್ಣ ಬದಲಾವಣೆಗಳು ದೊಡ್ಡ ಪರಿಣಾಮವನ್ನು ಉಂಟುಮಾಡಬಹುದು.

ಶಾಲೆಗಳಲ್ಲಿಯೂ ಡಿಜಿಟಲ್ ಸಾಕ್ಷರತೆ ಕೇವಲ ಕಂಪ್ಯೂಟರ್ ಕಲಿಸುವುದಕ್ಕೆ ಸೀಮಿತವಾಗಬಾರದು. ಮಕ್ಕಳಿಗೆ ಆನ್‌ಲೈನ್ ಸುರಕ್ಷತೆ, ಸುಳ್ಳು ಸುದ್ದಿಯನ್ನು ಗುರುತಿಸುವುದು, ವೈಯಕ್ತಿಕ ಮಾಹಿತಿಯನ್ನು ರಕ್ಷಿಸುವುದು, ಸೈಬರ್‌ಬುಲಿಯಿಂಗ್‌ನಿಂದ ದೂರವಿರುವುದು ಮತ್ತು ಸಾಮಾಜಿಕ ಮಾಧ್ಯಮದ ಜವಾಬ್ದಾರಿಯುತ ಬಳಕೆಯ ಬಗ್ಗೆ ತಿಳಿಸಬೇಕು. 2026ರ ಶಾಲಾ ಅಧ್ಯಯನವೊಂದರಲ್ಲಿ 10ರಿಂದ 16 ವರ್ಷದ 960 ಮಕ್ಕಳ ಡಿಜಿಟಲ್ ಬಳಕೆಯನ್ನು ಪರಿಶೀಲಿಸಿ, ಇಂಟರ್ನೆಟ್ ಬಳಕೆಯ ಪ್ರಮಾಣ ಮತ್ತು ಅಪಾಯಕಾರಿ ಆನ್‌ಲೈನ್ ವರ್ತನೆಗಳ ನಡುವೆ ಸಂಬಂಧವಿರುವುದನ್ನು ಗಮನಿಸಲಾಗಿದೆ. ಇಂತಹ ಅಧ್ಯಯನಗಳು ಮಕ್ಕಳಿಗೆ ಕೇವಲ ಸಾಧನ ನೀಡುವುದಕ್ಕಿಂತ ಡಿಜಿಟಲ್ ಜವಾಬ್ದಾರಿಯನ್ನೂ ಕಲಿಸುವ ಅಗತ್ಯವನ್ನು ತೋರಿಸುತ್ತವೆ.

ಪೋಷಕರ ಜವಾಬ್ದಾರಿಯೂ ಅಷ್ಟೇ ದೊಡ್ಡದು. ಮಕ್ಕಳನ್ನು ನಿಯಂತ್ರಿಸುವುದಕ್ಕಿಂತ ಅವರೊಂದಿಗೆ ಸಂಭಾಷಣೆ ನಡೆಸಬೇಕು. ಏನು ನೋಡುತ್ತಿದ್ದೀಯ ಎಂದು ಅನುಮಾನದಿಂದ ಕೇಳುವುದಕ್ಕಿಂತ ಇಂದು ಮೊಬೈಲ್‌ನಲ್ಲಿ ಏನು ಕಲಿತೆ ಎಂದು ಕುತೂಹಲದಿಂದ ಕೇಳಬೇಕು. ಅವರ ಆನ್‌ಲೈನ್ ಜಗತ್ತನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಮಕ್ಕಳಿಗೆ ಮೊಬೈಲ್ ಕೊಟ್ಟು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಾರದು. ಮಗುವಿನ ಅಳುವನ್ನು ನಿಲ್ಲಿಸಲು ಮೊಬೈಲ್ ಕೊಡುವುದು ಸುಲಭ; ಆದರೆ ಆ ಮಗುವಿನೊಂದಿಗೆ ಕುಳಿತು ಮಾತನಾಡುವುದು, ಆಟವಾಡುವುದು ಮತ್ತು ಅದರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಕಷ್ಟ. ಆದರೆ ಆ ಕಷ್ಟವನ್ನೇ ಪೋಷಕರು ಸ್ವೀಕರಿಸಬೇಕಾಗಿದೆ.

ಇಂದಿನ ಮನುಷ್ಯನಿಗೆ ಒಂದು ವಿಚಿತ್ರ ವ್ಯಸನವಿದೆ ಯಾವುದೇ ಕ್ಷಣವನ್ನು ಮೌನವಾಗಿ ಅನುಭವಿಸಲು ಸಾಧ್ಯವಾಗುತ್ತಿಲ್ಲ. ಬಸ್‌ಗಾಗಿ ಕಾಯುತ್ತಿದ್ದರೂ ಮೊಬೈಲ್, ಊಟ ಮುಗಿಯುವವರೆಗೂ ಮೊಬೈಲ್, ಯಾರಾದರೂ ತಡವಾಗಿ ಬಂದರೂ ಮೊಬೈಲ್, ರಸ್ತೆಯಲ್ಲಿ ನಡೆಯುತ್ತಿದ್ದರೂ ಮೊಬೈಲ್. ಖಾಲಿ ಸಮಯ ಬಂದರೆ ಮೊಬೈಲ್ ತೆಗೆದುಕೊಳ್ಳುತ್ತೇವೆ. ಆದರೆ ಖಾಲಿ ಸಮಯವೇ ಕೆಲವೊಮ್ಮೆ ನಮ್ಮ ಮನಸ್ಸಿಗೆ ವಿಶ್ರಾಂತಿ ನೀಡುವ ಸಮಯ. ಮೌನದಲ್ಲಿ ಕುಳಿತುಕೊಳ್ಳುವುದು, ಸುತ್ತಮುತ್ತಲಿನ ಜಗತ್ತನ್ನು ಗಮನಿಸುವುದು, ನಮ್ಮೊಳಗಿನ ಮಾತುಗಳನ್ನು ಕೇಳುವುದು ಇವುಗಳಿಗೂ ಜೀವನದಲ್ಲಿ ಜಾಗ ಬೇಕು.

ಒಂದು ಕಾಲದಲ್ಲಿ ಜನರು ಸಮಯವಿಲ್ಲ ಎಂದು ಹೇಳುತ್ತಿದ್ದರು. ಇಂದು ನಮ್ಮ ಬಳಿ ಸಮಯವಿದೆ; ಆದರೆ ಅದನ್ನು ಪರದೆ ಕದ್ದುಕೊಳ್ಳುತ್ತಿದೆ. ಒಂದು ದಿನದಲ್ಲಿ 24 ಗಂಟೆಗಳು ಎಲ್ಲರಿಗೂ ಸಮಾನ. ಶ್ರೀಮಂತರಿಗೂ ಅಷ್ಟೇ, ಬಡವರಿಗೂ ಅಷ್ಟೇ, ಯಶಸ್ವಿಗಳಿಗೂ ಅಷ್ಟೇ, ಸಾಮಾನ್ಯರಿಗೂ ಅಷ್ಟೇ. ವ್ಯತ್ಯಾಸವೆಂದರೆ ಆ ಸಮಯವನ್ನು ಯಾರು ಹೇಗೆ ಬಳಸುತ್ತಾರೆ ಎಂಬುದರಲ್ಲಿ. ಮೊಬೈಲ್ ನಮ್ಮ ಸಮಯವನ್ನು ಕದ್ದುಕೊಳ್ಳುತ್ತಿದ್ದರೆ, ಅದು ಕೇವಲ ಸಾಧನದ ಸಮಸ್ಯೆಯಲ್ಲ; ನಮ್ಮ ಆದ್ಯತೆಗಳ ಸಮಸ್ಯೆಯೂ ಹೌದು.

ನಮ್ಮ ಕೈಯಲ್ಲಿರುವ ಮೊಬೈಲ್ ಒಂದು ಚಿಕ್ಕ ಸಾಧನ. ಆದರೆ ಅದರೊಳಗೆ ಜಗತ್ತೇ ಇದೆ. ಜ್ಞಾನವೂ ಇದೆ, ಮನರಂಜನೆಯೂ ಇದೆ, ಅವಕಾಶವೂ ಇದೆ, ಅಪಾಯವೂ ಇದೆ. ಅದನ್ನು ಹೇಗೆ ಬಳಸುತ್ತೇವೆ ಎಂಬುದು ನಮ್ಮ ಕೈಯಲ್ಲಿದೆ. ಚಾಕು ಅಡುಗೆಗೆ ಸಹಾಯ ಮಾಡಬಹುದು; ಅದೇ ಚಾಕು ತಪ್ಪಾಗಿ ಬಳಸಿದರೆ ಗಾಯ ಮಾಡಬಹುದು. ಹಾಗೆಯೇ ಮೊಬೈಲ್ ಕೂಡ. ಸಾಧನವನ್ನು ದೂಷಿಸುವುದಕ್ಕಿಂತ ಬಳಕೆದಾರನ ಜವಾಬ್ದಾರಿಯನ್ನು ಬೆಳೆಸಬೇಕು.

ಕೊನೆಗೆ ನಾವು ನಮ್ಮನ್ನೇ ಒಂದು ಪ್ರಶ್ನೆ ಕೇಳಿಕೊಳ್ಳಬೇಕು ಮೊಬೈಲ್ ನಮ್ಮ ಕೈಯಲ್ಲಿದೆಯೇ ಅಥವಾ ನಮ್ಮ ಸಮಯ, ನಮ್ಮ ಗಮನ, ನಮ್ಮ ಸಂಬಂಧಗಳು ಮತ್ತು ನಮ್ಮ ಮನಸ್ಸು ಮೊಬೈಲ್‌ನ ಕೈಯಲ್ಲಿದೆಯೇ ಈ ಪ್ರಶ್ನೆಗೆ ಪ್ರಾಮಾಣಿಕವಾಗಿ ಉತ್ತರಿಸುವ ಸಮಯ ಬಂದಿದೆ. ಮೊಬೈಲ್ ನಮ್ಮ ಜೀವನದ ಒಂದು ಭಾಗವಾಗಿರಲಿ; ಜೀವನವೇ ಆಗಬಾರದು. ಸಾಮಾಜಿಕ ಜಾಲತಾಣ ನಮ್ಮ ಸಂಪರ್ಕದ ಒಂದು ಮಾರ್ಗವಾಗಿರಲಿ; ನಿಜವಾದ ಸಂಬಂಧಗಳಿಗೆ ಪರ್ಯಾಯವಾಗಬಾರದು. ಆನ್‌ಲೈನ್ ಜಗತ್ತು ನಮ್ಮ ಜ್ಞಾನವನ್ನು ವಿಸ್ತರಿಸಲಿ; ನಮ್ಮ ನೈಜ ಜಗತ್ತನ್ನು ಕುಗ್ಗಿಸಬಾರದು.

ಮಕ್ಕಳ ಕೈಯಲ್ಲಿ ಮೊಬೈಲ್ ಇರಬಹುದು; ಆದರೆ ಅವರ ಬಾಲ್ಯ ಮೊಬೈಲ್ ಪರದೆಯಲ್ಲಿ ಕಳೆದುಹೋಗಬಾರದು. ಯುವಕರ ಕೈಯಲ್ಲಿ ಸ್ಮಾರ್ಟ್‌ಫೋನ್ ಇರಬಹುದು; ಆದರೆ ಅವರ ಕನಸುಗಳು ರೀಲ್‌ಗಳ ನಡುವೆ ಸಿಲುಕಿಕೊಳ್ಳಬಾರದು. ಹಿರಿಯರ ಕೈಯಲ್ಲಿ ಮೊಬೈಲ್ ಇರಬಹುದು; ಆದರೆ ಕುಟುಂಬದೊಂದಿಗೆ ಮಾತನಾಡುವ ಸಮಯವನ್ನು ಅದು ಕಸಿದುಕೊಳ್ಳಬಾರದು. ತಂತ್ರಜ್ಞಾನ ಬೆಳೆಯಲಿ, ಡಿಜಿಟಲ್ ಭಾರತ ಬೆಳೆಯಲಿ, ಹೊಸ ಆವಿಷ್ಕಾರಗಳು ಬರಲಿ; ಆದರೆ ಅದರ ನಡುವೆ ಮನುಷ್ಯ ತನ್ನ ಮಾನವೀಯತೆಯನ್ನು ಕಳೆದುಕೊಳ್ಳಬಾರದು. ಮೊಬೈಲ್ ನಮ್ಮ ಸೇವಕವಾಗಿರಬೇಕು, ಮಾಲೀಕನಾಗಬಾರದು.

ಜೀವನವನ್ನು ಪರದೆಯ ಮೂಲಕ ನೋಡುವುದಕ್ಕಿಂತ, ಕೆಲವೊಮ್ಮೆ ಮೊಬೈಲ್‌ನ್ನು ಬದಿಗಿಟ್ಟು ಜೀವನವನ್ನೇ ನೇರವಾಗಿ ನೋಡೋಣ. ಮಗುವಿನ ನಗುವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದಕ್ಕಿಂತ ಮೊದಲು ಅದನ್ನು ಕಣ್ಣಾರೆ ಅನುಭವಿಸೋಣ. ಪ್ರಕೃತಿಯ ಚಿತ್ರ ತೆಗೆಯುವುದಕ್ಕಿಂತ ಮೊದಲು ಅದರ ಸೌಂದರ್ಯವನ್ನು ಮನಸ್ಸಿನಲ್ಲಿ ತುಂಬಿಕೊಳ್ಳೋಣ. ಕುಟುಂಬದ ಫೋಟೋ ತೆಗೆದುಕೊಳ್ಳುವುದಕ್ಕಿಂತ ಮೊದಲು ಕುಟುಂಬದವರೊಂದಿಗೆ ಮಾತುಕತೆ ನಡೆಸೋಣ. ಸ್ನೇಹಿತನ ಪೋಸ್ಟ್‌ಗೆ ಲೈಕ್ ಮಾಡುವುದಕ್ಕಿಂತ, ಅವನಿಗೆ ನಿಜವಾಗಿಯೂ ಅಗತ್ಯವಿದ್ದಾಗ ಕೈ ಹಿಡಿಯೋಣ.

ಏಕೆಂದರೆ ಕೊನೆಗೆ ನಮ್ಮ ಜೀವನದ ನೆನಪುಗಳು ಮೊಬೈಲ್‌ನ ಗ್ಯಾಲರಿಯಲ್ಲಿ ಮಾತ್ರ ಉಳಿಯುವುದಿಲ್ಲ; ನಾವು ಪ್ರೀತಿಸಿದವರ ಹೃದಯದಲ್ಲೂ ಉಳಿಯುತ್ತವೆ. ಪರದೆ ಆಫ್ ಮಾಡಿದ ನಂತರವೂ ನಮ್ಮ ಬದುಕು ಮುಂದುವರಿಯಬೇಕು. ಮೊಬೈಲ್ ಬ್ಯಾಟರಿ ಖಾಲಿಯಾದಾಗ ನಮ್ಮ ಸಂತೋಷವೂ ಖಾಲಿಯಾಗಬಾರದು. ಇಂಟರ್ನೆಟ್ ಸಂಪರ್ಕ ಕಡಿತವಾದಾಗ ನಮ್ಮ ಸಂಬಂಧಗಳೂ ಕಡಿತವಾಗಬಾರದು. ತಂತ್ರಜ್ಞಾನವನ್ನು ಬಳಸೋಣ; ತಂತ್ರಜ್ಞಾನಕ್ಕೆ ನಮ್ಮನ್ನು ಬಳಸಿಕೊಳ್ಳಲು ಬಿಡಬೇಡೋಣ. ಮೊಬೈಲ್ ಕೈಯಲ್ಲಿರಲಿ, ಮನಸ್ಸು ಮಾತ್ರ ನಮ್ಮ ಕೈಯಲ್ಲಿರಲಿ.


---

## ಕಲಿಕೆಯ ಜೀವಿತದ ಸಾರಸರ್ವಸ್ವ

### ಮುದ್ದುರಾಮನ ಅರಿವು ಭಾಗ- 2



ಡಾ. ಪ್ರದೀಪಕುಮಾರ ಹೆಬ್ರಿ




**ಅಧ್ಯಯನಶೀಲತೆಗೆ ಮೀಸಲಿದ್ದರೆ ಬಾಲ್ಯ**
**ಬೆಳಗದಿರುವುದೆ ಬಾಳು ಮುಂಬರುವ ದಿನದಿ**
**'ಚಿಕ್ಕಂದಿನ ವಿದ್ಯೆ ಪೊರಗು' ಎಂಬ ನುಡಿ ಸತ್ಯ;**
**ವಿದ್ಯೆ ಆಲಂಬನವೊ!– ಮುದ್ದುರಾಮ**

ನಾಳೆಯ ಬದುಕಿನ ಬಗ್ಗೆ ಇಂದಿನಿಂದಲೆ ಯೋಚಿಸಲು ಮುಂದಾದರೆ ಅದಕ್ಕೆ ಧನ್ವಂತರಿಯಾಗಿ ಗೋಚರಿಸುವುದು ಅಧ್ಯಯನಶೀಲತೆ. ಅಧ್ಯಯನ ಎಂದರೆ ಕೇವಲ ಓದುವುದಲ್ಲ, ಓದಿದುದನ್ನು ಅರಿವಾಗಿ ಮನದಲ್ಲಿ ದಾಖಲಿಸುವುದು. ನಮ್ಮೀ ಬದುಕು ಜೋಕಾಲಿಯಂತೆ, ಏರುವುದು– ಇಳಿಯುವುದು, ಸೋಲು– ಗೆಲುವು ಸಹಜ. ಹಾಗಾಗಿ ವಿದ್ಯೆ ಕಲಿತಂತೆ ಬದುಕಗಾಗ ಮೇರು ಎಂದರಿತು ನಮ್ಮ ಸಭ್ಯತೆಯ ಜೀವನಕೆ ವಿದ್ಯೆಯೇ ಅಡಿಗಲ್ಲು ಎಂದಾಗಿಸಬೇಕು. ಆಗ ವಿದ್ಯೆ ಚೈತನ್ಯಮಯವಾಗಿ ಕಂಗೊಳಿಸುತ್ತದೆ.


ಅರಿವು ಗುರುವಾಗಬೇಕಾದರೆ 'ಓದು' ಅನಿವಾರ್ಯ ಮತ್ತು ಅವಶ್ಯಕ. ವ್ಯಕ್ತಿತ್ವ ವಿಕಸನಕ್ಕೆ ಅತ್ಯಗತ್ಯವಾದುದೇ ಅರಿವು. ಅರಿವಿನಾಗರ ಒಂದು ಸಂಸ್ಕೃತಿಯ ತವರೂರು ಎಂದು ಪರಿಭಾವಿಸಿ ವಿದ್ಯೆಯನ್ನು ಅಪ್ಪಿ ಒಪ್ಪಿಕೊಂಡರೆ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯ. ಬದುಕನ್ನು ಮೇರೆತ್ತರಕ್ಕೇರಿಸಲು ಸಾಧ್ಯ. ಆಗ ನಮ್ಮ ಬದುಕು ಹಿರಿದಾದ ಅಕ್ಷರಧಾಮ ಎನಿಸುತ್ತದೆ. ಕವಿಯ ಮಾತನ್ನು ಮರೆಯಬಾರದು:–

**ಬೀಜದಿಂ ಸಸಿ ಎಂತೊ, ರುಚಿ ಅಂತೆ ಫಲದಿಂದ;**
**ವಿದ್ಯೆ ಅಕ್ಷರದಿಂದ, ಬಾಳು ಉಸಿರಿಂದ**

ಬಸವಣ್ಣನವರ ವಚನವನ್ನು ವಿದ್ಯೆಯ ಸಂಪನ್ನತೆಗೆ ಅಳವಡಿಸಿ ಸ್ವಲ್ಪ ಹೊಸರೀತಿಯಲ್ಲಿ ಹೇಳುವುದಾದರೆ, ಕಲ್ಲೊಳಗೆ ಹೊನ್ನುಂಟು/ಹಾಲೊಳಗೆ ತುಪ್ಪವುಂಟು/ಮರದೊಳಗೆ ಅಗ್ನಿಯುಂಟು/ಅಂತರ್ಯಾಮಿಯಲ್ಲಿ ಶಿವನಿಹನು/ನಿಜದರಿವ ತುಂಬಿಸುವ ವರಶಕ್ತಿಯೇ ಗುರುರೂಪೀ ವಿದ್ಯೆ//

ವಿದ್ಯೆ ಯಾವುದೇ ಇರಲಿ ಅಭ್ಯಾಸ ನಿರಂತರವಾಗಿರಬೇಕು. ವಿದ್ಯೆ ನಮ್ಮ ಕಲ್ಪನಾಶಕ್ತಿಯನ್ನು ಹೆಚ್ಚಿಸಿ ಸೃಜನಶೀಲತೆಯನ್ನು ಬೆಳೆಸುತ್ತದೆ. ನನಗೆ ವಿದ್ಯೆಯ ಅಗತ್ಯವೇ ಇಲ್ಲ ಭಾವವಿದ್ದಲ್ಲಿ ಕವಿ ಪ್ರಶ್ನಿಸುತ್ತಾರೆ,ಮುಚ್ಚಿದರೆ ಕದ ಕಿಟಕಿ ಬೆಳಕೆಲ್ಲಿ ಕೋಣೆಯಲಿ ಎಂದು. ನಾವು ಎಷ್ಟೇ ದುಡಿಮೆಯವರಾಗಿರಬಹುದು,ಹಣ ಸಂಪಾದಿಸಬಹುದು, ಆದರೆ ವಿದ್ಯಾಶೂನ್ಯರಾಗುವುದು ಖಚಿತ. ಹಾಗಾಗಿ ನಮ್ಮ ಉಸಿರು ದನಿಯಾದಾಗ ನುಡಿಯುವುದು,ಶಾಸ್ತ್ರಮನನವೆ ತಿಳಿವು ಎಂದು.

ವಿದ್ಯೆಯಿಂದ ದೂರವಿದ್ದಲ್ಲಿ ವಿವಿಧ ಸಂಸ್ಕೃತಿ, ಜನರ ಜೀವನ– ದೃಷ್ಟಿಕೋನದ ಅರಿವು ದುಸ್ಸಾಧ್ಯ. ಜವಾಬ್ದಾರಿಯುತ ತಿಳಿವಳಿಕೆಯೂ ಹಗಲುಗನಸು. ಓದುವಿಕೆಯೇ ತಾನೂ ಬೆಳೆದು, ಇತರರನ್ನೂ ಬೆಳೆಸುವಲ್ಲಿ ಭದ್ರ ಬುನಾದಿ. ಬದುಕಿನಲ್ಲಿ ಬಂದದ್ದು, ಹೋದದ್ದು, ಉಳಿದದ್ದು ಅರಿವಿದ್ದರೆ ಮಾತ್ರ ಶಾಸ್ತ್ರಮನವೆ ತಿಳಿವು ಎಂದಾಗಿ ತಳಸ್ಪರ್ಶಿ ಅಧ್ಯಯನಕ್ಕೆ ಹುಮ್ಮಸ್ಸು ತುಂಬಿ *ವಿದ್ವತ್ತು ನಮ್ಮದಾಗುತ್ತದೆ. ವ್ಯವಹಾರಕ್ಕೆ ಲೆಕ್ಕಾಚಾರದ ಕುರಿತು ಅರಿವು ಬೇಕಿರುವಂತೆ ನಿದ್ದೆಯನ್ನು ದೂಡಿ ಬೇಗನೇ ಎದ್ದು ಪ್ರಾರ್ಥನೆಗೆ ಅಣಿಯಾದಾಗ ಸೂರ್ಯೋದಯ ದ ವಿದ್ಯೆಯ ಬೆಳಕ ಕಿರಣವಾಗಿ ಮೊಸರಿಂದ ನವನೀತ, ನಡೆಯಿಂದ ಉತ್ಥಾನ ದ ಚೈತನ್ಯಪುರುಷರು ನಾವಾಗಿ ಪ್ರಜ್ವಲಿಪ ಕಿರಣಗಳಾಗುತ್ತೇವೆ.



ಕ.ಸಿ.ಶಿವಪ್ಪ

---

## ಹೊಂದಾಣಿಕೆಯೇ ಜೀವನ

ಸ್ನೇಹ ಲೋಕ



| ಸ್ನೇಹಾ ಆನಂದ್

ಹೆಣ್ಣಿಲ್ಲದ ಮನೆ ತೋರಣವಿಲ್ಲದ ಬಾಗಿಲಂತೆ ತೋರಿದರೆ, ಗಂಡಿಲ್ಲದ ಮನೆ ಗರಬಡಿದಂತೆ ಅನಿಸುವುದು! ಹೀಗಾಗಿ ಪ್ರತಿಯೊಂದು ಹೆಣ್ಣಿಗೂ ಗಂಡಿನ ಅವಶ್ಯಕತೆ ಇದೆ, ಅದೇ ರೀತಿ ಗಂಡಿಗೂ ಹೆಣ್ಣು ಯಾವಾಗಲೂ ಜೊತೆಯಿರಲೇಬೇಕು! ಇದನ್ನು ತಿಳಿದರೆ ಮಾತ್ರ ಒಬ್ಬರ ಮನಸ್ಸನ್ನೊಬ್ಬರು ಅರ್ಥಮಾಡಿಕೊಂಡು ಸಾಗುತ್ತಾರೆ!

ಗಂಡೇ ಮೇಲು ಎನ್ನುವುದು ಖಂಡಿತಾ ಸರಿ ಅಲ್ಲ! ಅದರಂತೆ ಹೆಣ್ಣು ಕೂಡ ನಾನೇ ಮೇಲು ಎನ್ನುವುದು ಕೂಡ ಬೇಕಿಲ್ಲ! ದರ್ಪ, ಅಹಂಕಾರದ ಮಾತು ಆಡಿದರೆ ಯಾರೂ ಯಾರನ್ನೂ ತಡೆದುಕೊಳ್ಳಲು ಸಾಧ್ಯವಿಲ್ಲ! ಒಬ್ಬರು ಯಾವಾಗಲೂ ಇನ್ನೊಬ್ಬರನ್ನು ಕ್ಷಮಿಸುತ್ತಾ ಹೋಗುವುದು ಮನಸ್ಸಿಗೆ ತುಂಬಾ ಅಸಹನೀಯವೆನಿಸುತ್ತದೆ!


ಯಾವುದೇ ಗಾಡಿಗೆ ಆಗಲಿ ಒಂದು ಚಿಕ್ಕದು ಒಂದು ದೊಡ್ಡದು ಗಾಲಿ ಹಾಕಿ ಓಡಿಸಲು ಸಾಧ್ಯವೇ, ಎರಡೂ ಸಮವಾಗಿದ್ದರೇ ತಾನೇ ಗಾಡಿಯನ್ನು ಸರಿಯಾಗಿ ಓಡಿಸಬಹುದು!

ಅದೇ ರೀತಿಯಲ್ಲಿ ಬದುಕಿನ ಬಂಡಿಗೆ ಹೆಣ್ಣು, ಗಂಡು ಎರಡು ಚಕ್ರವಿದ್ದಂತೆ !

ತಮ್ಮ, ತಮ್ಮ ಕೆಲಸವನ್ನು ತಾವು ಅರಿತು ಮಾಡಿದರೆ ಜಗಳವೇ ಇರುವುದಿಲ್ಲ, ಒಬ್ಬರಿಗೊಬ್ಬರೂ ಸಹಾಯ ಮಾಡುವುದು ಅಷ್ಟೇ ಮುಖ್ಯ ಕೂಡ, ಇಲ್ಲದಿದ್ದರೆ ಮನದಲ್ಲಿ ಬೇಸರ, ಸಿಟ್ಟು ಕೂತು ಎಲ್ಲದಕ್ಕೂ ರೇಗಾಡುವ ಹಾಗಾಗುತ್ತದೆ!

ಹೆಣ್ಣು ತನ್ನ ಅತ್ತೆ ಮನೆಯವರಿಗೆ ಗೌರವ ಕೊಡುವಂತೆ ಗಂಡು ಕೂಡ ತನ್ನ ಅತ್ತೆ ಮನೆಯವರಿಗೆ ಅಷ್ಟೇ ಗೌರವ ಕೊಡಲೇ ಬೇಕು! ಆಗ ಮಾತ್ರ ಜೀವನದಲ್ಲಿ ಸರಿಯಾದ ಸಂಬಂಧಗಳು ಬೆಸೆಯುತ್ತವೆ!

ಪ್ರತಿಯೊಂದು ಮನೆಯ ದೋಸೆ ತೂತೇ



ಎನ್ನುವ ಹಾಗೆ ಸಣ್ಣಪುಟ್ಟ ವ್ಯತ್ಯಾಸಗಳು ಎಲ್ಲರ ಮನೆಯಲ್ಲೂ ಇರುತ್ತವೆ! ಪ್ರತಿಯೊಬ್ಬರ ಚಹರೆ ಹೇಗೆ ವಿಭಿನ್ನವೋ ಹಾಗೆ ಸ್ವಭಾವವೂ ವಿಭಿನ್ನ! ಭಿನ್ನತೆಯಲ್ಲಿಯೂ ಏಕತೆಯನ್ನು ಹುಡುಕುವುದೇ ಸಂಸಾರದ ಸುಂದರ ಸರಿಗಮ ಎನ್ನಬಹುದು!

ಪ್ರತಿಯೊಂದು ಮನೆಗಳಲ್ಲಿ ಅವರದೇ




ಆದ ಸಂಪ್ರದಾಯಗಳು ಇರುತ್ತವೆ ಇದರಿಂದ ಎಲ್ಲಿಯೋ ಹುಟ್ಟಿ ಬೆಳೆದ ಹೆಣ್ಣು,ಗಂಡು ಕೂಡಿ ಸಂಸಾರ ಮಾಡಬೇಕಾದರೆ ಇಬ್ಬರೂ ಇಬ್ಬರ ಸಂಪ್ರದಾಯಕ್ಕೆ ಬೆಲೆ ಕೊಡಬೇಕು!

ಜೀವನದಲ್ಲಿ ಪ್ರತಿಯೊಂದು ವಿಷಯದಲ್ಲೂ ಕೊಟ್ಟು ತೆಗೆದುಕೊಳ್ಳುವ ಸ್ವಭಾವ ಒಳ್ಳೆಯದು, ಇದು ಮೊದಲಿನ ಕಾಲದಲ್ಲಿ ಗಂಡು,ಹೆಣ್ಣಿನ ನಡುವೆ ಕಂಡು ಬರುತ್ತಿರಲಿಲ್ಲ, ಆದರೆ ಈಗ ಅದನ್ನು ಜನರು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆ ಅದೊಂದು ಸಂತಸದ ವಿಷಯವೇ ಸರಿ!

ಈ ನಡುವೆ ಕಾಲ ಬದಲಾವಣೆಯ ಸೂಚನೆಗಳು ಕಾಣುತ್ತಿವೆ, ಹೀಗಾಗಿ ಮದುವೆಯ ಎಲ್ಲಾ ಖರ್ಚುಗಳನ್ನು ಹೆಣ್ಣು ಹಾಗು ಗಂಡಿನ ಮನೆಯವರು ಸಂತೋಷದಿಂದ ಸಮವಾಗಿ ಹಂಚಿಕೊಳ್ಳುವ ವಿಶಾಲ ಮನೋಭಾವ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದೆ!

ಇದರಿಂದ ಹೆಣ್ಣು ಹೆತ್ತವರಿಗೆ ಸ್ವಲ್ಪ ಸಮಾಧಾನದಿಂದ ಉಸಿರಾಡುವಂತಾಗಿದೆ,

ಆದರೂ ಇನ್ನೂ ಸಂಪೂರ್ಣ ಪ್ರಮಾಣದಲ್ಲಿ ಕಂಡು ಬಂದರೆ ನಮ್ಮಿಂದ ಸಮಾಜಕ್ಕೊಂದು ಒಳ್ಳೆಯ ಕೊಡುಗೆ ಸಿಕ್ಕಂತೆ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,